ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಸೆಪ್ಟೆಂಬರ್ 24 ಭಾನುವಾರ 2023

ಸಂಪುಟ: 44 | ಸಂಚಿಕೆ: 159 | ಪುಟಗಳು: 12 | ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮೈಸೂರು ಮಿತ್ರ ಭಾನುವಾರ 24 ಸೆಪ್ಟೆಂಬರ್ 2023

ಆರ್‌ಎಸ್‌ಎಸ್ ಹಿರಿಯ ಸ್ವಯಂ ಸೇವಕ ಕೆ.ಪಿ.ಪ್ರದ್ಯುಮ್ನ ನಿಧನ



ಮೈಸೂರು,ಸೆ.23-ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಹಿರಿಯ ಸ್ವಯಂ ಸೇವಕ ಕೆ.ಪಿ. ಪ್ರದ್ಯುಮ್ನ (68) ಅವರು ತೀವ್ರ ಹೃದಯಾಘಾತದಿಂದ ಮೈಸೂರಿನ ಶ್ರೀರಾಂಪುರ ಎಸ್‌ಬಿಎಂ ಕಾಲೋನಿಯ ಸ್ವಗೃಹದಲ್ಲಿ ಶನಿವಾರ ಸಂಜೆ ನಿಧನರಾದರು. ಇವರು ಪತ್ನಿ, ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗ, ಸ್ನೇಹಿತರನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಭಾನುವಾರ ಬೆಳಗ್ಗೆ 11ಕ್ಕೆ ಅಂತ್ಯ ಸಂಸ್ಕಾರ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ. ವಿದ್ಯಾರ್ಥಿ ದೆಸೆಯಿಂದಲೇ ಆರ್‌ಎಸ್‌ಎಸ್ ಸ್ವಯಂ ಸೇವಕರಾಗಿದ್ದ ಪ್ರದ್ಯುಮ್ನ ಅವರು, ಸಂಘದ ಕಾರ್ಯಕ್ಕಾಗಿ ಎಸ್‌ಬಿಎಂ ಲೀಡ್ ಡಿಸ್ಟ್ರಿಕ್ಟ್ ಮ್ಯಾನೇಜರ್ ಹುದ್ದೆಯಿಂದ ಸ್ವಯಂ ನಿವೃತ್ತಿ ಪಡೆದಿದ್ದರು. ಸಂಘದ ವಿವಿಧ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಲ್ಲದೆ, ಅಂಗಸಂಸ್ಥೆಯಾದ ಓಜಸ್ ಚಾರಿಟೆಬಲ್ ಟ್ರಸ್ಟ್ ಕಾರ್ಯದರ್ಶಿಯಾಗಿ ಉಚಿತ ಊಟ-ವಸತಿಯೊಂದಿಗೆ ಗ್ರಾಮೀಣ ಬಡ ವಿದ್ಯಾರ್ಥಿಗಳನ್ನು ಯುಪಿಎಸ್‌ಸಿ ಪರೀಕ್ಷೆಗೆ ಸಜ್ಜುಗೊಳಿಸಲು ಶ್ರಮಿಸಿದ್ದರು. ಅಲ್ಲದೆ ಕಾಲೇಜು ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ನಡೆಸಿಕೊಡುತ್ತಿದ್ದರು.

ಬಿಳಿ ಗುಂಡ್ಲುಗೆ ರೈತ ಕಲ್ಯಾಣ ಸಂಘ ಭೇಟಿ

ಮೈಸೂರು, ಸೆ.23(ಬಿಎಲ್‌ಯು)- ರೈತ ಕಲ್ಯಾಣ ಸಂಘದ ಪದಾಧಿಕಾರಿಗಳು ತಮಿಳುನಾಡಿನ ಬಿಳಿಗುಂಡ್ಲು ಜಲಮಾಪನ ಕೇಂದ್ರಕ್ಕೆ ಭೇಟಿ ನೀಡಿ ಕಾವೇರಿ ನೀರಿನ ಮಾಪನದ ಬಗ್ಗೆ ಮಾಹಿತಿ ಪಡೆದರು. ಈ ವೇಳೆ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್‌ಗೌಡ, ಬಿಳಿಗುಂಡ್ಲುನಲ್ಲಿ ಕೇಂದ್ರ ಜಲ ಆಯೋಗ ಸ್ಥಾಪಿಸಿರುವ ನೀರು ಮಾಪನ ಕೇಂದ್ರದ ಮೂಲಗಳ ಪ್ರಕಾರ ಪ್ರತಿದಿನ 5 ಸಾವಿರ ಕ್ಯುಸೆಕ್ ಕಾವೇರಿ ನೀರು ಹರಿದು ಮೆಟ್ಟೂರು ಅಣೆಕಟ್ಟು ತಲುಪುತ್ತಿದೆ ಎಂದರು. ರಾಜ್ಯದ ಅಣೆಕಟ್ಟುಗಳಲ್ಲಿ ಇರುವ ನೀರಿನ ಲಭ್ಯತೆ, ಕುಡಿಯುವ ನೀರು ಹಾಗೂ ಬೆಳೆಗೆ ಬೇಕಾಗಿರುವ ನೀರಿನ ಅವಶ್ಯಕತೆ ಸೇರಿದಂತೆ ಹಲವು ಮಾಹಿತಿಗಳನ್ನು ನ್ಯಾಯಾಲಯಕ್ಕೆ ನೀಡುವಲ್ಲಿ ಕರ್ನಾಟಕ ಸರ್ಕಾರ ಸಂಪೂರ್ಣ ವಿಫಲವಾಗಿದೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ನೀರಿನ ಮಟ್ಟ

ಕೆಆರ್‌ಎಸ್ ಅಣೆಕಟ್ಟು	ಕಬಿನಿ ಅಣೆಕಟ್ಟು	ಹಾರಂಗಿ ಅಣೆಕಟ್ಟು
ಗರಿಷ್ಠ ಮಟ್ಟ 124.80 ಅಡಿ	ಗರಿಷ್ಠ ಮಟ್ಟ 2,284.00 ಅಡಿ	ಗರಿಷ್ಠ ಮಟ್ಟ 2,859.00 ಅಡಿ
ಇಂದಿನ ಮಟ್ಟ 96.90 ಅಡಿ	ಇಂದಿನ ಮಟ್ಟ 2,275.01 ಅಡಿ	ಇಂದಿನ ಮಟ್ಟ 2,856.41 ಅಡಿ
ಹಿಂದಿನ ವರ್ಷದ ಮಟ್ಟ 124.36 ಅಡಿ	ಹಿಂದಿನ ವರ್ಷದ ಮಟ್ಟ 2,283.04 ಅಡಿ	ಹಿಂದಿನ ವರ್ಷದ ಮಟ್ಟ 2,857.73 ಅಡಿ
ನಿನ್ನೆಯ ಮಟ್ಟ 97.02 ಅಡಿ	ನಿನ್ನೆಯ ಮಟ್ಟ 2,275.36 ಅಡಿ	ನಿನ್ನೆಯ ಮಟ್ಟ 2,856.84 ಅಡಿ
ಇಂದಿನ ಒಳಹರಿವು 5,147 ಕ್ಯೂಸೆಕ್ಸ್	ಇಂದಿನ ಒಳಹರಿವು 2,796 ಕ್ಯೂಸೆಕ್ಸ್	ಇಂದಿನ ಒಳಹರಿವು 1,148 ಕ್ಯೂಸೆಕ್ಸ್
ಇಂದಿನ ಹೊರಹರಿವು 6,034 ಕ್ಯೂಸೆಕ್ಸ್	ಇಂದಿನ ಹೊರಹರಿವು 4,890 ಕ್ಯೂಸೆಕ್ಸ್	ಇಂದಿನ ಹೊರಹರಿವು 2,800 ಕ್ಯೂಸೆಕ್ಸ್

ಮೈಸೂರು ಕೊಡಗು ಮಾಡೆಲ್ ಶಾಲೆಯಲ್ಲಿ ಎರಡು ದಿನಗಳ ವಿಜ್ಞಾನ ವಸ್ತುಪ್ರದರ್ಶನಕ್ಕೆ ಚಾಲನೆ

ಮಕ್ಕಳಿಂದ ಚಂದ್ರಯಾನ-3 ಸೇರಿದಂತೆ ಕೌತುಕಮಯ ವಿಜ್ಞಾನ ಮಾದರಿಗಳ ಪ್ರದರ್ಶನ





ಮೈಸೂರಿನ ವಿದ್ಯಾಶಂಕರ ಬಡಾವಣೆಯಲ್ಲಿರುವ ಕೊಡಗು ಮಾಡೆಲ್ ಶಾಲೆಯಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಪ್ರದರ್ಶಿಸಿರುವ ಮಾದರಿಗಳನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ.ವಿಕ್ರಮ್ ಮುತ್ತಣ್ಣ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಡೆಪ್ಯುಟಿ ಸಿಇಓ ಎಸ್.ಪ್ರವೀಣ್‌ಕುಮಾರ್, ಕೊಡಗು ಮಾಡೆಲ್ ಶಾಲೆಯ ಅಧ್ಯಕ್ಷ ಪಿ.ಎಸ್.ದೇವಯ್ಯ, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ (ಸಿಆರ್‌ಪಿ) ಮಹದೇವಸ್ವಾಮಿ ಇನ್ನಿತರರು ವೀಕ್ಷಿಸುತ್ತಿರುವುದು.

ಮೈಸೂರು, ಸೆ.23(ಎಂಟಿವೈ)- ಮೈಸೂರಿನ ವಿದ್ಯಾಶಂಕರ ಬಡಾವಣೆಯಲ್ಲಿರುವ ಕೊಡಗು ಮಾಡೆಲ್ ಶಾಲೆಯಲ್ಲಿ ಇಂದು ಆರಂಭವಾದ ಎರಡು ದಿನಗಳ ವಿಜ್ಞಾನ ವಸ್ತುಪ್ರದರ್ಶನದಲ್ಲಿ ವಿವಿಧ ಶಾಲೆಗಳ ಹಲವು ಮಕ್ಕಳು ವಿಜ್ಞಾನ ಹಾಗೂ ಬಾಹ್ಯಾಕಾಶಕ್ಕೆ ಸಂಬಂಧಿಸಿದ ಮಾದರಿಗಳನ್ನು ಪ್ರದರ್ಶಿಸುವ ಮೂಲಕ ಗಮನ ಸೆಳೆಯುತ್ತಿದ್ದಾರೆ.

ವಿದ್ಯಾರ್ಥಿಗಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವ ನಿಟ್ಟಿನಲ್ಲಿ ಏರ್ಪಡಿಸಿರುವ ಈ ವಿಜ್ಞಾನ ವಸ್ತು ಪ್ರದರ್ಶನವನ್ನು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕರಾದ ಕೆ.ಜಿ.ವಿಕ್ರಮ್ ಮುತ್ತಣ್ಣ ಉದ್ಘಾಟಿಸಿದ ಬಳಿಕ ವಿವಿಧ ಮಾದರಿಗಳನ್ನು ವೀಕ್ಷಣೆ ಮಾಡಿ, ವಿವರಣೆ ಪಡೆದರು. ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ಚಂದ್ರಯಾನ-3, ಬಾಹ್ಯಾಕಾಶ, ಸೌರಮಂಡಲ, ಗ್ರಹಗಳ ಬಗ್ಗೆ ಮಾಹಿತಿ, ಗ್ರಹಗಳ ಚಲನೆ, ಭೂಮಿ ಸುತ್ತುವಿಕೆ, ಏರ್ ಪ್ಯೂರಿಫೈಯಿಂಗ್ ಟವರ್, ಸೌರಶಕ್ತಿ ಬಳಕೆ, ಮಳೆ ನೀರು ಕೊಯ್ಲು, ಟೆಲಿಸ್ಕೋಪ್ ಸೇರಿದಂತೆ ವಿವಿಧ ಮಾದರಿಗಳ ಪ್ರದರ್ಶನ ಆಯೋಜಿಸಿದ್ದಾರೆ. ಪೂರ್ವ ಪ್ರಾಥಮಿಕ ಶಾಲೆಯ ಮಕ್ಕಳು ವನ್ಯ ಜೀವಿಗಳ ಪ್ರಪಂಚವನ್ನೇ ಅನಾವರಣಗೊಳಿಸಿ, ಕೆಲ ಪ್ರಾಣಿಗಳ ಸ್ವಭಾವ, ಆಹಾರ ಪದ್ಧತಿ, ಜೀವನ ಕ್ರಮ ಸೇರಿದಂತೆ ವಿವಿಧ ಮಾಹಿತಿ ನೀಡಿದರು.

ಇದಕ್ಕೂ ಮುನ್ನ ವಸ್ತುಪ್ರದರ್ಶನವನ್ನು ಉದ್ಘಾಟಿಸಿದ ವಿಕ್ರಮ್ ಮುತ್ತಣ್ಣನವರು ಮಾತನಾಡಿ, ವಿಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಆವಿಷ್ಕಾರಗಳು ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ವಿದ್ಯಾರ್ಥಿಗಳು ಇವೆಲ್ಲವುಗಳ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಬೆಳೆಸಿಕೊಳ್ಳಬೇಕು. ತೀಕ್ಷ್ಣ ಮನೋಭಾವದೊಂದಿಗೆ ಕಲಿಕೆಯ ಆಸಕ್ತಿ ಹೆಚ್ಚಿಸಿಕೊಳ್ಳಬೇಕು. ಶಿಕ್ಷಕರು ಮಕ್ಕಳು ಕೇಳುವ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸುವ ಸಂಯಮ ಬೆಳೆಸಿಕೊಳ್ಳಬೇಕು. ಹೊಸ ಹೊಸ ವಿಷಯಗಳ ಬಗ್ಗೆ ಕಲಿಯುತ್ತಿರಬೇಕು. ಮಾಹಿತಿ ಪಡೆಯಲು ಗೂಗಲ್ ಅನ್ನು ಹೆಚ್ಚು ಅವಲಂಬಿಸುವುದು ಒಳ್ಳೆಯದಲ್ಲ ಎಂದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಡೆಪ್ಯುಟಿ ಸಿಇಓ ಎಸ್.ಪ್ರವೀಣ್‌ಕುಮಾರ್ ಮಾತನಾಡಿ, ವಿಜ್ಞಾನದ ಬಗ್ಗೆ ತಿಳಿದುಕೊಳ್ಳಬೇಕಾದರೆ ವಿದ್ಯಾರ್ಥಿಗಳು ಹೆಚ್ಚು ಪ್ರಶ್ನೆ ಕೇಳುವ ಹಂಬಲ ಹೊಂದಿರಬೇಕು. ಆಗ ಹೆಚ್ಚು ಹೆಚ್ಚು ಮಾಹಿತಿ ಕಲೆ ಹಾಕಬಹುದು. ಪ್ರಶ್ನೆಯನ್ನೇ ಕೇಳದಿದ್ದರೆ, ಮಾಹಿತಿ ಪಡೆಯಲು ಸಾಧ್ಯವಿಲ್ಲ. ವಿಜ್ಞಾನದಲ್ಲಿ ಆವಿಷ್ಕಾರ ನಿರಂತರವಾಗಿ ನಡೆಯುತ್ತಿರುತ್ತವೆ. ಸಂದರ್ಭಕ್ಕೆ ಅನುಗುಣವಾಗಿ ಅವುಗಳು ಅರ್ಥ ಪಡೆದುಕೊಳ್ಳುತ್ತವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೊಡಗು ಮಾಡೆಲ್ ಶಾಲೆಯ ಛೇರ್‌ಪರ್ಸನ್ ಸಿ.ಕೆ.ಸೀತಮ್ಮ, ಕಾವೇರಿ ಕೊಡವ ಸಮಾಜ (ಪೂರ್ವ)ದ ಅಧ್ಯಕ್ಷ ಪಿ.ಎಸ್.ದೇವಯ್ಯ, ಉಪಾಧ್ಯಕ್ಷ ಪಿ.ರಮೇಶ್ ಬೋಪಯ್ಯ, ಖಜಾಂಚಿ ಸಿ.ಎಂ.ಚೆಂಗಪ್ಪ, ಜಂಟಿ ಕಾರ್ಯದರ್ಶಿ ಪಿ.ಡಿ. ಪೂಣಚ್ಚ, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ (ಸಿಆರ್‌ಪಿ) ಮಹದೇವಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಎರಡನೇ ದಿನದ ಕಾರ್ಯಕ್ರಮ: ಸೆ.24ರಂದು ಬೆಳಗ್ಗೆ 10ಕ್ಕೆ ವಿಜ್ಞಾನಿ ಕೊಳ್ಳೇಗಾಲ ಶರ್ಮಾ ಅವರಿಂದ ಫೋಲ್ಡ್‌ಸ್ಕೋಪ್ ಕಾರ್ಯಾಗಾರ. ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಪಾಲಿಕೆ ಸದಸ್ಯೆ ರಜನಿ ಅಣ್ಣಯ್ಯ ಪಾಲ್ಗೊಳ್ಳಲಿದ್ದಾರೆ.

ಸೆ.30ರವರೆಗೆ ಬೆ.8ರಿಂದ ರಾತ್ರಿ 8 ಗಂಟೆವರೆಗೆ ಸಬ್‌ರಿಜಿಸ್ಟ್ರಾರ್ ಕಚೇರಿ ಕಾರ್ಯನಿರ್ವಹಣೆ

ಮೈಸೂರು,ಸೆ.23(ಆರ್‌ಕೆ)- ಅಕ್ಟೋಬರ್ 1ರಿಂದ ಆಸ್ತಿಗಳ ಮಾರ್ಗಸೂಚಿ ಮೌಲ್ಯ ಪರಿಷ್ಕರಣೆ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಸೂಚನೆ ಮೇರೆಗೆ ಇಂದು ಮೈಸೂರು ನಗರ ಸೇರಿದಂತೆ ಜಿಲ್ಲಾದ್ಯಂತ ಎಲ್ಲಾ ಉಪನೋಂದಣಾಧಿಕಾರಿ ಕಚೇರಿಗಳಲ್ಲಿ ಬೆಳಗ್ಗೆ 8ರಿಂದ ರಾತ್ರಿ 8ರವರೆಗೆ ಕಾರ್ಯನಿರ್ವಹಿಸಲಾರಂಭಿಸಿವೆ.

ಸೆ.30ರವರೆಗೆ ಉಪನೋಂದಣಾಧಿಕಾರಿ ಕಚೇರಿಗಳು ಹೆಚ್ಚುವರಿ ಅವಧಿಯಲ್ಲಿ ಆಸ್ತಿಗಳ ಮಾರ್ಗಸೂಚಿ ಮೌಲ್ಯ (ಗೈಡೆನ್ಸ್ ವ್ಯಾಲ್ಯೂ) ಪರಿಷ್ಕರಣೆ ಕುರಿತು ಹೊಸ ತಂತ್ರಾಂಶಕ್ಕೆ ಸಿದ್ಧತೆ ನಡೆಸುವಂತೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗಳು ಆದೇಶ ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಮೈಸೂರಿನ ಪೂರ್ವ, ಪಶ್ಚಿಮ, ದಕ್ಷಿಣ, ಉತ್ತರ, ಎಲ್ಲಾ ತಾಲೂಕು ಕೇಂದ್ರಗಳ ಉಪನೋಂದಣಾಧಿಕಾರಿ ಕಚೇರಿಗಳು ಇಂದು ಬೆಳಗ್ಗೆ 8 ಗಂಟೆಗೆ ಕಾರ್ಯಾರಂಭ ಮಾಡಿದವು. ಬೆಳಗ್ಗೆ 8ರಿಂದ 10.30 ಗಂಟೆವರೆಗೆ ಇಲಾಖೆ ಕೆಲಸ ಮಾಡಿದ ಸಿಬ್ಬಂದಿ, ಬೆಳಗ್ಗೆ 11ರ ನಂತರ ನೋಂದಣಿ ಪ್ರಕ್ರಿಯೆ ನಡೆಸಿದವು. ಸಂಜೆ 5.30 ಗಂಟೆಗೆ ನೋಂದಣಿ ಪ್ರಕ್ರಿಯೆಯ ಸಾಫ್ಟ್‌ವೇರ್ ಬಂದ್ ಆದ ನಂತರ ಸಂಜೆ 6ರಿಂದ ರಾತ್ರಿ 8ರವರೆಗೆ ಮತ್ತೆ ಗೈಡೆನ್ಸ್ ವ್ಯಾಲ್ಯೂ ಪರಿಷ್ಕರಣೆ ತಯಾರಿ ಕೆಲಸ ನಿರ್ವಹಿಸಿದರು. ಅ.1ರಿಂದ ಪರಿಷ್ಕೃತ ಆಸ್ತಿ ಮಾರ್ಗಸೂಚಿ ಮೌಲ್ಯ ಹೆಚ್ಚಳವಾಗಲಿದ್ದು, ಅದಕ್ಕನುಗುಣವಾಗಿ ಸ್ಟ್ಯಾಂಪ್ ಡ್ಯೂಟಿ ಹೆಚ್ಚಳವಾಗಲಿದೆ. ಆನ್‌ಲೈನ್‌ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡಿ ಶುಲ್ಕ ಪಾವತಿಸಿದ ಬಳಿಕ ಆಸ್ತಿಗಳ ನೋಂದಣಿ ಪ್ರಕ್ರಿಯೆ ನಡೆಯಲಿದೆ. ಉಪನೋಂದಣಾಧಿಕಾರಿಗಳು, ಸಹಾಯಕ ನೋಂದಣಾಧಿಕಾರಿಗಳು, ಕಚೇರಿ ಅಧೀಕ್ಷಕರು, ಗುಮಾಸ್ತರು, ಡಿಟಿಪಿ ಆಪರೇಟರ್‌ಗಳು, ಡಿ ಗ್ರೂಪ್ ನೌಕರರು ಸೆ.30ರವರೆಗೆ ಹೆಚ್ಚುವರಿ ಅವಧಿ ಕೆಲಸ ಮಾಡಿ ಹೊಸ ಶುಲ್ಕದ ಸಿದ್ಧತಾ ಕಾರ್ಯ ನಿರ್ವಹಿಸಬೇಕಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ಎಸ್‌ಪಿವಿಜಿಎಂಸಿ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** 62ನೇ ಪಾರಂಪರಿಕ ಸಂಗೀತೋತ್ಸವ, ಬೆಳಗ್ಗೆ 9ಕ್ಕೆ ಶ್ರೀ ಸತ್ಯನಾರಾಯಣ ಪೂಜೆ, ಸಂಜೆ 5.30ರಿಂದ ಗೋಕರ್ಣ ಮಹಿಮಾ ದರ್ಶನ, ವಾಚನ: ರಾಧಾ ಕೃಷ್ಣಸ್ವರೂಪ, ಹಾಸನ, ವ್ಯಾಖ್ಯಾನ: ಸೌಮ್ಯಶ್ರೀ ಶ್ರೀಕಂಠ, ತಿಪಟೂರು, ಸಂಜೆ 6.45ಕ್ಕೆ ವಿದುಷಿ ಅರುಣಾ ಸಾಯಿರಾಂ ಅವರಿಂದ ಗಾಯನ, ವಿದುಷಿ ಎಚ್.ಎಂ.ಸ್ಮಿತಾ-ವಯೋಲಿನ್, ವಿದ್ವಾನ್ ಜೆ.ವೈದ್ಯನಾಥನ್-ಮೃದಂಗ, ವಿದ್ವಾನ್ ಗಿರಿಧರ ಉಡುಪ-ಘಟಂ, ಸ್ಥಳ: 8ನೇ ಕ್ರಾಸ್, ವಿ.ವಿ.ಮೊಹಲ್ಲಾ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ:** ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಜಯಂತಿ ಮತ್ತು ಅಂತರರಾಷ್ಟ್ರೀಯ ಮೈಕ್ರೋಆರ್ಗಾನಿಸಮ್ ದಿನಾಚರಣೆ ಅಂಗವಾಗಿ ವಾಕಥಾನ್, ಮುಖ್ಯ ಅತಿಥಿಗಳು: ಪೊಲೀಸ್ ಸೂಪರಿಂಟೆಂಡೆಂಟ್ ಶ್ರೀಮತಿ ಸೀಮಾ ಲಾಟ್ಕರ್, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಅತಿಥಿಗಳು : ಡಾ. ಆರ್.ಸುಧೀಂದ್ರ ಭಟ್, ಡಾ.ವಿಶಾಲ್‌ಕುಮಾರ್ ಗುಪ್ತ, ಡಾ. ಕೆ.ಎ. ರವೀಶ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 6ಕ್ಕೆ.

■ **ಜನಹಿತ ವಿವಿಧೋದ್ದೇಶ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಂ.ಭೈರಪ್ಪ, ಸ್ಥಳ: ಶ್ರೀ ಮಹದೇಶ್ವರ ದೇವಸ್ಥಾನದ ಆವರಣ, ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ:** ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಕರಿಗೆ ಕಾರ್ಯಾಗಾರ, ಅಧ್ಯಕ್ಷತೆ: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸ್ಥಳ: ಜಿಪಂ ಸಭಾಂಗಣ, ಬೆಳಗ್ಗೆ 10ಕ್ಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವ್ಯಸನ ಮುಕ್ತಿ ಚಿಕಿತ್ಸಾ ಶಿಬಿರ, ಸ್ಥಳ : ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಅಭಿವೃದ್ಧಿ ಆಯುಕ್ತರು (ಕೈಮಗ್ಗ), ಜವಳಿ ಮಂತ್ರಾಲಯ, ಕೈಮಗ್ಗ ಮತ್ತು ಜವಳಿ ಇಲಾಖೆ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್** : ವಿಶೇಷ ಕೈಮಗ್ಗ ಮೇಳ, ಸಂಸ್ಕೃತಿ-ಹತ್‌ಕರ್ಗ್-2023, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ರಿಂಗ್ ರೋಡ್, ಬೆಳಗ್ಗೆ 10 ರಿಂದ.

■ **ಹೊನ್ನುಸಿರಿ ವಿವಿದೋದ್ದೇಶ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ಶಿಕ್ಷಕರ ಭವನ, ತಿ. ನರಸೀಪುರ ರಸ್ತೆ, ಬೆಳಗ್ಗೆ 10ಕ್ಕೆ.

■ **ಮೈಸೂರು ಸಿಟಿ ಶ್ರೀ ಶಿವಛತ್ರಪತಿ ಕೋ ಆಪರೇಟಿವ್ ಸೊಸೈಟಿ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕೆ. ನಾಗೇಂದ್ರರಾವ್, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10ಕ್ಕೆ

■ **ಶ್ರೀ ಶಾಲಿವಾಹನ ವಿವಿದೋದ್ದೇಶ ಕೈಗಾರಿಕಾ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕೆ.ಪಿ.ವೆಂಕಟೇಶ್, ಸ್ಥಳ: ಶ್ರೀರಾಮ ಕಲ್ಯಾಣ ಮಂದಿರ, ವಿ.ವಿ. ಮೊಹಲ್ಲಾ, ಬೆಳಗ್ಗೆ 10ಕ್ಕೆ.


■ **ಸ್ನೇಹ ಬಳಗ :** ಬಳಗದ ಬರಹಗಾರರ ಕಥಾಸಂಕಲನದ ಸ್ನೇಹದ ಹೊತ್ತಿಗೆ ಬಿಡುಗಡೆ ಸಮಾರಂಭ, ಉದ್ಘಾಟನೆ: ಪ್ರಾಂಶುಪಾಲರಾದ ಡಾ.ಪಿ.ಸುಮಾರಾಣಿ ಶಂಭು, ಕೃತಿ ಲೋಕಾರ್ಪಣೆ : ಮೈಸೂರು ಆಕಾಶವಾಣಿ ಹಿರಿಯ ನಿರ್ದೇಶಕ ಎಸ್.ಎಸ್.ಉಮೇಶ್, ಅಧ್ಯಕ್ಷತೆ : ಕೃಷಿ ಮಾರಾಟ ಇಲಾಖೆ ಉಪನಿರ್ದೇಶಕಿ ಸಂಗೀತಾ ದೀಪಕ್, ಉಪಸ್ಥಿತರು: ಫಣಿರಾಜ್, ಶಂಕರ್, ಸ್ಥಳ: ಶ್ರೀರಾಮ ಮಂದಿರ, ಜಯನಗರ, ಬೆಳಗ್ಗೆ 10ಕ್ಕೆ

■ **ಮೈಸೂರು ಧಾರ್ಮಿಕ ಪ್ರತಿಷ್ಠಾನ, ಮೈಸೂರು ಕಲಾ ಪ್ರತಿಷ್ಠಾನ:** ಮೈಸೂರು ಗಣೇಶ ಉತ್ಸವ-2023, ಬೆಳಗ್ಗೆ 10ಕ್ಕೆ ಮಹಾಪೂಜೆ, ವೇದ ಮಂತ್ರ, ಪಾರಾಯಣ ನಂತರ ಸಂಜೆ 5.30ಕ್ಕೆ ಗಣೇಶ ವಿಸರ್ಜನೆ ಸ್ಥಳ: ಮಾಧವ ಕೃಪ

■ **ದಿ ಹೆರಿಟೇಜ್ ಕ್ಲಬ್ :** ವಾರ್ಷಿಕ ಮಹಾಸಭೆ, ಸ್ಥಳ: ಹೆರಿಟೇಜ್ ಕ್ಲಬ್ ಆವರಣ, ಬೆಳಗ್ಗೆ 10ಕ್ಕೆ.

■ **ಮಹರ್ಷಿ ವಾಲ್ಮೀಕಿ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ದೇವರಾಜ್ ಟಿ.ಕಾಟೂರು, ಸ್ಥಳ: ವಾಲ್ಮೀಕಿ ಭವನ, ವಿಜಯನಗರ 2ನೇ ಹಂತ, ಬೆಳಗ್ಗೆ 10ಕ್ಕೆ

■ **ಕಲಾ ಸುರುಚಿ ರಂಗಮನೆ :** ಡಾ. ಸಿಂಧುವಳ್ಳಿ ಅನಂತಮೂರ್ತಿ ಸ್ಮರಣೆ ಕಾರ್ಯಕ್ರಮ, ಪುಟ್ಟಣ್ಣಯ್ಯ ಅವರಿಂದ ರಂಗಗೀತೆ, ಸ್ಥಳ: ಕಲಾ ಸುರುಚಿ ರಂಗ ಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ



ಇಂದಿನ ಪಂಚಾಂಗ

24.9.2023 ಭಾನುವಾರ, ಮಳೆ ನಕ್ಷತ್ರ: ಉತ್ತರಾ 14.09.2023ರಿಂದ 27.09.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಪೂಷಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ನವನಿಧಿ ವಿವಿಧೋದ್ದೇಶ ಸೌಹಾರ್ದ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಕೆ.ಎಸ್. ಮುರಳಿ, ಸ್ಥಳ: ಸಂಘದ ಕಚೇರಿ ಆವರಣ, ಬೆಳಗ್ಗೆ 11ಕ್ಕೆ

■ **ನಿರಂತರ ಫೌಂಡೇಷನ್ :** ಕಾಲೇಜು ವಿದ್ಯಾರ್ಥಿಗಳಿಗೆ ರಂಗ ತರಬೇತಿ ಶಿಬಿರ, ಉಪಸ್ಥಿತರು : ಹಿರಿಯ ರಂಗ ನಿರ್ದೇಶಕ ಪ್ರೊ. ಎಚ್.ಎಸ್. ಉಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಬರಹಗಾರ ನಾ. ದಿವಾಕರ್, ಪ್ರಸಾದ್ ಕುಂದೂರು, ಸ್ಥಳ: ಗಾಂಧಿ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಬ್ರಿಜೀ ಇನ್ಸೂರ್‌ಟೆಕ್ ಪ್ರೈವೇಟ್ ಲಿಮಿಟೆಡ್ :** ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಎಕ್ಸೆಲ್‌ಸಾಫ್ಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಡಿ.ಸುಧನ್ವ, ರಂಗಸನ್ಸ್ ನಿರ್ದೇಶಕ ಪವನ್ ರಂಗ, ಸ್ಥಳ: ಐಡಿಎಫ್‌ಸಿ ಬ್ಯಾಂಕ್, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ

■ **ಮೈಸೂರು ಸೇಲ್ಸ್‌ಮ್ಯಾನ್ ಅಸೋಸಿಯೇಷನ್ :** ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕರಾದ ಟಿ.ಎಸ್. ಶ್ರೀವತ್ಸ, ಕೆ. ಹರೀಶ್ ಗೌಡ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಮಾಜಿ ಪಾಲಿಕೆ ಸದಸ್ಯ ಸುನೀಲ್ ಕುಮಾರ್, ಸ್ಥಳ: ಹೋಟೆಲ್ ಮಾಲೀಕರ ಸಂಘದ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟೆಬಲ್ ಟ್ರಸ್ಟ್ :** ಅರಳು ಪ್ರತಿಭೆ, ಪ್ರತಿಭಾಂಕುರ, ನೂತನ ಸಂಗೀತ ಮಾಲಿಕೆ, ಚತುರ್ಥ ಸುಮ, ವಿದುಷಿ ಕು. ನಿತ್ಯಶ್ರೀ ಆರ್. ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್-ವಯೋಲಿನ್, ವಿದ್ವಾನ್ ನಂದನ ಕಶ್ಯಪ್-ಮೃದಂಗ, ಸ್ಥಳ: 1225, 10ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ, ಬೆಳಗ್ಗೆ 10.30ಕ್ಕೆ

■ **ಪ್ರಿಯದರ್ಶಿನಿ ಸಾಂಸ್ಕೃತಿಕ ವೇದಿಕೆ, ಮಹಿಮಾ ಪ್ರಕಾಶನ, ಅಯೋಧ್ಯಾ ಪ್ರಕಾಶನ, ಬೆಂಗಳೂರು:** ವಿದ್ವಾನ್ ಗ.ನಾ. ಭಟ್ಟ ಅವರ ನಾಲ್ಕು ಪುಸ್ತಕಗಳ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ, ಮುಖ್ಯ ಅತಿಥಿಗಳು: ಮಧುಸೂದನ ಹೆಗಡೆ, ಡಾ.ಟಿ. ದಯಾನಂದ ಚೌಟಿ, ಪುಸ್ತಕ ಬಿಡುಗಡೆ: ಉದ್ಯಮಿ ಡಾ.ಎಂ.ಜಗನ್ನಾಥ ಶೆಣೈ, ಉಪಸ್ಥಿತರು: ಡಾ. ತುಳಸೀರಾಮಚಂದ್ರ, ಜೋಗಿ, ರೋಹಿತ್ ಚಕ್ರತೀರ್ಥ, ಕೆ.ವಿ.ಶ್ರೀನಿವಾಸ, ಸ್ಥಳ: ರೋಟರಿ ಸೆಂಟರ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ

■ **ಜಗನ್ಮಾತೆ ಅಕ್ಕಮಹಾದೇವಿ ಮಹಿಳಾ ಸೌಹಾರ್ದ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷೆ ಸಿ.ಎಲ್. ಶರ್ಮಿಳಾ, ಸ್ಥಳ: ಕುದೇರು ಮಠ, ಆಲನಹಳ್ಳಿ, ಬೆಳಗ್ಗೆ 10.30ಕ್ಕೆ.

■ **ಮಾಚಿದೇವ ಸಹಕಾರ ಸಂಘ:** ವಾರ್ಷಿಕ ಮಹಾಸಭೆ, ಸ್ಥಳ: ಗಾನ ಭಾರತೀ, ವೀಣೆ ಶೇಷಣ್ಣ ಭವನ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ

■ **ಶ್ರೀ ಬಸವೇಶ್ವರ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಟಿ. ಲಿಂಗರಾಜು, ಸ್ಥಳ: ಶ್ರೀ ನಟರಾಜ ಕಲ್ಯಾಣ ಮಂಟಪ, ಶಂಕರ ಮಠದ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಲ್.ರೇವಣ್ಣಸಿದ್ದಯ್ಯ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತುಸಂಜೆ 6.10ಕ್ಕೆ ಬದುಕು ಮಣ್ಣಿನೊಂದಿಗೆ-ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ-ಎ.ಪಿ. ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ-ಕೆ.ಎಲ್.ಪದ್ಮಿನಿ ಹೆಗಡೆ, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ-ಆಯುರ್ವೇದ ವೈದ್ಯ ಮೈಸೂರಿನ ಡಾ.ನಾಗೇಶ್ ಎನ್. ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.40 ನಮ್ಮ ಆರೋಗ್ಯ-ಮಕ್ಕಳಲ್ಲಿ ಕಂಡು ಬರುವ ನರಸಂಬಂಧಿ ಸಮಸ್ಯೆಗಳು ಮತ್ತು ಚಿಕಿತ್ಸೆ ಕುರಿತು ಡಾ. ಶಾಸ್ತಾರ ಪಿ. ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ-ಬೇದ್ರೆ ಮಂಜುನಾಥ್, 10.00 ಕೇಳಿಗಿಳಿಗಳೇ-ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ-ಪ್ರತಿಭಾ ಪಲ್ಲವ-ಶಾಸ್ತ್ರೀಯ ಗಾಯನ ಕಲಾವಿದ ವೇಣುಗೋಪಾಲ್ ಎಸ್. ಕೊತಬಾಳ ಅವರ ಪರಿಚಯ, 11.00 ಮನ್ ಕೀ ಬಾತ್-ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಮನದ ಮಾತು **ಮಧ್ಯಾಹ್ನ:** 12.30 ದೇವರನಾಮ, 1.00 ಪ್ರಗತಿ ಪಥ-ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು-ಜಮುನಾ, 3.00 ಚಟ್‌ಪಟ್ ಚುರುಮುರಿ, ಪ್ರಸ್ತುತಿ- ಪ್ರಭುಸ್ವಾಮಿ ಮಳಿಮಠ ಹಾಗೂ ಕೆ.ಬಿ.ಮೀನಾ, 3.45 ಯಕ್ಷ ಗಾನ ತಾಳ ಮದ್ದಳೆ, ಪ್ರಸಂಗ "ಮೋಕ್ಷ ಸಂಗ್ರಾಮ", ಪ್ರಸ್ತುತಿ- ಧರ್ಮಸ್ಥಳದ ಬಿ.ಭುಜಬಲಿ ಮತ್ತು ತಂಡದವರು, 6.50 ಕೃಷಿರಂಗ -ಪಶುರಂಗ-ಪ್ರಾಯೋಜಿತ ಕಾರ್ಯಕ್ರಮ -ನಾಟಕ "ನಾಯಿ ಬಾಲ ಡೊಂಕೆ", ರಚನೆ- ಡಾ.ಅನಿಲ್‌ಕುಮಾರ್ ಮುಗಳಿ, ನಿರ್ದೇಶನ- ಪ್ರಭುಸ್ವಾಮಿ ಮಳಿಮಠ, ಚನ್ನಪಟ್ಟಣದ ಕಣ್ವಶ್ರೀ ಮಹಿಳಾ ಕುಕ್ಕುಟ ರೈತ ಉತ್ಪಾದಕ ಸಂಸ್ಥೆಯ ಕಾರ್ಯಚಟುವಟಿಕೆ ಕುರಿತು ಡಿ.ಎಸ್. ಮಾನಸ ಅವರೊಂದಿಗೆ ಸಂದರ್ಶನ, 8.00 ಮನ್ ಕೀ ಬಾತ್- ದೇಶದ ಜನತೆಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರ ಮನದ ಮಾತಿನ ಕನ್ನಡ ಅನುವಾದದ ಮರುಪ್ರಸಾರ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ-ಗೌರಿ ಬ್ಯಾನರ್ಜಿ - ಸಾರಂಗಿ

■ **ಶ್ರೀ ರೇಣುಕಾಂಬ ಪತ್ತಿನ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಆರ್. ರವಿಶಂಕರ್, ಸ್ಥಳ: ಸಂಘದ ಕಚೇರಿ ಆವರಣ, ಬೆಳಗ್ಗೆ 11ಕ್ಕೆ.

■ **ಅರಸು ಮಂಡಳಿ ಸಹಕಾರ ಸಂಘ:** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎ.ಆರ್.ಮಲ್ಲರಾಜೇ ಅರಸ್, ಸ್ಥಳ: ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮುದಾಯ ಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** ಪೂನಾ ಒಪ್ಪಂದ ಅಂದು-ಇಂದು..., ಉದ್ಘಾಟನೆ: ಶಾಸಕ ಪಿ.ಎಂ.ನರೇಂದ್ರಸ್ವಾಮಿ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್, ವಿಶೇಷ ಉಪನ್ಯಾಸ: ಡಾ.ವಿ.ಷಣ್ಮುಗಂ, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜಾ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಗೆಳೆಯರ ಬಳಗ ಅಭಿವೃದ್ಧಿ ಸಹಕಾರ ಸಂಘ:** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ.ವಸಂತ, ಸ್ಥಳ: ಸಂಘದ ಕಚೇರಿ, ವಿಜಯನಗರ 3ನೇ ಹಂತ, ಬೆಳಗ್ಗೆ 11ಕ್ಕೆ.

■ **ನೇಕಾರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ಪ್ರೆಸಿಡೆಂಟ್ ಹೋಟೆಲ್, ಬೆಳಗ್ಗೆ 11ಕ್ಕೆ

■ **ಎಸ್‌ಕೆಬಿ ವಿದ್ಯಾ ಸಹಾಯ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಬಿ.ಆರ್.ಸೀತಾರಾಮಯ್ಯ, ಸ್ಥಳ: ಸಂಘದ ಆವರಣ, ಕೆಂಪನಂಜಾಂಬ ಅಗ್ರಹಾರ, ಬೆಳಗ್ಗೆ 11ಕ್ಕೆ.

■ **ಮೈಸೂರು ಸೌಹಾರ್ದ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಶಾಂತರಾಜು, ಸ್ಥಳ: ಹೋಟೆಲ್ ಸಿದ್ದಾರ್ಥ, ಬೆಳಗ್ಗೆ 11ಕ್ಕೆ

■ **ನ್ಯಾಯಾಂಗ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಸ್ಥಳ: ಸೀತಾ ರಾಘವ ಪ್ರಾರ್ಥನಾ ಮಂದಿರ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

■ **ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಂದಾಯ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಯೋಹನ, ಸ್ಥಳ: ರೋಟರಿ ಸೆಂಟರ್, ಐಡಿಯಲ್ ಜಾವಾ ರೋಟರಿ ಶಾಲೆ ಆವರಣ, ಬೆಳಗ್ಗೆ 11ಕ್ಕೆ.

■ **ಸ್ನೇಹ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಮಂಜುನಾಥ್, ಸ್ಥಳ: ರಿಯೋ ಮೆರಿಡಿಯನ್ ಹೋಟೆಲ್, ಹೈವೇ ಸರ್ಕಲ್ ಹತ್ತಿರ, ಬೆಳಗ್ಗೆ 11.30ಕ್ಕೆ

■ **ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘ :** ಸರ್ ಎಂ.ವಿ.ಜಯಂತಿ, ಪ್ರತಿಭಾ ಪುರಸ್ಕಾರ, ವಾರ್ಷಿಕ ಮಹಾಸಭೆ, ಉದ್ಘಾಟನೆ : ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್. ಶ್ರೀವತ್ಸ, ಸಾಹಿತಿ ಬನ್ನೂರು ಕೆ.ರಾಜು, ರತ್ನ ಹಾಲಪ್ಪಗೌಡ, ಸ್ಥಳ: ರೋಟರಿ ಪಶ್ಚಿಮ ಶಾಲೆ ಸಭಾಂಗಣ, ಸರಸ್ವತಿಪುರಂ, ಮಧ್ಯಾಹ್ನ 3.30ಕ್ಕೆ

■ **ಇಂಡಿಯನ್ ಥಿಯೇಟರ್ ಫೌಂಡೇಶನ್ :** ರಾಷ್ಟ್ರೀಯ ಮಕ್ಕಳ ರಂಗೋತ್ಸವ, ಬೆಳಗ್ಗೆ 11ಕ್ಕೆ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ ಮತ್ತು ಮಕ್ಕಳ ಮೇಳ, ಪುಸ್ತಕ ಮಾರಾಟ, ಸ್ಥಳ: ಶ್ರೀರಂಗ, ಮಧ್ಯಾಹ್ನ 3ರಿಂದ ಸ್ಯಾಟಲೈಟ್ ಉತ್ಸವ, ಸ್ಥಳ: ನಟನ ರಂಗ ಮಂದಿರ, ರಾಮಕೃಷ್ಣನಗರ, ರಂಗಾಯಣ, ಮಧ್ಯಾಹ್ನ 3.30ಕ್ಕೆ ಹೂಂಕಾರೂ (ಮಾರ್ವಾರಿ), ಕಡೆಕೋಟ್ ಕಡೆಲೋಟ್ (ಮರಾಠಿ), ಸಂಜೆ 7ಕ್ಕೆ ಅದ್ಭುತ ರಾಮಾಯಣ (ಕನ್ನಡ), ಟು ಕಿಲ್ ಆರ್ ನಾಟ್ ಟು ಕಿಲ್ (ಬಹುಭಾಷೆ), ಸ್ಥಳ: ಕಿರು ರಂಗಮಂದಿರ, ಮಧ್ಯಾಹ್ನ 3ರಿಂದ ಮಹಾರಾತ್ರಿ (ಕನ್ನಡ), ಸಂಜೆ 6.30ರಿಂದ ವೀರ ಅಭಿಮನ್ಯು ಕಾಳಗ (ಯಕ್ಷಗಾನ), ಸ್ಥಳ: ಭೂಮಿಗೀತ, ಮಧ್ಯಾಹ್ನ 3ರಿಂದ ತೊತ್ತೋ ಚಾನ್ (ಹಿಂದಿ), ಪಿಪ್ಪಿ ಗೊಂದು ಪಪ್ಪಿ (ಕನ್ನಡ), ಸಂಜೆ 6.30ರಿಂದ ಹೂಂಕಾರೂ (ಮಾರ್ವಾಡಿ), ಸ್ಥಳ: ನಟನ ರಂಗ ಶಾಲೆ, ಸಂಜೆ 6.30ಕ್ಕೆ ರಂಗೋತ್ಸವ ಸಮಾರೋಪ, ಸಮಾರೋಪ ನುಡಿ: ಸುಧಾಕರ್ ರಾವ್, ಸ್ಥಳ: ಕಿರುರಂಗ ಮಂದಿರ.

■ **ಮೈಸೂರು ವೀರಶೈವ ಸಜ್ಜನ ಸಂಘ :** 48ನೇ ವರ್ಷದ ಸ್ವರ್ಣಗೌರಿ ಹಾಗೂ ವರಸಿದ್ಧಿ ವಿನಾಯಕ ಪೂಜಾ ಮಹೋತ್ಸವ, ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಮುಖ್ಯ ಅತಿಥಿಗಳು: ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್, ಅಧ್ಯಕ್ಷತೆ: ರಮಾನಂದ, ಮಧ್ಯಾಹ್ನ 1ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 4ಕ್ಕೆ ಸ್ವರ್ಣಗೌರಿ ಹಾಗೂ ಗಣೇಶ ಮೆರವಣಿಗೆ, ಸ್ಥಳ:ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರ, ಕಬೀರ್ ರಸ್ತೆ.

■ **ದಿ ಬಲಿಜ ಸಂಘಂ :** ವಾರ್ಷಿಕ ಮಹಾಸಭೆ, ಸ್ಥಳ: ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ವೈದ್ಯ ಸಾಹಿತಿ ಡಾ.ಎಸ್.ಪಿ ಯೋಗಣ್ಣ ವಿರಚಿತ, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ "ಆಧ್ಯಾತ್ಮಿಕ ಆರೋಗ್ಯ ದರ್ಶನ" ಕೃತಿಯ ಕುರಿತು ವಿಚಾರಸಂಕಿರಣ, ಸಾನ್ನಿಧ್ಯ: ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಶ್ರೀಮುಕ್ತಿದಾನಂದಜಿ ಸ್ವಾಮೀಜಿ, ಉದ್ಘಾಟನೆ: ಹಿರಿಯ ವಿದ್ವಾಂಸರಾದ ಡಾ.ಪ್ರಧಾನ ಗುರುದತ್ತ, ಕೃತಿ ಕುರಿತು: ಹಿರಿಯ ವೈದ್ಯ ಸಾಹಿತಿ ಡಾ.ಸಿ.ಆರ್.ಚಂದ್ರಶೇಖರ್, ಹಿರಿಯ ವಿದ್ವಾಂಸ ಡಾ.ಜಿ. ರಾಮಕೃಷ್ಣ, ಪ್ರಾಸ್ತಾವಿಕ ನುಡಿ: ಕೃತಿಯ ಕರ್ತೃ ಡಾ.ಎಸ್.ಪಿ.ಯೋಗಣ್ಣ, ಉಪಸ್ಥಿತರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಸಂಜೆ 4.30ಕ್ಕೆ

■ **ಅನಾಥಾಲಯ:** ಎಂ.ವೆಂಕಟಕೃಷ್ಣಯ್ಯ (ತಾತಯ್ಯ)ನವರ 179ನೇ ಜಯಂತ್ಯುತ್ಸವ ಹಾಗೂ ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ, ತಾತಯ್ಯ ಶ್ರೀ ಫಲಾನುಭವಿ ಸಾಧಕ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಅನಾಥಾಲಯ ಅಧ್ಯಕ್ಷ ಸಿ.ವಿ.ಗೋಪಿನಾಥ್, ಮುಖ್ಯ ಅತಿಥಿಗಳು: ಹಿರಿಯ ಪತ್ರಿಕೋದ್ಯಮಿ ಅಜಿತ್ ಹನಮಕ್ಕನವರ್, ಎಂ.ವೆಂಕಟಕೃಷ್ಣ ಪ್ರಶಸ್ತಿ ಪುರಸ್ಕೃತರು: ಪ್ರೊ ಭಾಷ್ಯಂ ಸ್ವಾಮೀಜಿ, ತಾತಯ್ಯ ಸಾಧಕ ಪ್ರಶಸ್ತಿ ಪುರಸ್ಕೃತರು: ಕೀಲು ಮತ್ತು ಮೂಳೆ ತಜ್ಞ ಡಾ. ಹೆಚ್.ಜಿ.ಉದಯ್ ಶಂಕರ್, ಸ್ಥಳ: ತಾತಯ್ಯನವರ ಅನಾಥಾಲಯದ ಆವರಣ, ಸಂಜೆ 4.30ರಿಂದ.

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಸರ್ವಜಯಾನಂದ ಅವರಿಂದ ಶ್ರೀ ಶ್ರೀ ರಾಮಕೃಷ್ಣ ಚರಿತೆ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಅಷ್ಟಾಂಗಯೋಗವಿಜ್ಞಾನ ಮಂದಿರಂ:** ವಿದ್ವಾನ್ ಯು.ಜೆ. ಆದರ್ಶ ಅವರಿಂದ ವಿದ್ಯಾ ವಿಭಾಗಗಳು ಕುರಿತು ಪ್ರವಚನ, ಸ್ಥಳ: ಅಷ್ಟಾಂಗ ಯೋಗವಿಜ್ಞಾನ ಮಂದಿರಂ ಸಭಾ ಭವನ, ಲಕ್ಷ್ಮೀಪುರಂ, ಸಂಜೆ 7ಕ್ಕೆ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 24 ಭಾನುವಾರ 2023

ಸಂಪುಟ: 44 | ಸಂಚಿಕೆ: 159 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮಂಡ್ಯ ಬಂದ್ ಸಂಪೂರ್ಣ ಯಶಸ್ವಿ

- ಕಾವೇರಿಗಾಗಿ ಹಿತರಕ್ಷಣಾ ಸಮಿತಿ ಕರೆ ನೀಡಿದ್ದ ಬಂದ್‌ಗೆ ಅಭೂತಪೂರ್ವ ಬೆಂಬಲ
- ಅಂಗಡಿ–ಮುಂಗಟ್ಟು ಸೇರಿ ಎಲ್ಲವೂ ಬಂದ್, ಅಗತ್ಯ ಸೇವೆಗಷ್ಟೇ ಸಿಕ್ಕಿದ್ದ ಅವಕಾಶ
- ಜೆಸಿ ವೃತ್ತದಲ್ಲಿ ವಿವಿಧ ಸಂಘಟನೆಗಳು, ಸರ್‌ಎಂವಿ ಪುತ್ಥಳಿ ಬಳಿ ರೈತರ ಭಾರಿ ಪ್ರತಿಭಟನೆ
- ನಗರಕ್ಕೆ ವಾಹನ ಪ್ರವೇಶ ನಿರ್ಬಂಧ: ಬಸ್ ಇಲ್ಲದೇ ಪ್ರಯಾಣಿಕರು, ವಿದ್ಯಾರ್ಥಿಗಳ ಪರದಾಟ
- ಹೋರಾಟದಲ್ಲಿ ಪಾಲ್ಗೊಂಡ ಹೆಚ್‌ಡಿಕೆ, ಸಿ.ಟಿ.ರವಿ, ನಗರದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್








ಮಂಡ್ಯ, ಸೆ.23(ಮೋಹನ್‌ರಾಜ್)– ತಮಿಳುನಾಡಿಗೆ ನೀರು ಬಿಡುವಂತೆ ಸುಪ್ರೀಂ ಕೋರ್ಟ್ ಆದೇಶದ ವಿರುದ್ಧ ರೈತ ಹಿತರಕ್ಷಣಾ ಸಮಿತಿ ಶನಿವಾರ ಕರೆ ನೀಡಿದ್ದ ಮಂಡ್ಯ ಬಂದ್ ಸಂಪೂರ್ಣ ಯಶಸ್ವಿಯಾಯಿತು.

ನಗರದ ಅಂಗಡಿ ಮಾಲೀಕರು, ವರ್ತಕರು, ಆಟೋ ಚಾಲಕರು, ಹೋಟೆಲ್ ಮಾಲೀಕರು, ರೈತ ಸಂಘಟನೆ, ಪ್ರಗತಿಪರ ಹಾಗೂ ಕನ್ನಡ ಪರ ಸಂಘಟನೆಗಳು ಮತ್ತು ಸಾರ್ವಜನಿಕರು ಕೈ ಜೋಡಿಸಿದ ಹಿನ್ನೆಲೆಯಲ್ಲಿ ಮಂಡ್ಯ ಬಂದ್‌ಗೆ ಅಭೂತಪೂರ್ವ ಬೆಂಬಲ ದೊರೆಯಿತು. ನಿನ್ನೆಯೇ ಸಭೆ ನಡೆಸಿದ್ದ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಮಂಡ್ಯ ನಗರ ಬಂದ್‌ಗೆ ಎಲ್ಲರೂ ಬೆಂಬಲ ನೀಡುವಂತೆ ಮನವಿ ಮಾಡಿದ್ದರು. ಹಿತರಕ್ಷಣಾ ಸಮಿತಿ ಹೋರಾಟಕ್ಕೆ ಎಲ್ಲರೂ ಒಕ್ಕೊರಲಿನಿಂದ ಸಾಥ್ ನೀಡಿದ ಪರಿಣಾಮ ಬಂದ್ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ. ಅಗತ್ಯ ಸೇವೆಗಳಾದ ಆಸ್ಪತ್ರೆ, ಮೆಡಿಕಲ್ ಸ್ಟೋರ್, ಹಾಲು, ತುರ್ತು ಸೇವೆ ಹೊರತುಪಡಿಸಿ ಉಳಿದ್ಯಾವ ಅಂಗಡಿ–ಮುಂಗಟ್ಟುಗಳು ತೆರೆದಿರಲಿಲ್ಲ. ಬೆಳಗ್ಗೆ 8 ಗಂಟೆಯಿಂದ ಸಂಜೆ 6ರವರೆಗೆ ಮಂಡ್ಯ ಬಂದ್ ಸಂಜೆವರೆಗೂ ನಡೆಯಿತು.

ಮಂಡ್ಯ ಸ್ತಬ್ಧ: ಬಂದ್ ಹಿನ್ನೆಲೆಯಲ್ಲಿ ಮಂಡ್ಯ ನಗರದ ಪ್ರಮುಖ ರಸ್ತೆಗಳಾದ ಬೆಂಗಳೂರು–ಮೈಸೂರು ಹೆದ್ದಾರಿ, ವಿ.ವಿ. ರಸ್ತೆ, ಪೇಟೆ ಬೀದಿ, ● 7ನೇ ಪುಟಕ್ಕೆ

ಕೆಆರ್‌ಎಸ್‌ನ ಹೊರ ಹರಿವು ಏರಿಕೆ



ಮಂಡ್ಯ: ತಮಿಳುನಾಡಿಗೆ ನೀರು ಬಿಡುತ್ತಿಲ್ಲ ಎಂದು ಹೇಳುತ್ತಲೇ ಕೆಆರ್‌ಎಸ್ ಡ್ಯಾಂನಿಂದ ನೀರು ಹರಿಸಲಾಗುತ್ತಿದ್ದು, ಶನಿವಾರ ಡ್ಯಾಂನ ಹೊರ ಹರಿವಿನ ಪ್ರಮಾಣ ಹೆಚ್ಚಳವಾಗಿದೆ. ತಮಿಳುನಾಡಿಗೆ ನೀರು ಬಿಡುಗಡೆ ಪ್ರಮಾಣದಲ್ಲಿ ಹೆಚ್ಚಳವಾಗಿದ್ದು, ನಿನ್ನೆ ಕಾವೇರಿ ನದಿಗೆ 2673 ಕ್ಯುಸೆಕ್ ನೀರು ಬಿಡುಗಡೆ ಮಾಡಲಾಗಿತ್ತು. ಇಂದು 2973 ಕ್ಯುಸೆಕ್‌ಗೆ ಏರಿಕೆಯಾಗಿದ್ದು, ತಮಿಳುನಾಡಿಗೆ ಕೆಆರ್‌ಎಸ್‌ನಿಂದ ಹೋಗುತ್ತಿರುವ ನೀರಿನಲ್ಲಿ 300 ಕ್ಯುಸೆಕ್ ಹೆಚ್ಚಳವಾಗಿದೆ. ಮತ್ತೊಂದೆಡೆ ಒಳ ಹರಿವಿನಲ್ಲಿ ಇಳಿಕೆಯಾಗಿದ್ದು, ನಿನ್ನೆ 5845 ಕ್ಯುಸೆಕ್ ನೀರು ಡ್ಯಾಂಗೆ ಹರಿದು ಬರುತ್ತಿತ್ತು. ಇಂದು 5147 ಕ್ಯುಸೆಕ್‌ಗೆ ಒಳ ಹರಿವು ಇಳಿಕೆಯಾಗಿದ್ದು, ಇದರಿಂದ 96.90 ಅಡಿಗೆ ಜಲಾಶಯದ ನೀರಿನ ಮಟ್ಟ ಕುಸಿದಿದೆ.



ತಮಿಳುನಾಡಿನ ರಾಜಕೀಯ ಒತ್ತಡದಿಂದ ರಾಜ್ಯಕ್ಕೆ ನಿರಂತರ ಅನ್ಯಾಯ: ಹೆಚ್ಡಿಕೆ

ಮಂಡ್ಯ, ಸೆ.23– ಕಾವೇರಿ ವಿಚಾರದಲ್ಲಿ ನೆರೆರಾಜ್ಯ ತಮಿಳುನಾಡಿನ ರಾಜಕೀಯ ಒತ್ತಡದಿಂದ ರಾಜ್ಯಕ್ಕೆ ನಿರಂತರ ಅನ್ಯಾಯವಾಗುತ್ತಿದ್ದು, ಈ ಅನ್ಯಾಯ ತಡೆಯಲು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಸಾಕಷ್ಟು ಹೋರಾಟ ಮಾಡಿದರೂ ಏನು ಪ್ರಯೋಜನವಾಗಲಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದರು.

ನಗರದ ಸರ್‌ಎಂವಿ ಪುತ್ಥಳಿ ಬಳಿ ನಡೆಯುತ್ತಿರುವ ರೈತ ಹಿತರಕ್ಷಣಾ ಸಮಿತಿ ಹೋರಾಟದಲ್ಲಿ ಶನಿವಾರ ಪಾಲ್ಗೊಂಡು ಮಾತನಾಡಿದ ಅವರು, ದೇವೇಗೌಡರ ಹೋರಾಟದ ಬಗ್ಗೆ ಸಾಕಷ್ಟು ದಾಖಲೆಗಳಿವೆ. ಕೆಲವು ಸರ್ಕಾರಗಳು ದೇವೇಗೌಡರ ಸಲಹೆ ಸ್ವೀಕರಿಸಲಿಲ್ಲ. ಇದರಿಂದ ರಾಜ್ಯದ ಪರ ತೀರ್ಪು ಬರುವುದರಲ್ಲೂ ಹಿನ್ನಡೆಯಾಯಿತು ಎಂದು ಹೇಳಿದರು.

ಮೈಸೂರಿನ ಮಹಾರಾಜರು ಚಿನ್ನ ಅಡವಿಟ್ಟು ಜಲಾಶಯ ಕಟ್ಟಿದರು. ಮದ್ರಾಸ್ ಪ್ರಾಂತ್ಯದವರು ತಕರಾರು ಮಾಡಿದ್ದಕ್ಕೆ ಅಂದು ನಿರ್ಣಯವಾಗಿದ್ದ ಕಾನೂನು ಇಂದು ಪಾಲನೆಯಾಗುತ್ತಿದೆ. ತಮಿಳುನಾಡು ಕೇಳಿದಾಗಲೆಲ್ಲಾ ನೀರು ಬಿಡಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಳೆದ ನಾಲ್ಕೈದು ವರ್ಷಗಳಿಂದ ಉತ್ತಮ ಮಳೆಯಾಗುತ್ತಿತ್ತು. ಇದರಿಂದ ರೈತರ ಆತಂಕ ದೂರವಾಗಿತ್ತು. ಇದೀಗ ಮಳೆ ಕೊರತೆಯಿಂದ ರೈತರಿಗೆ ಆತಂಕವಾಗಿದೆ. 125 ವರ್ಷದಿಂದ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದ್ದು ಇದರ ವಿರುದ್ಧ ನಿರಂತರ ಹೋರಾಟ ಮಾಡಲಾಗುತ್ತಿದೆ. ನಮಗೆ ತಿಳಿವಳಿಕೆ ಇಲ್ಲದ ದಿನದಿಂದಲೂ ಹೋರಾಟ ಮಾಡುತ್ತಿದ್ದೇವೆ. ಈ ವಿವಾದ ಬಗೆಹರಿಸಿಲ್ಲ ಅಂತ ಎಲ್ಲಾ ರಾಜಕಾರಣಿಗಳ ಬಗ್ಗೆ ಆಕ್ರೋಶ ಇದೆ. ಇಂದು ಗಂಭೀರ ಪರಿಸ್ಥಿತಿಯಲ್ಲಿ ರೈತರು ಧ್ವನಿ ಎತ್ತಿದ್ದಾರೆ ಎಂದು ಶ್ಲಾಘಿಸಿದರು. ಪಕ್ಷಭೇದ ಮರೆತು ಎಲ್ಲರೂ ಹೋರಾಟ ಮಾಡುತ್ತಿದ್ದಾರೆ. ● 7ನೇ ಪುಟಕ್ಕೆ

ಬೆಂಗಳೂರಲ್ಲಿ ಬಿಜೆಪಿಯ ಕಾವೇರಿ ಹೋರಾಟದ ಕಹಳೆ

ಮಾಜಿ ಮುಖ್ಯಮಂತ್ರಿಗಳಾದ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವರು ಪೊಲೀಸ್ ವಶಕ್ಕೆ

ಬೆಂಗಳೂರು, ಸೆ.23(ಕೆಎಂಶಿ)– ತಮಿಳುನಾಡಿಗೆ ಕಾವೇರಿ ನೀರು ಹರಿಸಿರುವುದರ ಹಿನ್ನೆಲೆಯಲ್ಲಿ ರಾಜ್ಯದ ಕೆಲವು ಭಾಗಗಳಲ್ಲಿ ಕಾವೇರಿ ಕಿಚ್ಚು ಹೊತ್ತಿಕೊಂಡಿದೆ.

ಕಾವೇರಿ ನೀರನ್ನೇ ನಂಬಿಕೊಂಡಿರುವ ಜಿಲ್ಲೆಗಳಲ್ಲಿ ರೈತರು ಮತ್ತು ಸಾರ್ವಜನಿಕರು ಬೀದಿಗಿಳಿದಿದ್ದಾರೆ. ಶನಿವಾರ ಮಂಡ್ಯ ಬಂದ್ ಯಶಸ್ವಿಯಾದ ಬೆನ್ನಲ್ಲೇ ಸೆಪ್ಟೆಂಬರ್ 26ರಂದು ಬೆಂಗಳೂರು ಬಂದ್‌ಗೆ ಸಂಘಟನೆಗಳು ಕರೆ ನೀಡಿವೆ. ಬಿಜೆಪಿ ಸೇರಿದಂತೆ ಕೆಲವು ಸಂಘಟನೆಗಳು ಇಂದು ರಸ್ತೆಗಿಳಿದು ಪ್ರತಿಭಟನೆ ನಡೆಸಿದವು. ಪ್ರತಿಭಟನೆಗೆ ಇಳಿದಿದ್ದ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ನಾಯಕರನ್ನು ಪೊಲೀಸರು ಬಂಧಿಸಿ, ನಂತರ ಬಿಡುಗಡೆ ಮಾಡಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಯಡಿಯೂರಪ್ಪ, ಬೊಮ್ಮಾಯಿ, ರಾಜ್ಯ ಕಾಂಗ್ರೆಸ್ ಪಕ್ಷ ತಮಿಳುನಾಡಿನ ಏಜೆಂಟರಂತೆ ವರ್ತಿಸುತ್ತಿದೆ, ಸುಪ್ರೀಂಕೋರ್ಟ್ ಹೇಳುವ ಮೊದಲೇ ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡಿದ್ದು ಅಕ್ಷಮ್ಯ ಅಪರಾಧ ಎಂದರು. ಮುಂದಿನ ದಿನಗಳಲ್ಲಿ ಮೈಸೂರು, ಬೆಂಗಳೂರಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದೆ ಎಂದು ಎಚ್ಚರಿಸಿದರು.

ಕಾಂಗ್ರೆಸ್ಸಿಗರಿಗೆ ಅಧಿಕಾರದಲ್ಲಿ ಮುಂದುವರೆಯಲು ಹಕ್ಕಿಲ್ಲ, ಸರಕಾರ ರಾಜೀನಾಮೆ ಕೊಡಲಿ ಎಂದು ಆಗ್ರಹಿಸಿದರು. ಕಾವೇರಿ ನದಿ ನೀರಿನ ಒಂದು ಹನಿಯನ್ನೂ ತಮಿಳುನಾಡಿಗೆ ಬಿಡಬಾರದು, ಕಾಂಗ್ರೆಸ್ ಸರ್ಕಾರ ತಮಿಳುನಾಡಿನ ಏಜೆಂಟರಂತೆ ● 7ನೇ ಪುಟಕ್ಕೆ



ಸೆ.26, 'ಬೆಂಗಳೂರು ಬಂದ್'

ಬೆಂಗಳೂರು: ಉದ್ಯಾನ ನಗರಿ ಬೆಂಗಳೂರು ಮತ್ತೆ ಬಂದ್ ಆಗಲಿದೆ. ಖಾಸಗಿ ಸಾರಿಗೆ ವಾಹನಗಳ ಸಂಘಟನೆಗಳು ಕೊಟ್ಟಿದ್ದ ಬಂದ್ ಕರೆಯಿಂದಾಗಿ ಸೆ. 11ರಂದು ಬೆಂಗಳೂರು ಬಂದ್ ಆಗಿತ್ತು. ಈಗ ಕಾವೇರಿ ಕೊಳ್ಳದ ಕನ್ನಡ ಪರ ಸಂಘಟನೆಗಳು ಸೆ.26ರಂದು ಬೆಂಗಳೂರು ಬಂದ್ ಕರೆ ಕೊಟ್ಟಿದ್ದು, ಅದರಂತೆ, ಮಂಗಳವಾರದಂದು (ಸೆ. 26) ಉದ್ಯಾನ ನಗರಿ ಪುನಃ ಬಂದ್ ಆಗಲಿದೆ. ಬೆಂಗಳೂರು ಬಂದ್‌ಗೆ ರಾಜ್ಯ ಬಿಜೆಪಿ ಬೆಂಬಲ ವ್ಯಕ್ತಪಡಿಸಿದೆ.

ತಮಿಳುನಾಡಿಗೆ ಕಾವೇರಿ ನೀರನ್ನು ಹರಿಸುತ್ತಿರುವ ರಾಜ್ಯ ಸರ್ಕಾರದ ಧೋರಣೆ ಹಾಗೂ ನೀರು ಹರಿಸುವಂತೆ ಸುಪ್ರೀಂಕೋರ್ಟ್ ಕೊಟ್ಟಿರುವ ತೀರ್ಪಿನ ವಿರುದ್ಧ ನಗರದ ಫ್ರೀಡಂ ಪಾರ್ಕ್‌ನಲ್ಲಿ ವಿವಿಧ ಕನ್ನಡಪರ ಸಂಘಟನೆಗಳು, ಕಬ್ಬು ಬೆಳೆಗಾರರು ಸಂಘಟನೆ ಹಾಗೂ ರೈತ ಪರ ಸಂಘಟನೆಗಳು ಸಭೆ ನಡೆಸಿ, ಬೆಂಗಳೂರು ಬಂದ್ ಪ್ರಸ್ತಾಪದ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ಸೋಮವಾರ ಅಥವಾ ಮಂಗಳವಾರ ಬೆಂಗಳೂರು ಬಂದ್ ಆಗಬೇಕು ಎಂಬ ಬಗ್ಗೆ ನಿರ್ಧಾರ ಮಾಡಲಾಯಿತು. ಆನಂತರ, ಸೋಮವಾರಕ್ಕಿಂತ ಮಂಗಳವಾರ ಬಂದ್ ಮಾಡುವುದು ಸೂಕ್ತ ಎಂದು ವಿವಿಧ ಸಂಘಟನೆಗಳ ನಾಯಕರು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದರು. ಅದರಂತೆ, ಮಂಗಳವಾರದಂದು ಬೆಂಗಳೂರು ಬಂದ್ ಮಾಡಲು ಅಧಿಕೃತವಾಗಿ ಕರೆ ಕೊಡಲಾಗಿದೆ. ● 7ನೇ ಪುಟಕ್ಕೆ

ದಯಮಾಡಿ ಬೆಂಗಳೂರು ಬಂದ್ ಮಾಡಬೇಡಿ...




ಬೆಂಗಳೂರು, ಸೆ.23(ಕೆಎಂಶಿ)– ಬೆಂಗಳೂರಿಗರ ಪರವಾಗಿ ಹೋರಾಟ ಮಾಡುತ್ತಿದ್ದೇವೆ. ದಯಮಾಡಿ ಬಂದ್‌ನಂತಹ ತಪ್ಪು ಮಾಡಬೇಡಿ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಮನವಿ ಮಾಡಿದರು.

ಸುದ್ದಿಗಾರರೊಂದಿಗೆ ಮತನಾಡಿದ ಅವರು, ರಾಜ್ಯದ ರೈತರ ಹಿತ ಕಾಯಲು ಸರ್ಕಾರ ಬದ್ಧವಾಗಿದೆ. ಆದರೂ ವಿರೋಧ ಪಕ್ಷಗಳು ಕಾವೇರಿ ಸಮಸ್ಯೆಗೆ ರಾಜಕೀಯ ಆಯಾಮ ನೀಡುತ್ತಿವೆ ಎಂದರು.

ಕಾವೇರಿ ನೀರು ಹರಿಸುವ ವಿಚಾರವಾಗಿ ಪ್ರಾಧಿಕಾರಕ್ಕೆ ರಾಜ್ಯ ಸರ್ಕಾರ ಮನವಿ ಸಲ್ಲಿಸಿದೆ. ಬಂದ್ ಮಾಡುವುದರಿಂದ ಯಾವುದೇ ಪ್ರಯೋಜನ ಇಲ್ಲ, ಯಾರೊಬ್ಬರೂ ಕಾನೂನು ಕೈಗೆ ಎತ್ತಿಕೊಳ್ಳಬಾರದು ಎಂದರು.

ರಾಜ್ಯದ ಹಿತ ಕಾಯುತ್ತಿದ್ದೇವೆ, ಹೋರಾಟ ಮಾಡಬಾರದು ಎಂದು ಹೇಳುವುದಿಲ್ಲ, ರೈತ ಸಂಘಟನೆ, ಕನ್ನಡ ಸಂಘಟನೆಗಳು, ಚಿತ್ರರಂಗ, ವಿರೋಧ ಪಕ್ಷಗಳ ಹೋರಾಟಕ್ಕೆ ಅಡ್ಡಿಪಡಿಸುವುದಿಲ್ಲ. ಆದರೆ ಪ್ರತಿಭಟನೆಯಿಂದ ಸಾರ್ವಜನಿಕರಿಗೆ ತೊಂದರೆ ಆಗಬಾರದು. ಬೆಂಗಳೂರಿನ ಘನತೆಗೆ ಧಕ್ಕೆ ● 9ನೇ ಪುಟಕ್ಕೆ

ಇನ್ನು 'ಕೊಡವ' ಪದ ಅಧಿಕೃತ


ಸಿದ್ದರಾಮಯ್ಯ


ಎ.ಎಸ್.ಪೊನ್ನಣ್ಣ


ಎನ್.ಯು.ನಾಚಪ್ಪ

ಮಡಿಕೇರಿ, ಸೆ.23–ಸರ್ಕಾರಿ ದಾಖಲೆಗಳಲ್ಲಿ ಇನ್ನು ಮುಂದೆ 'ಕೊಡವ' ಪದ ಬಳಕೆಗೆ ಸಂಪುಟ ಸಭೆ ಅನುಮೋದನೆ ನೀಡಿದೆ. ದಾಖಲೆಗಳಲ್ಲಿ ಕೊಡಗರು ಎನ್ನುವ ಪದ ಬಳಕೆಗೆ ಆಕ್ಷೇಪ ವ್ಯಕ್ತಪಡಿಸಿ 'ಕೊಡವ' ಶಾಸ್ತ್ರೀಯ ಪದ ಬಳಕೆಗಾಗಿ ಒತ್ತಾಯಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಿರಂತರವಾಗಿ ಹೋರಾಟ ನಡೆಸುತ್ತಾ ಬಂದಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಸಹಕಾರದೊಂದಿಗೆ ಸಿಎನ್‌ಸಿ ಅಧ್ಯಕ್ಷ ಎನ್.ಯು. ನಾಚಪ್ಪ ಸರ್ಕಾರದ ಗಮನ ಸೆಳೆದಿದ್ದರು. ಅದರಂತೆ 'ಕೊಡವ' ಪದ ಬಳಕೆಗೆ ಸಚಿವ ಸಂಪುಟದ ಅನುಮೋದನೆ ನೀಡಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ನಾಚಪ್ಪ ಅವರು, ಇದು ಸಿಎನ್‌ಸಿ ಹೋರಾಟದ ಫಲವಾಗಿದ್ದು, ಚಾರಿತ್ರಿಕ ಮೈಲುಗಲ್ಲಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು. 'ಕೊಡವ' ಪದವನ್ನು ಕ್ಯಾಬಿನೆಟ್ ನಿರ್ಣಯದ ಮೂಲಕ ಅಧಿಕೃತಗೊಳಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನುಡಿದಂತೆ ನಡೆದಿದ್ದಾರೆ. 'ಕೊಡವ' ಎನ್ನುವ ಉಜ್ವಲ ಶಾಸ್ತ್ರೀಯ ನಾಮಕ್ಕೆ ಶಾಸನಬದ್ಧ ಸ್ಥಿರೀಕರಣ ದೊರೆತಿದ್ದು, ಇದು ಸಿಎನ್‌ಸಿಯ ಮಹತ್ವದ ಮೈಲುಗಲ್ಲಾಗಿದೆ ಎಂದರು.

'ಕೊಡವ' ಎಂದು ನಮೂದಿಸದೆ 'ಕೊಡಗರು' ಎಂದು ನಮೂದಿಸುವ ಮೂಲಕ ಕೊಡವ ಬುಡಕಟ್ಟು ಆದಿಮ ಸಂಜಾತ ಮೂಲನಿವಾಸಿಗಳ ಅಸ್ತಿತ್ವದ ಬಗ್ಗೆ ಗೊಂದಲ ಮೂಡಿಸಲಾಗುತ್ತಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿ ಸಿಎನ್‌ಸಿ ಸಂಘಟನೆ 2008ರಿಂದಲೇ ಹೋರಾಟ ಆರಂಭಿಸಿತು. ಕೊಡವರ ಭಾವನೆಯನ್ನು ಅರ್ಥ ಮಾಡಿಕೊಂಡು ನಮ್ಮ ಬೇಡಿಕೆಯನ್ನು ಈಡೇರಿಸುವ ಮೂಲಕ ನ್ಯಾಯ ಒದಗಿಸುವ ಕೆಲಸವನ್ನು ಆಡಳಿತ ವ್ಯವಸ್ಥೆಗಳು ಇಲ್ಲಿಯವರೆಗೆ ಮಾಡಿರಲಿಲ್ಲ.

ಆದರೆ ವಿರಾಜಪೇಟೆ ಕ್ಷೇತ್ರದ ಶಾಸಕ ಎ.ಎಸ್.ಪೊನ್ನಣ್ಣ ಅವರು ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಯಂತೆ ಕ್ಯಾಬಿನೆಟ್‌ನಲ್ಲಿ 'ಕೊಡವ' ಎಂದು ನಮೂದಿಸುವ ಕುರಿತು ಅನುಮೋದನೆ ದೊರಕಿಸಿಕೊಟ್ಟಿದ್ದಾರೆ. ಇದು ನಮಗೆ ಸಿಕ್ಕ ದೊಡ್ಡ ಜಯವಾಗಿದ್ದು, ಇದಕ್ಕೆ ಕಾರಣಕರ್ತರಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಹಿಂದುಳಿದ ವರ್ಗಗಳ ಇಲಾಖೆಯ ಸಚಿವ ಶಿವರಾಜ್ ತಂಗಡಗಿ, ಶಾಸಕ ಎ.ಎಸ್.ಪೊನ್ನಣ್ಣ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರುಗಳಾಗಿದ್ದ ಸಮಾಜ ವಿಜ್ಞಾನಿ ಡಾ.ದ್ವಾರಕನಾಥ್, ಡಾ.ಜಯಪ್ರಕಾಶ್ ಹೆಗ್ಡೆ, ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್, ನ್ಯಾಯವಾದಿ ಬಲ್ಲಚಂಡ ಬೆಳ್ಳಿಯಪ್ಪ, ಸುದೀರ್ಘ ಹೋರಾಟದಲ್ಲಿ ಕೈಜೋಡಿಸಿದ ಸಿಎನ್‌ಸಿ ಸ್ವಯಂ ಸೇವಕರು, ಅಭಿಮಾನಿಗಳು, ಪ್ರತ್ಯಕ್ಷ–ಪರೋಕ್ಷವಾಗಿ ಬೆಂಬಲಿಸಿದವರಿಗೆ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.



ಈ ಬಾರಿ ಜಂಬೂಸವಾರಿಯಲ್ಲಿ ಗಜಪಡೆಯ ಸುತ್ತಮುತ್ತ ರಾಜಪರಂಪರೆಯ ವಸ್ತ್ರಧಾರಿಗಳೇ ರಾರಾಜಿಸಲಿದ್ದಾರೆ!

ಮೈಸೂರು,ಸೆ.23(ಪಿಎಂ)– ಈ ಬಾರಿಯ ದಸರಾ ಜಂಬೂಸವಾರಿ ಮೆರವಣಿಗೆಯಲ್ಲಿ ಅಂಬಾರಿ ಆನೆ ಸೇರಿದಂತೆ ಗಜಪಡೆಯ ಸುತ್ತಮುತ್ತ ಮೈಸೂರು ರಾಜ ಪರಂಪರೆ ರಾರಾಜಿಸಲು ಹೆಚ್ಚು ಒತ್ತು ಕೊಡಲಾಗುತ್ತಿದೆ. ಪೊಲೀಸ್ ಸಮವಸ್ತ್ರಧಾರಿಗಳೂ ಸೇರಿದಂತೆ ವಿಭಿನ್ನ ವಸ್ತ್ರಧಾರಿಗಳು ಗಜಪಡೆಯ ಸುತ್ತಮುತ್ತ ಕಂಡು ಬರುವುದು ಪ್ರತಿವರ್ಷ ಸಾಮಾನ್ಯ ಸಂಗತಿಯಾಗಿತ್ತು. ● 9ನೇ ಪುಟಕ್ಕೆ

ಮಳೆ ಕೊರತೆ; ರಾಜ್ಯದ ಹಲವೆಡೆ ಬರದ ಛಾಯೆ ಹಿನ್ನೆಲೆ...

ಈ ಬಾರಿ ಸರಳವೂ ಅಲ್ಲದ, ಅದ್ಧೂರಿಯೂ ಇಲ್ಲದ ಸಾಂಪ್ರದಾಯಿಕ ದಸರಾ ಆಚರಣೆ

- ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ
- ಅದ್ಧೂರಿ ಯುವ ದಸರಾವಿಲ್ಲ; ದೀಪಾಲಂಕಾರ ಯಥಾಸ್ಥಿತಿ

ಮೈಸೂರು,ಸೆ.23(ಪಿಎಂ)– ಮಳೆಯ ಕೊರತೆಯಿಂದ ರಾಜ್ಯದ ಹಲವು ತಾಲೂಕುಗಳಲ್ಲಿ ಬರವಿರುವ ಹಿನ್ನೆಲೆಯಲ್ಲಿ ಈ ಬಾರಿ ಸರಳವೂ ಅಲ್ಲದ, ಅದ್ಧೂರಿಯೂ ಇಲ್ಲದ ಸಾಂಪ್ರದಾಯಿಕ ದಸರಾ ಆಚರಣೆಗೆ ರಾಜ್ಯ ಸರ್ಕಾರ ಮತ್ತು ದಸರಾ ಕಾರ್ಯಕಾರಿ ಸಮಿತಿ ತೀರ್ಮಾನಿಸಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರು ಅರಮನೆ ಮಂಡಳಿಯ ಸಭಾಂಗಣದಲ್ಲಿ ಶನಿವಾರ ದಸರಾ ಉಪಸಮಿತಿಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅದ್ಧೂರಿ ದಸರಾ ಆಚರಿಸಬೇಕೆಂಬ ಪ್ರಸ್ತಾವನೆಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ್ದೆವು. ತಾತ್ವಿಕವಾಗಿ ಅವರೂ ಒಪ್ಪಿಗೆ ಕೊಟ್ಟಿದ್ದರು. ಆದರೆ ಬದಲಾದ ಸನ್ನಿವೇಶದಲ್ಲಿ ರಾಜ್ಯದಲ್ಲಿ ಹಲವೆಡೆ ಬರ ಪರಿಸ್ಥಿತಿ ಇರುವ ಕಾರಣ ಜವಾಬ್ದಾರಿಯುತ ಸರ್ಕಾರವಾಗಿ ಅದ್ಧೂರಿ ದಸರಾ ಆಚರಣೆ ಸೂಕ್ತವಲ್ಲವೆನ್ನಿಸಿ, ಸರಳವೂ ಇರದೇ, ಅದ್ಧೂರಿಯೂ ಇರದೇ ಸಾಂಪ್ರದಾಯಿಕವಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದರು.



ಮೈಸೂರು ಅರಮನೆ ಮಂಡಳಿಯ ಸಭಾಂಗಣದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿದರು.

ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಈ ಬಾರಿ ಅದ್ಧೂರಿ ದಸರಾ ಆಚರಿಸಲು ತೀರ್ಮಾನಿಸಲಾಗಿತ್ತು. ಆದರೆ ಇದೀಗ ಮಳೆಯ ಪ್ರಮಾಣವು ಕಳೆದ 100 ವರ್ಷಗಳಲ್ಲಿ ಆಗದಷ್ಟು ಈ ಬಾರಿ ಕಡಿಮೆಯಾಗಿದೆ. ನಮ್ಮ ಜಲಾಶಯಗಳು ಬರಿದಾಗಿವೆ. ಬೆಳೆ ಮತ್ತು ಕುಡಿಯುವ ನೀರಿಗೆ 106 ಟಿಎಂಸಿ ನೀರು ಅಗತ್ಯವಿದ್ದು, ಈಗ ಕೇವಲ 49 ಟಿಎಂಸಿ ಅಷ್ಟೇ ನೀರಿದೆ ಎಂದರು. ರಾಜ್ಯದ 195 ತಾಲೂಕುಗಳನ್ನು ಬರಪೀಡಿತವೆಂದು ನಿನ್ನೆ ಸಚಿವ ಸಂಪುಟ ಸಭೆಯಲ್ಲಿ ಘೋಷಣೆ ಮಾಡಲಾಗಿದೆ.ಇನ್ನು 20ರಿಂದ 30 ತಾಲೂಕುಗಳು ಬರದ ವ್ಯಾಪ್ತಿಗೆ ಬರಬಹುದು. ಇಂತಹ ಸಂಕಷ್ಟದ ಪರಿಸ್ಥಿತಿಯಲ್ಲಿ ನಾವು ಉದ್ದೇಶಿಸಿದ್ದ ಅದ್ಧೂರಿ ದಸರಾ ಆಚರಣೆ ಮಾಡುವುದು ಸೂಕ್ತವಲ್ಲವೆಂದು ಸಾಂಪ್ರದಾಯಿಕ ಆಚರಣೆಯ ತೀರ್ಮಾನಕ್ಕೆ ಬರಲಾಗಿದೆ. ಮುಖ್ಯಮಂತ್ರಿಗಳೂ ಇದೇ ಸೂಚನೆ ನೀಡಿದ್ದಾರೆ ಎಂದು ವಿವರಿಸಿದರು.

ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಖರ್ಚು–ವೆಚ್ಚಗಳಿಗೆ ಕಡಿವಾಣ ಹಾಕಲಾಗುವುದು. ಉಳಿದಂತೆ ಸಾಂಪ್ರದಾಯಿಕ ದಸರಾ ನಡೆಯಲಿದೆ. ಸಾಂಪ್ರದಾಯಿಕವಾಗಿ ದಸರಾ ನಡೆಯುತ್ತಿದ್ದ ಹಿನ್ನೆಲೆಯೇ ಬೇರೆ ಇತ್ತು. ವರ್ಷದಿಂದ ವರ್ಷಕ್ಕೆ ದಸರಾ ಆಚರಣೆಯಲ್ಲಿ ಬೇರೆ ಬೇರೆ ಕಾರ್ಯಕ್ರಮಗಳು ಸೇರ್ಪಡೆಗೊಂಡಿವೆ. ಇದರ ಪರಿಣಾಮ ಮೂಲ ಉದ್ದೇಶಗಳು ಸೇರಿದಂತೆ ಇತರ ವೈಭವದ ಚರಿತ್ರೆಯ ವಿಚಾರಗಳು ಗೌಣವಾಗುತ್ತಿವೆ. ಅಂತಹ ಎಲ್ಲವನ್ನೂ ಗುರುತಿಸಿ ಅವುಗಳಿಗೆ ಮತ್ತೆ ಜೀವ ತುಂಬಿ ಸಾಂಪ್ರದಾಯಿಕ ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಉದ್ಯೋಗಿ : "ನಾನು ಎರಡು ಗಂಟೆ ಬೇಗನೆ ಮನೆಗೆ ಹೋಗಲೇ ಸರ್? ನನ್ನ ಪತ್ನಿ ಶಾಪಿಂಗ್‌ಗೆ ಬರಲು ಹೇಳಿದ್ದಾಳೆ."

ಬಾಸ್ : "ಸಾಧ್ಯವೇ ಇಲ್ಲ."

ಉದ್ಯೋಗಿ : "ಥ್ಯಾಂಕ್ಸ್ ಸರ್. ನನ್ನನ್ನು ಉಳಿಸಿದ್ರಿ!"

ಮೈಸೂರು ಮಿತ್ರ

ಭಾನುವಾರ, 24 ಸೆಪ್ಟೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ವಿಚಾರದಲ್ಲಿ ಉದಾರತನ, ಕೃತಿಯಲ್ಲಿ ಮಾನವೀಯತೆ,
ವಿಜಯದಲ್ಲಿ ಸಂಯಮ ಉಳ್ಳವನೇ ದೊಡ್ಡವನು –ಬಿಸ್ಮಾರ್ಕ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಪಾತ್ರವರಿತು ದಾನ
ಕ್ಷೇತ್ರವರಿತು ಬೀಜ

ನಿಮ್ಮ ಪತ್ರಗಳು

ಸುತ್ತೂರು ಮಾರ್ಗದ ರಸ್ತೆ ಗುಂಡಿ ಮುಚ್ಚಿಸಿ



ಮಾನ್ಯರೆ,

ಮೈಸೂರಿನಿಂದ ವರುಣ ಮಾರ್ಗವಾಗಿ ಸುತ್ತೂರಿಗೆ ಹೋಗುವ ರಸ್ತೆಯಲ್ಲಿ ಮರಡಿಹುಂಡಿ ಗೇಟ್‌ನಿಂದ ಹೊಸಕೋಟೆ ಮಾರ್ಗದ ಮಧ್ಯೆ, ಅಲ್ಲಲ್ಲಿ ರಸ್ತೆಗಳು ಗುಂಡಿಮಯವಾಗಿದ್ದು, ವಾಹನ ಸವಾರರಿಗೆ ಅನಾನುಕೂಲವಾಗಿದೆ. ಅದರಲ್ಲೂ ದ್ವಿಚಕ್ರ ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದೆ. ಅಲ್ಲಲ್ಲಿ ರಸ್ತೆಗೆ ಡಾಂಬರ್ ಪ್ಯಾಚ್ ಹಾಕಿದ್ದು, ಆ ಡಾಂಬರು ಹೋಗಿ ದೊಡ್ಡ ದೊಡ್ಡ ಗುಂಡಿಗಳಾಗಿವೆ. ಅರ್ಧಂಬರ್ಧ ಕಾಮಗಾರಿ ನಡೆದಿದ್ದು, ಗುಣಮಟ್ಟದ ಕಾಮಗಾರಿಯು ಆಗಿರುವುದಿಲ್ಲ. ಈ ಗುಂಡಿಗಳು ವಾಹನ ಸವಾರರಿಗೆ ಕಾಣದೆ ಆಯತಪ್ಪಿ ಬಿದ್ದಿರುವ ಘಟನೆಗಳು ವರದಿಯಾಗಿವೆ. ಸುತ್ತೂರು ಶ್ರೀಕ್ಷೇತ್ರ ದರ್ಶನ ಮತ್ತು ಶ್ರೀ ಮಠಕ್ಕೆ ಪ್ರತಿದಿನ ನೂರಾರು ಭಕ್ತರು, ರಾಜ್ಯದ ಮೂಲೆ ಮೂಲೆಯಿಂದ ಪ್ರವಾಸಿಗರು, ವಿದ್ಯಾರ್ಥಿಗಳು, ನೌಕರ ವರ್ಗದವರು, ವಿದ್ಯಾರ್ಥಿಗಳ ಪೋಷಕರ ವೃಂದ ಆಗಮಿಸುತ್ತಾರೆ. ಹೆಚ್ಚಿನ ಅಪಾಯ ಆಗುವುದಕ್ಕೂ ಮುಂಚೆ, ಈಗಲೇ ಎಚ್ಚೆತ್ತುಕೊಂಡು ಇದಕ್ಕೆ ಸಂಬಂಧಪಟ್ಟವರು ದಯವಿಟ್ಟು ಕ್ರಮವಹಿಸಿ, ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ಸಂವಿಧಾನ ಪೂರ್ವ ಪೀಠಿಕೆ ಬದಲಾವಣೆ:ಕಾನೂನು ಉಲ್ಲಂಘನೆ

ಮಾನ್ಯರೆ,

ನೂತನ ಸಂಸತ್ ಭವನದಲ್ಲಿ ನಡೆಯುತ್ತಿರುವ ಮೊದಲ ಅಧಿವೇಶನದಲ್ಲಿ ಸಂಸದರಿಗೆ ವಿತರಿಸಿದ್ದ ಸಂವಿಧಾನ ಪ್ರತಿಯ ಪೂರ್ವ ಪೀಠಿಕೆಯಲ್ಲಿ "ಸಮಾಜವಾದ, ಜಾತ್ಯತೀತ ಮತ್ತು ಸಮಗ್ರತೆ" ಪದಗಳನ್ನು ಕೈಬಿಟ್ಟಿರುವುದು ಭಾರತ ಸಂವಿಧಾನಕ್ಕೆ ಅಗೌರವ ತೋರಿದ ನಡೆಯಾಗಿದೆ. ಇದನ್ನು ಪ್ರಶ್ನಿಸಿದ ವಿರೋಧ ಪಕ್ಷದವರಿಗೆ ಕೇಂದ್ರ ಕಾನೂನು ಸಚಿವರು ಮೂಲ ಸಂವಿಧಾನ ಪೀಠಿಕೆಯೊಂದಿಗೆ, ಪ್ರಸ್ತುತ ಜಾರಿಯಲ್ಲಿರುವ ಸಂವಿಧಾನ ಪತ್ರವನ್ನು ನೀಡಿದ್ದೇವೆ ಎಂದು ಹಾರಿಕೆಯ ಉತ್ತರ ನೀಡಿದ್ದಾರೆ. ಪೂರ್ವ ಪೀಠಿಕೆಯು ಭಾರತ ಸಂವಿಧಾನದ ಬಹುಮುಖ್ಯ ಭಾಗವಾಗಿದ್ದು, ವಿರೋಧ ಪಕ್ಷಗಳಿಗೆ ಕೇಂದ್ರ ಕಾನೂನು ಸಚಿವರು ನೀಡಿದ ಉತ್ತರದಲ್ಲಿ ಯಾವುದೇ ಹುರುಳಿಲ್ಲ. ಸಂವಿಧಾನದ ಮೂಲತತ್ವಕ್ಕೆ ಧಕ್ಕೆಯಾಗಬಾರದು ಎಂದು ಈ ಹಿಂದೆ ಹಲವು ಪ್ರಕರಣಗಳಲ್ಲಿ ಸುಪ್ರಿಂ ಕೋರ್ಟ್ ಹೇಳಿದೆ. ಹೀಗಿದ್ದರೂ ಕೇಂದ್ರ ಸರ್ಕಾರವು ಅನಧಿಕೃತವಾಗಿ ಸಂವಿಧಾನ ಪೂರ್ವ ಪೀಠಿಕೆಯನ್ನು ಬದಲಾಯಿಸುವುದರ ಮೂಲಕ ಈ ನೆಲದ ಕಾನೂನನ್ನು ಉಲ್ಲಂಘನೆ ಮಾಡಿದೆ. ಈ ವಿಷಯದಲ್ಲಿ ಸುಪ್ರಿಂ ಕೋರ್ಟ್‌ನ ಪಾತ್ರ ಪ್ರಸ್ತುತ ಅಗತ್ಯವಿದೆ.

–ಪ್ರಸಾದ್ ಜಿ.ಎಂ, ಮೈಸೂರು.

ದಸರೆಯಲ್ಲಿ ಹಂಸಲೇಖ ವೃಂದದವರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವಂತಾಗಲಿ

ಮಾನ್ಯರೆ,

ಇನ್ನೇನು ಕೆಲವೇ ದಿನಗಳಲ್ಲಿ ನಾಡಹಬ್ಬ ದಸರಾ ಬರಲಿದೆ. ನಾಡಲ್ಲೆಲ್ಲಾ ಸಂತಸದ ಹೊನಲು ಹರಿಯಲಿದೆ. ಮುಖ್ಯಮಂತ್ರಿಗಳ ಘೋಷಣೆಯಂತೆ ಈ ಬಾರಿ ಖ್ಯಾತ ಸಂಗೀತ ನಿರ್ದೇಶಕ ಹಾಗೂ ಸಾಹಿತಿ ಹಂಸಲೇಖ ಅವರು ದಸರಾ ಮಹೋತ್ಸವವನ್ನು ಉದ್ಘಾಟಿಸಲಿದ್ದಾರೆ. ಎಲ್ಲೆಲ್ಲೂ ಸಾಂಸ್ಕೃತಿಕ ಹಬ್ಬಗಳ ಸೊಬಗು ಹರಿಯಲಿದೆ. ರಾಜಮನೆತನದ ಈ ಹಬ್ಬ ಅತೀ ವಿಜೃಂಭಣೆಯಿಂದ ಕಳೆಗಟ್ಟುವುದು. ಈ ವಿಜೃಂಭಣೆ ದ್ವಿಗುಣಗೊಳ್ಳಲು ಜನತೆಯ ಆಶಯ ಒಂದೇ ಉದ್ಘಾಟಕರ ವೃಂದದಿಂದ ದಸರಾ ಮಹೋತ್ಸವದ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಬೇಕೆಂಬುದು. ನಮ್ಮೆಲ್ಲರ ಆಶಯದಂತಾದರೆ ದಸರಾ ಸಂದರ್ಭದಲ್ಲಿ ಮೈಸೂರು ದಸರಾ ಹಂಸ ದಸರಾವಾಗುವುದು. ಮಾಧುರ್ಯದ ಕಂಪಿನಲ್ಲಿ ನಾಡ ಜನತೆ ತೇಲಾಡುವರು. ಕಣ್ಣಿಗೂ ಕಿವಿಗೂ ಹಾಗೂ ಮನಸ್ಸಿಗೂ ಮುದ ನೀಡುವುದು. ಈ ಸುಸಂದರ್ಭ ಒದಗಿ ಬರಲೆಂದು ದೇವರಲ್ಲಿ ಮೊರೆ ಇಡುತ್ತೇನೆ. ಮೈಸೂರು ಜನತೆ ಎಲ್ಲರೂ ಕಾತುರದಿಂದ ಕಾಯುತ್ತಿದ್ದಾರೆ. ಈ ದಸರಾ ಸೊಗಸನ್ನು ಸವಿಯಲೆಂದು ಆದರೆ ಬರಗಾಲವೆಂಬ ಕಪ್ಪುಛಾಯೆ ನಮ್ಮೆಲ್ಲರನ್ನು ಆವರಿಸಿಬಿಟ್ಟಿದೆ. ಸರಳ ಹಾಗೂ ಅರ್ಥಪೂರ್ಣವಾದ ಮನಸ್ಸಿಗೆ ಹಿತ ನೀಡುವ ಸುಂದರ ದಸರಾ ಆಚರಿಸಿ ಹೆಮ್ಮೆಯಿಂದ ಹಿಗ್ಗಿನಲ್ಲಿ ತೇಲೋಣವಾ. ಈ ಸುಂದರ ಕಾರ್ಯಕ್ರಮವನ್ನು ನಡೆಸಿಕೊಡಲು ಹಂಸಲೇಖ ಅವರು ಒಪ್ಪಿಗೆ ಸೂಚಿಸುವಂತಾಗಲಿ. ಜೈ ಚಾಮುಂಡಿ?..!

–ಅನಿಲ್ ರಾಜ, ಸಹ ಶಿಕ್ಷಕರು. ಮೈಸೂರು

ಸತ್ಯ

ಮಾನ್ಯರೆ,

ಇದೊಂದು ಪ್ರಾಚೀನ ವಾಕ್ಯ ಮಾಣಿಕ್ಯ:

ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್
ಉದಾರ ಚರಿತಾನಾಂತು ವಸುದೈವ ಕುಟುಂಬಕಮ್

(ಇವನು ನನ್ನವನು, ಇವನು ಪರಕೀಯ ಎಂಬ ಭಾವನೆ ಲಘು ಮನಸ್ಕರದು. ಉದಾರ ಚರಿತರ ಪಾಲಿಗಾದರೋ ಜಗತ್ತೇ (ಒಂದು ಸಣ್ಣ ಕುಟುಂಬ). ಇದೀಗ ತಾತ್ತ್ವಿಕವಾಗಿಯಾದರೂ ಸತ್ಯವಾಗುತ್ತಿರುವುದು ಆಶ್ಚರ್ಯದ, ಸಂತಸದ ಸಂಗತಿಯಲ್ಲವೆ? (ಜಿ–20)

'ಭಾ' ರಥ–ಶಪಥ!
ದೇಶದ ಹೆಸರಿರಲಿ
'ಭಾರತ';
ಸುಗಮವಾಗಲಿ ಪಥ;
ಸಲೀಸಾಗಿ, ಸಲೀಲವಾಗಿ
ಸಾಗಲಿ ರಾಷ್ಟ್ರರಥ !
("ದೇಶಕ್ಕಾಗಿ ನಮ್ಮ ದುಡಿಮೆ" ಎಂಬುದಾಗಲಿ ಶಪಥ!)

–ಸಿಪಿಕೆ, ಮೈಸೂರು.

ಮಹಾತ್ಯಾಗಿ ತಾತಯ್ಯನವರು...



ಎಂ. ವೆಂಕಟಕೃಷ್ಣಯ್ಯ

ಅನಾಥರಾಗಿ ಮೈಸೂರಿಗೆ ಬಂದು ಬಾಳಿನುದ್ದಕ್ಕೂ ವೆಂಕಟಕೃಷ್ಣಯ್ಯನವರು ಕಷ್ಟಗಳನ್ನು ಅನುಭವಿಸಿದ್ದರೂ ಮುಂದಿನ ತಲೆಮಾರಿನವರಿಗೆ ಮೈಸೂರಿಗೆ ಓದಲು ಬಂದಾಗ ಅವರಿಗೆ ಉಚಿತವಾಗಿ ಊಟ, ವಸತಿ ನೀಡುವ ವ್ಯವಸ್ಥೆಯನ್ನು ನೀಡಲು ಅನುಕೂಲವಾಗುವಂತೆ ಅನಾಥಾಲಯವನ್ನು ಸ್ಥಾಪಿಸಿರುವುದು, ಅನಾಥರ ಬಾಳಿಗೆ ಬೆಳಕು ಚೆಲ್ಲಿದ ಮಹಾನ್ ಚೇತನರು.

ಮೈಸೂರಿನ ಅನಾಥಾಲಯದ ಆವರಣದಲ್ಲಿ ಸೆ.24ರಂದು ಎಂ.ವೆಂಕಟಕೃಷ್ಣಯ್ಯ(ತಾತಯ್ಯ)ನವರ 179ನೇ ಜಯಂತ್ಯುತ್ಸವ ಹಾಗೂ ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ ಹಾಗೂ ತಾತಯ್ಯ ಶ್ರೀ ಫಲಾನುಭವಿ ಸಾಧಕ ಪ್ರಶಸ್ತಿ ವಿತರಣಾ ಸಮಾರಂಭ ನಡೆಯಲಿದೆ. ಅಂದು ಸಂಜೆ 4.30 ಗಂಟೆಗೆ ನಡೆಯುವ ಸಮಾರಂಭದಲ್ಲಿ ಅನಾಥಾಲಯದ ಅಧ್ಯಕ್ಷ ಸಿ.ವಿ.ಗೋಪಿನಾಥ್ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಪತ್ರಕರ್ತ ಅಜಿತ್ ಹನುಮಕ್ಕನವರ್ ಮುಖ್ಯ ಅತಿಥಿಗಳಾಗಿರುವರು. ಈ ವೇಳೆ ನಾಡೋಜ ಪ್ರಶಸ್ತಿ ಪುರಸ್ಕೃತ ಡಾ.ಶ್ರೀ ಭಾಷ್ಯಂ ಸ್ವಾಮೀಜಿ ಅವರಿಗೆ ಎಂ.ವೆಂಕಟಕೃಷ್ಣಯ್ಯ ಪ್ರಶಸ್ತಿ ಹಾಗೂ ಕೀಲು ಮತ್ತು ಮೂಳೆ ತಜ್ಞ ಡಾ.ಉದಯಶಂಕರ್ ಹೆಚ್.ಜಿ. ಅವರಿಗೆ ತಾತಯ್ಯ ಶ್ರೀ ಫಲಾನುಭವಿ ಸಾಧಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು.



ಪದ್ಮಭೂಷಣ ಹಾಗೂ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪುರಸ್ಕೃತ ಲೇಖಕರು ಹಾಗೂ ಅನಾಥಾಲಯದ ಓರ್ವ ವಿದ್ಯಾರ್ಥಿಯೂ ಆದ ಡಾ.ಎಸ್.ಎಲ್.ಭೈರಪ್ಪ ಅವರು 1950ರ ದಶಕದಲ್ಲಿ ವಾರದಲ್ಲಿ 4 ದಿವಸ ಇಲ್ಲಿ ಉಚಿತ ಭೋಜನ ಸ್ವೀಕರಿಸುತ್ತಿದ್ದರು. ಡಾ.ಎಸ್.ಎಲ್.ಭೈರಪ್ಪ ಅವರನ್ನು ಇತ್ತೀಚೆಗೆ ಅವರ ನಿವಾಸದಲ್ಲಿ ಅನಾಥಾಲಯದ ಟ್ರಸ್ಟಿ ಚಿತ್ಕಲಾ ಅರುಣ್, ಅಧ್ಯಕ್ಷರಾದ ಸಿ.ವಿ.ಗೋಪಿನಾಥ್, ಕಾರ್ಯದರ್ಶಿ ಹೆಚ್.ಅಶ್ವಥ್ ನಾರಾಯಣ್ ಅಭಿನಂದಿಸಿದರು.

ಇಂದು (ಭಾನುವಾರ) ಎಂ.ವೆಂಕಟಕೃಷ್ಣಯ್ಯ (ತಾತಯ್ಯ)ನವರ 179ನೇ ಜಯಂತ್ಯುತ್ಸವ ನಿಮಿತ್ತ ಈ ಲೇಖನ

ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರಹಃ, ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರುವೇ ನಮಃ ನಮ್ಮ ಭಾರತೀಯ ಸಂಸ್ಕೃತಿಯಲ್ಲಿ "ಗುರುವಿಗೆ ಇರುವ ಪವಿತ್ರವಾದ ಸ್ಥಾನ. ತಂದೆ–ತಾಯಿಗಳ ನಂತರದ ಅತ್ಯಂತ ಪೂಜನೀಯ ವ್ಯಕ್ತಿ ಗುರು. ಊರಿಗೆ

ಅರಸನಾದರೂ ತಂದೆ–ತಾಯಿಗೆ ಮಗ ಎಂಬ ಗಾದೆಯಂತೆ ವ್ಯಕ್ತಿಯೊಬ್ಬ ಎಂತಹುದೇ ಉನ್ನತ ಸ್ಥಾನದಲ್ಲಿದ್ದರೂ, ದೊರೆ–ಚಕ್ರವರ್ತಿಯಾಗಿದ್ದರೂ, ದೊಡ್ಡ ಅಧಿಕಾರಿಯಾಗಿದ್ದರೂ ಅವರು ಗುರುವಿನ ಮುಂದೆ ಶಿಷ್ಯ ಮಾತ್ರ, ಅಂತಹ ವಿರಳರಲ್ಲಿ ವಿರಳ ಸ್ವಭಾವವನ್ನು, ಜೀವನದಲ್ಲಿ ಅಳವಡಿಸಿಕೊಂಡಿದ್ದ ಅಪ್ಪಟ ದೇಶಾಭಿಮಾನಿ, ಅನಾಥ ರಕ್ಷಕ, ಸ್ಥಿತಪ್ರಜ್ಞ, ಆಪದ್ಬಾಂಧವ, ಆದರ್ಶ ಶಿಕ್ಷಕ, ಶಿಕ್ಷಣ ತಜ್ಞ, ಸರಳ ಸಜ್ಜನಿಕೆಯ, ಹಿರಿಯ ವ್ಯಕ್ತಿತ್ವವನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದ ವೃದ್ಧ ಪಿತಾಮಹ, ದಯಾಸಾಗರ ಎಂ. ವೆಂಕಟಕೃಷ್ಣಯ್ಯನವರು.

ಎಂ.ವೆಂಕಟಕೃಷ್ಣಯ್ಯನವರು ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆಯ ಮಗ್ಗೆ ಗ್ರಾಮದಲ್ಲಿ 1844 ಸೆಪ್ಟೆಂಬರ್ 5ರಂದು ಜನಿಸಿದರು. ತಂದೆ ವೇದಮೂರ್ತಿ ತಾಯಿ ಭಾಗೀರಥಮ್ಮ, ತೀರಾ ಚಿಕ್ಕವರಿದ್ದಾಗಲೇ ತಂದೆಯನ್ನು ಕಳೆದುಕೊಂಡರು. ಸಂಸಾರ ನಿರ್ವಹಿಸುವ ಪೂರ್ಣ ಹೊಣೆ ತಾಯಿಯವರ ಮೇಲೆ ಬಿತ್ತು. ಹೊಟ್ಟೆಪಾಡಿಗಾಗಿ ಹಳ್ಳಿಯಲ್ಲಿ ಬೇರೆ ದಾರಿ ಕಾಣದೆ ಇಡೀ ಸಂಸಾರ ಮೈಸೂರಿಗೆ ವಲಸೆ ಹೊರಟಿತು. ಖಿಲ್ಲೆ ಮೊಹಲ್ಲಾ ಸೌದೆ ಕೊಪ್ಪಲಿನಲ್ಲಿ ವಾಸ, ಕುದುರೆ ಲಾಯವೇ ಆಶ್ರಯ ತಾಣವಾಯಿತು.

ಅಕ್ಕಪಕ್ಕದ ಮನೆಗಳಲ್ಲಿ ಮನೆಗೆಲಸ ಮಾಡಿ ಜೀವನ ಸಾಗಿಸಲು ಆರಂಭಿಸಿದರು. ವಯಸ್ಸಾದ ಮೇಲೆಯೇ ದಾಖಲಾದ ವೆಂಕಟಕೃಷ್ಣಯ್ಯನವರು ರಾಜ ಶಾಲೆಯಲ್ಲಿ ಶಿಕ್ಷಣವನ್ನು ಮುಂದುವರೆಸಿದರು. ಆದರೇನು, ಹದಗೆಟ್ಟ ಆರ್ಥಿಕ ಪರಿಸ್ಥಿತಿಯ ಕಾರಣ ವಿದ್ಯಾಭ್ಯಾಸಕ್ಕೆ ಶರಣು ಹೊಡೆಯಬೇಕಾಯಿತು. ಜೀವನದ ತಕ್ಕಡಿ ತೂಗಿಸಲು ಮನೆಪಾಠ ಹೇಳುತ್ತಿದ್ದರು. ಜೊತೆಗೆ ಯುರೋಪಿಯನ್ ಧರ್ಮ ಪ್ರಚಾರಕರಿಗೂ ಕನ್ನಡ ಕಲಿಸುತ್ತಿದ್ದರು. ಶಿಕ್ಷಣ ನಿಂತರೂ ವೆಂಕಟಕೃಷ್ಣಯ್ಯನವರ ಅಧ್ಯಯನ ಆಸಕ್ತಿ ಕುಂಠಿತವಾಗಲಿಲ್ಲ. ಬಿಡುವಿನ ಸಮಯದಲ್ಲಿ ಇತಿಹಾಸ, ಸಮಾಜಶಾಸ್ತ್ರ, ತತ್ವಶಾಸ್ತ್ರ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ಆಳವಾಗಿ ಅಭ್ಯಾಸ ಮಾಡುತ್ತಿದ್ದರು.

ಮಹಾನ್ ಆದರ್ಶ ವ್ಯಕ್ತಿಗಳ ಜೀವನ ಚರಿತ್ರೆ ಅವರ ಮೇಲೆ ಅಗಾಧವಾದ ಪರಿಣಾಮ ಬೀರಿತು. ಜೀವನಕ್ಕಾಗಿ ಹೋರಾಟ ನಡೆಸುತ್ತಿದ್ದ ಕಾಲದಲ್ಲಿ ಆಕಸ್ಮಿಕವಾಗಿ ದಿವಾನ್ ರಂಗಾಚಾರ್ಲು ಅವರ ಪರಿಚಯ ಬೆಳೆಯಿತು. ದಿವಾನ್ ರಂಗಾಚಾರ್ಲು ಅವರ ಮಗನಿಗೆ ಖಾಸಗಿ ಶಿಕ್ಷಕರಾಗಿ ಪಾಠ ಹೇಳಿದ ನಿಮಿತ್ತ ಗುರುಕಾಣಿಕೆಯಾಗಿ ಒಂದು ರೂ ನೀಡಿದಾಗ ತಾತಯ್ಯನವರಿಗೆ ಎಲ್ಲಿಲ್ಲದ ಸಂತೋಷ, ಈ ಹಣದಲ್ಲಿ ಪುಸ್ತಕವನ್ನು ತೆಗೆದುಕೊಂಡು ಓದುತ್ತೇನೆ ಎಂದು ಹೇಳಿದ್ದರಂತೆ. ಇದು ಅಂದಿನ ಕಾಲದಲ್ಲಿ ಅವರು ಪುಸ್ತಕವನ್ನು ಆಸಕ್ತಿಯಿಂದ ಓದಿ ಜ್ಞಾನದಾಹವನ್ನು ನಿಗಿಸಿಕೊಳ್ಳುತ್ತಿದ್ದರು ಎಂಬುದಕ್ಕೆ ನಿದರ್ಶನವಾಗಿದೆ. ಸರಿ ಸುಮಾರು 1874–75ರಲ್ಲಿ ವೆಂಕಟಕೃಷ್ಣಯ್ಯನವರಿಗೆ ಉದ್ಯೋಗ ದೊರಕಿತು. ಹತ್ತು ರೂ. ಮಾಸಿಕ ವೇತನದ ಮೇಲೆ ಮರಿಮಲ್ಲಪ್ಪ ಶಾಲೆಯಲ್ಲಿ ಆಂಗ್ಲ ಭಾಷಾ ಅಧ್ಯಾಪಕರಾದರು. ಇದಕ್ಕೆ ಕಾರಣ ದಿವಾನ್ ಸಿ.ರಂಗಾಚಾರ್ಲು ಅವರ ಶಿಫಾರಸ್ಸು. ಮರಿಮಲ್ಲಪ್ಪ ಶಾಲೆ ಅಭಿವೃದ್ಧಿಗೆ ವೆಂಕಟಕೃಷ್ಣಯ್ಯ ಸತತವಾಗಿ ದುಡಿದರು. ಈ ಶ್ರಮಕ್ಕೆ ಪ್ರತಿಫಲವಾಗಿ 1882ರಲ್ಲಿ ಮುಖ್ಯೋಪಾಧ್ಯಾಯ ಪದವಿ ಲಭಿಸಿತು. ವೇತನ 25ಕ್ಕೆ ಏರಿತು.

ವಿದ್ಯಾರ್ಥಿಗಳ ಆಸಕ್ತಿ ಕೆರಳಿಸಿ, ಮನ ಮುಟ್ಟುವಂತೆ ಪಾಠ ಮಾಡುವ ಕಲೆ ತಾತಯ್ಯನವರಿಗೆ ಕರಗತವಾಗಿತ್ತು. ಗೌತಮ ಬುದ್ಧ, ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಜೇಮ್ಸ್ ಗಾರ್ಫೀಲ್ಡ್ ಮುಂತಾದ ಮಹಾನುಭಾವರ ಕಥೆಗಳನ್ನು ರೋಚಕವಾಗಿ ಹಾಗೂ ಸವಿಸ್ತಾರವಾಗಿ ವಿವರಿಸುತ್ತಿದ್ದರಂತೆ. ವಿದ್ಯಾರ್ಥಿ ಸಮೂಹವನ್ನು ಕಂಡರೆ ಅವರಿಗೆ ಅತೀವವಾದ ಪ್ರೀತಿ ಮತ್ತು ಮಮತೆ ಹಾಗೂ ಕಾಳಜಿ, ಯಾವ ವಿದ್ಯಾರ್ಥಿಯೇ ಆಗಲಿ ಅವರ ಬಳಿ ಬಂದು ಕಷ್ಟವನ್ನು ಹೇಳಿಕೊಂಡು ನೆರವು ಕೋರಿದರೆ ಇಲ್ಲ ಎನ್ನುವ ಮನಸ್ಥಿತಿ ಅವರದ್ದಾಗಿರಲಿಲ್ಲ.

1981ರಲ್ಲಿ ಮರಿಮಲ್ಲಪ್ಪ ಶಾಲೆಯಲ್ಲಿ ನಿವೃತ್ತರಾಗಿ ತಮ್ಮದೇ ಆದ ಶಾರದಾ ವಿಲಾಸ ಹೈಸ್ಕೂಲನ್ನು ಪ್ರಾರಂಭಿಸಿದರು. ಅದು ಇಂದು ಬೃಹತ್ ಶಿಕ್ಷಣ ಸಂಸ್ಥೆಯಾಗಿ ಕರ್ನಾಟಕದಲ್ಲಿ ಅತ್ಯಂತ ಹಳೆಯದಾದ ಹಾಗೂ ಆಳುವವರಿಗೆ ಅಡಿಪಾಯ ಹಾಕಿದ ಮಾದರಿ ಸಂಸ್ಥೆಯಾಗಿ ಜನರ ಮನ್ನಣೆ ಪಡೆದಿರುವುದಕ್ಕೆ ಸಾಕ್ಷಿಯಾಗಿದೆ. ಆ ಕಾಲದಲ್ಲಿ ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಬೇಕು ಎಂದು ಪ್ರತಿಪಾದಿಸಿದವರು. ಹೆಣ್ಣು ಮಕ್ಕಳು ಶಿಕ್ಷಣ ಕಲಿಯಬೇಕು, ಕಲಿತಾಗ ಮಾತ್ರ ಕುಟುಂಬ ಹಾಗೂ ಸಮಾಜ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಅರಿತಿದ್ದ ಎಂ.ವೆಂಕಟಕೃಷ್ಣಯ್ಯನವರು ಹೆಣ್ಣು ಮಕ್ಕಳಿಗಾಗಿಯೇ ಪ್ರತ್ಯೇಕ ಶಾಲೆಯನ್ನು ಅಂದಿನ ದಿವಾನರಿಂದ ಅನುಮತಿ ಪಡೆದು ಮೊಟ್ಟ ಮೊದಲ ಬಾರಿಗೆ ರಾಜ್ಯದ ಮೈಸೂರಿನ ಮಹಾರಾಣಿ ಶಾಲೆಯನ್ನು ಪ್ರಾರಂಭಿಸಿದ ಕೀರ್ತಿ ಇವರದ್ದಾಗಿದೆ.

ಮೈಸೂರು ಸಂಸ್ಥಾನದಲ್ಲಿ ದಿವಾನ್ ರಂಗಾ ಚಾರ್ಲು, ಶೇಷಾದ್ರಿ ಅಯ್ಯರ್. ಮಿರ್ಜಾ ಇಸ್ಮಾಯಿಲ್ ಹೀಗೆ ಮೂರು ದಿವಾನರನ್ನು ಕಂಡಿದ್ದ ಹಾಗೂ ಅವರೊಂದಿಗೆ ಒಡನಾಟ ಹೊಂದಿದ್ದವರು ಎಂ. ವೆಂಕಟಕೃಷ್ಣಯ್ಯನವರು. ಸಾರ್ವಜನಿಕರ ಮುಂದೆ ದಿವಾನರಾಗಲೀ, ಮಹಾರಾಜರಾಗಲೀ ಎಲ್ಲರೂ ಒಂದೇ ಎಂದು ನಂಬಿದ್ದ ಇವರು ಮೈಸೂರು '**ಪ್ರಜಾಪ್ರತಿನಿಧಿ ಸಭೆ**'ಗೆ 3 ಬಾರಿ ಆಯ್ಕೆಯಾಗಿ ದಿವಾನರ ವಿರುದ್ಧ ದಂಗೆ ಎದ್ದು ಉದ್ಯೋಗವನ್ನು ನೀಡುವಾಗ ಮೈಸೂರಿನವರಿಗೆ ನೀಡಬೇಕು ಎಂದು ವಾದಿಸಿ 'ಮೈಸೂರು ಫಾರ್ ಮೈಸೂರಿಯನ್' ಕಲ್ಪನೆಯನ್ನು ಹುಟ್ಟು ಹಾಕಿ ಅದನ್ನು ಜಾರಿಗೆ ತರುವಲ್ಲಿ ಯಶಸ್ವಿಯಾದರು.

ಚಿಕ್ಕವರಾಗಿದ್ದಾಗಲೇ ವೆಂಕಟಕೃಷ್ಣಯ್ಯನವರಿಗೆ ಸಾರ್ವಜನಿಕ ಸೇವೆಯಲ್ಲಿ ಆಸಕ್ತಿ. ಸದಾ ಅವರ ಮನಸ್ಸಿನಲ್ಲಿ ದೀನ–ದಲಿತರ ಉದ್ಧಾರದ ಆದರ್ಶ ಸುಳಿಯುತ್ತಿತ್ತು. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಸಾರ್ವಜನಿಕ ಜೀವನದ ನಾನಾ ರಂಗದಲ್ಲಿ ದಣಿವಿಲ್ಲದೆ ದುಡಿದವರು. ಇವರ ಸೇವಾ ತತ್ಪರತೆಯನ್ನು ಮೆಚ್ಚಿದ ಜನ ಪ್ರೀತಿಯಿಂದ "ತಾತಯ್ಯ" ಎಂದು ಕರೆದಿರುವುದು ಸಾಕ್ಷಿಯಾಗಿದೆ. ಮಂಕುತಿಮ್ಮನ ಕಗ್ಗದ ಡಿ.ವಿ.ಜಿ. ಅವರು 'ಸಾಕ್ರಟಿಸ್ ಆಫ್ ಮೈಸೂರು' ಎಂದು ಕರೆದರೆ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ರವರು ತಾತಯ್ಯನವರನ್ನು ದಕ್ಷಿಣ ಭಾರತದ ಲೋಕಮಾನ್ಯ ತಿಲಕರು ಎಂದು ಮೈಸೂರಿಗೆ ಭೇಟಿ ನೀಡಿದ್ದಾಗ ಹೇಳಿರುವುದು ಅವಿಸ್ಮರಣೀಯವಾದುದು.

ಆಗ ಪತ್ರಿಕೋದ್ಯಮ ಶಿಕ್ಷಣಕ್ಕೆ ಸ್ಪಷ್ಟ ರೂಪ ಇರಲಿಲ್ಲ. ಹುಟ್ಟಿನಿಂದ ಮಾತ್ರ ಪತ್ರಕರ್ತರು ಆಗಲು ಸಾಧ್ಯ ಶಿಕ್ಷಣದಿಂದಲ್ಲ ಎಂಬ ನಂಬಿಕೆ ಆಳವಾಗಿ ಬೇರೂರಿತ್ತು. ಇದಕ್ಕೆ ವಿರುದ್ಧವಾದ ಅಭಿಪ್ರಾಯ ತಳೆದಿದ್ದವರು ವೆಂಕಟಕೃಷ್ಣಯ್ಯನವರು. ಶಿಕ್ಷಣದಿಂದ ಒಳ್ಳೆಯ ಪತ್ರಕರ್ತರನ್ನು ರೂಪಿಸಬಹುದು ಎಂದು ನಂಬಿದ್ದರು. ಯುವ ಪ್ರತಿಭೆಯನ್ನು ಹುಡುಕಿ ತೆಗೆದು ಉತ್ತೇಜಿಸುವುದು ಅವರ ಜಾಯಮಾನವಾಗಿತ್ತು. ಈ ಹಿನ್ನೆಲೆಯಲ್ಲಿ ಅಂದಿನ ಕಾಲದಲ್ಲಿ ತಾತಯ್ಯನವರು ತಮ್ಮದೇ ಆದ ವೃತ್ತಾಂತ ಚಿಂತಾಮಣಿ, ಸಾಧ್ವಿ, ಹಿತಬೋಧಿನಿ, ಮೈಸೂರು ಹೆರಾಲ್ಡ್, ನೇಚರ್ ಕ್ಯೂರ್, ಕನ್ನಡ ನಡೆಗನ್ನಡಿ, ವೃತ್ತಾಂತ ಚಿಂತಾಮಣಿ, ವಿದ್ಯಾದಾಯಿನಿ, ಮೈಸೂರು ಪೇಟ್ರಿಯಾಟ್, ವೆಲ್ತ್ ಆಫ್ ಮೈಸೂರು, ಸಂಪತ್ ಅಭ್ಯುದಯ ಎಂಬ ಪತ್ರಿಕೆಗಳನ್ನು ದಿಟ್ಟತನದಿಂದ ನಡೆಸಿದವರು.

ಎಲ್ಲಾ ದೇಶಗಳಲ್ಲೂ ಪತ್ರಿಕೆಗಳ ಮುಖ್ಯ ಕರ್ತವ್ಯ ಒಂದೇ, ಅದೇನೆಂದರೆ ಪ್ರಜೆಗಳ ತಪ್ಪನ್ನು ಪ್ರಜೆಗಳಿಗೆ ತಿಳಿಸತಕ್ಕದ್ದು ಮತ್ತು ಸರ್ಕಾರದ ತಪ್ಪುಗಳನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವುದು ಎಂದು ನಂಬಿ 60 ವರ್ಷಗಳ ಕಾಲ ಪತ್ರಿಕೆಗಳನ್ನು ನಡೆಸಿ 'ಕನ್ನಡ ಪತ್ರಿಕಾರಂಗದ ಭೀಷ್ಮ' ಎಂದು ಕರೆಸಿಕೊಂಡಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಅಂದು ಮೈಸೂರು ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ 25 ಸಹಸ್ರ ರೂಪಾಯಿಗಳನ್ನು ಕೊಟ್ಟು ತಾತಯ್ಯನವರು ಬಂದು ಪತ್ರವನ್ನು ಬರೆದಿದ್ದರಂತೆ "ಪತ್ರಿಕೋದ್ಯಮದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದವರಿಗೆ ನಗದು ಬಹುಮಾನ ನೀಡಿ", ಇದನ್ನು ಅಂದಿನ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪರಾಮರ್ಶಿಸಿ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣವೇ ಇಲ್ಲ ಎಂದು ಹಣವನ್ನು ಹಿಂದಿರುಗಿಸಬೇಕೆಂದು ನಿರ್ಣಯವನ್ನು ಸಭೆಯಲ್ಲಿ ತೆಗೆದುಕೊಂಡರಂತೆ, ಈ ವಿಷಯ ತಿಳಿದ ತಾತಯ್ಯನವರು ಸ್ವತಃ ಖುದ್ದಾಗಿ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ "ಈಗ ಪತ್ರಿಕೋದ್ಯಮ ಶಿಕ್ಷಣ ಇಲ್ಲ ಎನ್ನುವುದು ನನಗೆ ಗೊತ್ತಿದೆ, ಆದರೆ ಮುಂದೆ ಪತ್ರಿಕೋದ್ಯಮ ಶಿಕ್ಷಣ ಆರಂಭವಾದಾಗ ಈ ಹಣವನ್ನು ಬಳಸಿಕೊಳ್ಳಿ, ಅಲ್ಲಿಯವರೆಗೆ ಕನ್ನಡ ಎಂ.ಎ. ಯಲ್ಲಿ ಪ್ರಥಮ ರ‍್ಯಾಂಕ್ ಬಂದವರಿಗೆ ಬಹುಮಾನ ನೀಡಿ ಎಂದು ಹೇಳಿ ದೂರಗಾಮಿ ದೃಷ್ಟಿಯಿಂದ ಹೇಳಿದ್ದು, ಇಂದು ಕನ್ನಡ ನಾಡಿನಲ್ಲಿ ಪತ್ರಿಕೋದ್ಯಮ ಬೆಳೆದು ಹೆಮ್ಮರವಾಗಿ ನಿಂತಿರುವುದಕ್ಕೆ ನಿದರ್ಶನವಾಗಿದೆ. ತಾಂತ್ರಿಕ ಶಿಕ್ಷಣದಿಂದಲೇ ದೇಶದ ಉನ್ನತಿಗೆ ಭದ್ರ ಅಡಿಪಾಯ ಎಂದು ಅಂದೇ ಅರಿತಿದ್ದ ಅವರು ಯುರೋಪಿನಲ್ಲಿ, ಜಪಾನ್ ಮತ್ತು ಅಮೆರಿಕ ಮುಂತಾದ ದೇಶಗಳಲ್ಲಿ ಉತ್ಪಾದಕರು ಅನುಸರಿಸುವ ಆಧುನಿಕ ತಂತ್ರಜ್ಞಾನದ ಆಳವಾದ ಅಭ್ಯಾಸಕ್ಕೆ ತಾಂತ್ರಿಕ ಶಾಲೆಯನ್ನು ತೆರೆಯಲು ಸರ್ಕಾರವನ್ನು ಒತ್ತಾಯಿಸಿದರು. ಅವರ ಪರಿಶ್ರಮದ ಫಲವೇ ಮೈಸೂರಿನ ಇಂದಿನ ಜಯಚಾಮರಾಜೇಂದ್ರ ತಾಂತ್ರಿಕ ಕಾಲೇಜು, ಹಾಗೆಯೇ ಶಿವಮೊಗ್ಗ, ಸಾಗರ, ಚಿಕ್ಕಮಗಳೂರು, ಚಿತ್ರದುರ್ಗ, ಚನ್ನಪಟ್ಟಣಗಳಲ್ಲಿ ತಾಂತ್ರಿಕ ಶಾಲೆಗಳನ್ನು ಆರಂಭಿಸಿ ಆನಂತರ ಈ ಶಾಲೆಯ ಅಭ್ಯರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಮಂಜೂರು ಮಾಡಿಸಿದ ಕೀರ್ತಿ ತಾತಯ್ಯನವರದು.

ಅನಾಥರಾಗಿ ಮೈಸೂರಿಗೆ ಬಂದು ಬಾಳಿನುದ್ದಕ್ಕೂ ವೆಂಕಟಕೃಷ್ಣಯ್ಯನವರು ಕಷ್ಟಗಳನ್ನು ಅನುಭವಿಸಿದ್ದರೂ ಮುಂದಿನ ತಲೆಮಾರಿನವರಿಗೆ ಮೈಸೂರಿಗೆ ಓದಲು ಬಂದಾಗ ಅವರಿಗೆ ಉಚಿತವಾಗಿ ಊಟ, ವಸತಿ ನೀಡುವ ವ್ಯವಸ್ಥೆಯನ್ನು ನೀಡಲು ಅನುಕೂಲವಾಗುವಂತೆ ಅನಾಥಾಲಯವನ್ನು ಸ್ಥಾಪಿಸಿರುವುದು, ಅನಾಥರ ಬಾಳಿಗೆ ಬೆಳಕು ಚೆಲ್ಲಿದ ಮಹಾನ್ ಚೇತನರು. ಇಂತಹ ಪ್ರಾತಃಸ್ಮರಣೀಯರ ನಿಸ್ವಾರ್ಥ, ಸೇವೆ, ತ್ಯಾಗದ ಪರಿಣಾಮವನ್ನು ಶ್ಲಾಘಿಸಿ, ಅಂದಿನ ರಾಷ್ಟ್ರಪತಿಗಳಾಗಿದ್ದ ವಿ.ವಿ.ಗಿರಿಯವರು 1969ರಲ್ಲಿ ಮೈಸೂರಿನ ಹೃದಯ ಭಾಗವಾದ ಲ್ಯಾನ್ಸ್‌ಡೌನ್ ಕಟ್ಟಡದ ಎದುರು ಆಳೆತ್ತರದ ತಾತಯ್ಯನವರ ಪ್ರತಿಮೆಯನ್ನು ಸ್ಥಾಪಿಸಿ, ಇಂದಿಗೂ ಜನರ ಮನದಾಳದಲ್ಲಿ ನೆಲೆಸುವಂತೆ ಮಾಡಿದರು. ಇಂತಹ ಮಹನೀಯರ ಬಗ್ಗೆ ಮೈಸೂರು ನಗರಪಾಲಿಕೆ ಆಗಾಗ್ಗೆ ವಿಚಾರ ಸಂಕಿರಣಗಳನ್ನು ಏರ್ಪಡಿಸಿ, ತಾತಯ್ಯನವರ ಬಗ್ಗೆ ಯುವ ಜನಾಂಗಕ್ಕೆ ತಿಳಿಯ ಬಯಸಿದರೆ ನಿಜಕ್ಕೂ ಎಂ.ವೆಂಕಟಕೃಷ್ಣಯ್ಯನವರ ಸೇವೆ ಶಾಶ್ವತವಾಗಿ ಜನರ ಮನಸ್ಸಿನಲ್ಲಿ ಉಳಿಯುತ್ತದೆ. ಮೈಸೂರಿನ ನಗರಪಾಲಿಕೆ ಇವರ ಹೆಸರಿನಲ್ಲಿ ಯಾವುದಾದರೂ ಬಡಾವಣೆಗೆ ಹೆಸರನ್ನು ನಾಮಕರಣ ಬೇಕು ಹಾಗೂ ಶಾಶ್ವತ ಯೋಜನೆ ರೂಪಿಸುವುದು ಅಗತ್ಯವಾಗಿದೆ.



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ತಾತಯ್ಯ ಅನಾಥಾಲಯ.

ಇತರರಿಗೆ ಪ್ರತ್ಯೇಕ ರಾಷ್ಟ್ರಗಳಿದ್ದಂತೆ ಹಿಂದೂಗಳಿಗೂ ಒಂದು ರಾಷ್ಟ್ರವಿದೆ ಎಂಬ ಆತ್ಮಾಭಿಮಾನ ನಮ್ಮಲ್ಲಿರಲಿ

'ಬಹುವಚನಕ್ಕೊಂದೇ ತತ್ವ' ಕೃತಿ ಲೇಖಕ ಡಾ.ಅಜಕ್ಕಳ ಗಿರೀಶ್ ಭಟ್ ಅಭಿಮತ



ಮೈಸೂರು,ಸೆ.23(ಎಸ್‌ಪಿಎನ್)–ಜಗತ್ತಿನಲ್ಲಿ ಬೇರೆಯವರಿಗೆಲ್ಲಾ ಪ್ರತ್ಯೇಕ ರಾಷ್ಟ್ರಗಳಿವೆ. ಅದೇ ರೀತಿ ಹಿಂದೂಗಳಿಗೂ ಒಂದು ರಾಷ್ಟ್ರವಿದೆ ಎಂಬ ಆತ್ಮಾಭಿಮಾನವನ್ನು ನಾವು–ನೀವೆಲ್ಲರೂ ಬೆಳೆಸಿಕೊಳ್ಳಬೇಕು ಎಂದು 'ಬಹುವಚನಕ್ಕೊಂದೇ ತತ್ವ' ಕೃತಿಯ ಲೇಖಕ ಡಾ.ಅಜಕ್ಕಳ ಗಿರೀಶ್ ಭಟ್ ಅಭಿಪ್ರಾಯಪಟ್ಟರು.

ಮೈಸೂರು ಝಾನ್ಸಿರಾಣಿ ಲಕ್ಷ್ಮೀಬಾಯಿ(ಜೆಎಲ್‌ಬಿ) ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲಿ ಮಂಥನ ಮೈಸೂರು ತಂಡದ ವತಿಯಿಂದ ಆಯೋಜಿಸಿದ್ದ 'ಹಿಂದುತ್ವ–ಬಹುತ್ವ' ಕುರಿತಾದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು.

ಹಿಂದೂ ಧರ್ಮದಲ್ಲಿ ಹಲವು ಧರ್ಮ ಗ್ರಂಥಗಳಿವೆ. ಬೇರೆ ಬೇರೆ ಸಮುದಾಯದ ಶಾಖೆಗಳಿವೆ. ಇದರಲ್ಲಿ ಎಲ್ಲವೂ ಶ್ರೇಷ್ಠ ಎಂದೇ ಪರಿಗಣಿಸಬಹುದು. ಅಂತೆಯೇ ಹಿಂದೂ ಧರ್ಮದಲ್ಲಿ 'ಸೃಷ್ಟಿಕರ್ತ', 'ಸೃಷ್ಟಿ ನಿಯಮ' ಎಂಬುದರ ಕುರಿತು ಪುರಾಣ ಕಥೆಗಳಿವೆ. ಬೇರೆ ಧರ್ಮದಲ್ಲಿನ ನಂಬಿಕೆಗಳಿಗೆ ತಕ್ಕಂತೆ ಧರ್ಮಾಚರಣೆ ನೆರವೇರುತ್ತಿದೆ ಎಂದು ಕೆಲವು ಘಟನೆಗಳನ್ನು ಉದಾಹರಣೆ ನೀಡಿ ತಿಳಿಸಿದರು.

ಹಿಂದೂ ಧರ್ಮದಲ್ಲಿ ಬಹುತ್ವದ ಆಚರಣಾ ಪದ್ಧತಿ ಇದೆ. ಅದು ಆಯಾಯ ಸಮುದಾಯ(ಬುಡಕಟ್ಟು ಸಮುದಾಯವೂ ಸೇರಿದಂತೆ)ಗಳ ನಂಬಿಕೆಗಳಿಗೆ ಪೂರಕವಾದ ಸಾಂಸ್ಕೃತಿಕ, ಆಧ್ಯಾತ್ಮಿಕ ಆಚರಣೆಗಳಿವೆ. ಇದರಲ್ಲಿ ಜಾನಪದ ಆಚರಣೆಗಳೂ ಸೇರಿಕೊಂಡಿವೆ. ಇವೆಲ್ಲಾ ನಂಬಿಕೆಗಳೇ ಹಿಂದೂ ಧರ್ಮದ ಪರಿಕಲ್ಪನೆ ಎಂಬುದು ನಾವು–ನೀವು ತಿಳಿದುಕೊಂಡಿರುವ ವಿಚಾರ. ಈ ಯೋಚನೆಯಲ್ಲಿ ಕೆಲವರು ಪರ–ವಿರೋಧಗಳಿದ್ದರೂ ನಂಬಿಕೆಯೇ ಪ್ರಧಾನ ಎಂಬುದನ್ನು ನಾವೆಲ್ಲರೂ ಪರಿಗಣಿಸಬೇಕು ಎಂದರು.

ಹಿಂದೂ ಧರ್ಮದಲ್ಲಿ ದೇವರು ಅವತಾರ ಪುರುಷ, ದೇವಿ ಅವತಾರ 'ಸ್ತ್ರೀ' ಎಂದು ಬಹುಜನರು ನಂಬಿ ಪೂಜಿಸುತ್ತಿದ್ದಾರೆ. ಮುಂದುವರೆದು ಸಾಧು–ಸಂತರ ನೇತೃತ್ವದಲ್ಲೂ ಅನೇಕ ಆಧ್ಯಾತ್ಮಿಕ ಆಚರಣೆಗಳು ಜರುಗುತ್ತವೆ. ಇವೆಲ್ಲವೂ ಪೂಜ್ಯನೀಯ ಭಾವನೆಗಳ ಮೇಲೆ ನಿಂತಿದೆ. ಈ ನಂಬಿಕೆಗಳೂ ಹಿಂದೂ ಧರ್ಮದ ಪ್ರಮುಖ ಭಾಗವೂ ಆಗಿದೆ. ಇವೆಲ್ಲಾ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದೇ ಹಿಂದುತ್ವ–ಬಹುತ್ವ ಎಂದರೆ ತಪ್ಪಾಗಲಾರದು ಎಂದು ಹೇಳಿದರು.

ಪ್ರಾಚೀನ, ಪುರಾಣ ಸಾಹಿತ್ಯದಲ್ಲೂ ಆಧ್ಯಾತ್ಮ ಪರಿಕಲ್ಪನೆ ನೋಡುವುದು ಶಿಲ್ಪಶಾಸ್ತ್ರ, ಜನಪದ ಕಲೆಗಳು, ನಾಟಕ, ನೃತ್ಯ ಹಾಗೂ ದೇವತಾರಾಧನೆಗಳ ಮೂಲಕ. ಈ ಸಾಂಸ್ಕೃತಿಕ ಆಚರಣೆಗಳನ್ನು ಉಳಿಸಿಕೊಂಡರೆ ಮಾತ್ರ 'ಹಿಂದೂ ಧರ್ಮ', 'ಹಿಂದೂ' ಮತ್ತು 'ಹಿಂದುತ್ವ' ಪರಿಕಲ್ಪನೆಯನ್ನು ಮುಂದೆಯೂ ಉಳಿಸಿಕೊಳ್ಳಲು ಸಾಧ್ಯ. ಸ್ವಾತಂತ್ರ್ಯ ಪೂರ್ವದ ಹಿಂದೂ ಧರ್ಮಕ್ಕೂ ಸಂವಿಧಾನ ಅಳವಡಿಸಿಕೊಂಡ ನಂತರದ ಹಿಂದೂ ಧರ್ಮದ ಆಚರಣೆಗಳಲ್ಲಿ ಸ್ವಲ್ಪ ಏರುಪೇರಾಗಿದ್ದರೂ ಅಷ್ಟೇನು ಬದಲಾವಣೆ ಆಗಿಲ್ಲ. ಇದು ನಮ್ಮ ಹಿಂದೂ ಧರ್ಮದ ತಾಕತ್ತು ಹಾಗೂ ಹಿಂದುತ್ವದ ಗಟ್ಟಿತನ ಎಂದರು.

ಪ್ರಸ್ತುತ 'ಹಿಂದೂ ಧರ್ಮ', 'ಹಿಂದುತ್ವ', 'ಹಿಂದೂ' ನಾಗರಿಕತೆ ಮುಂದೆಯೂ ಉಳಿಯಬೇಕು ಎಂದು ನಾವೆಲ್ಲರೂ ಪಣತೊಟ್ಟರೆ ಸಾಲದು. ಅದರ ಶಾಖೆಗಳಾದ ನೃತ್ಯ, ಸಂಗೀತ, ಚಿತ್ರಕಲೆ, ಶಿಲ್ಪಕಲೆ, ಜನಪದ ಆಚರಣೆಗಳು, ಧಾರ್ಮಿಕ ಆಚರಣೆ, ಆಧ್ಯಾತ್ಮಿಕ ಚಿಂತನೆ, ವೈವಿಧ್ಯಮಯ ಆಚರಣೆ ಹಾಗೂ ಸಾಧು–ಸಂತರ ಪರಿಕಲ್ಪನೆಯ ಬೇರುಗಳನ್ನು ಗಟ್ಟಿಗೊಳಿಸಿದಾಗ ಮಾತ್ರ ಭಾರತೀಯರಲ್ಲಿ 'ಹಿಂದುತ್ವ–ಬಹುತ್ವ' ಶಾಶ್ವತ ಸ್ಥಾನ ಪಡೆಯುತ್ತದೆ ಎಂದರು. ಈ ವೇಳೆ ಆರ್‌ಎಸ್‌ಎಸ್ ಮುಖಂಡ ವಾಸುದೇವಭಟ್ ಉಪಸ್ಥಿತರಿದ್ದರು.

ಏಷ್ಯನ್ ಗೇಮ್ಸ್‌ಗೆ ಅದ್ದೂರಿ ಚಾಲನೆ, ಸಾಂಪ್ರದಾಯಿಕ ಉಡುಗೆಯಲ್ಲಿ ಮಿಂಚಿದ ಭಾರತೀಯ ಕ್ರೀಡಾಪಟುಗಳು



ಹ್ಯಾಂಗ್ ಝೌ: ಚೀನಾದ ಹ್ಯಾಂಗ್ ಝೌನಲ್ಲಿ ಇಂದು ಏಷ್ಯನ್ ಗೇಮ್ಸ್ ಕ್ರೀಡಾಕೂಟ 2023ಕ್ಕೆ ಅದ್ದೂರಿ ಚಾಲನೆ ನೀಡಲಾಯಿತು.

ಭಾರತೀಯ ಕ್ರೀಡಾಪಟುಗಳು ಸಾಂಪ್ರದಾಯಿಕ ಉಡುಗೆಯಲ್ಲಿ ಮಿಂಚಿದರು.

ಏಷ್ಯನ್ ಗೇಮ್ಸ್ 19ನೇ ಆವೃತ್ತಿ ಉದ್ಘಾಟನಾ ಸಮಾರಂಭ ಶನಿವಾರ ಅದ್ದೂರಿಯಾಗಿ ನಡೆಯಿತು.

ಭಾರತ ಹಾಕಿ ತಂಡದ ನಾಯಕ ಹರ್ಮನ್ ಪ್ರೀತ್ ಸಿಂಗ್ ಮತ್ತು ಒಲಿಂಪಿಕ್ಸ್ ಪದಕ ವಿಜೇತ ಬಾಕ್ಸರ್ ಲವ್ಲಿನಾ ಬೊರ್ಗೊಹೇನ್ ಉದ್ಘಾಟನಾ ಸಮಾರಂಭದಲ್ಲಿ ಭಾರತದ ಜಂಟಿ ಧ್ವಜಧಾರಿಗಳಾಗಿ ಮಿಂಚಿದರು. ಬಿಗ್ ಲೋಟಸ್' ಎಂದು ಕರೆಯಲ್ಪಡುವ, 80 ಸಾವಿರದಷ್ಟು ವೀಕ್ಷಕರ ಸಾಮರ್ಥ್ಯ ಹೊಂದಿರುವ, ಕ್ವಿಂಟಾಂಗ್ ನದಿ ತೀರದ "ಹ್ಯಾಂಗ್‌ಝೂ ಒಲಿಂಪಿಕ್ ಸ್ಪೋರ್ಟ್ಸ್ ಸೆಂಟರ್ ಸ್ಟೇಡಿಯಂ'ನಲ್ಲಿ ವರ್ಣರಂಜಿತ ಸಮಾರಂಭಕ್ಕೆ ಚಾಲನೆ ನೀಡಲಾಯಿತು.

ಭಾರತದ 655 ಕ್ರೀಡಾಪಟುಗಳು ಈ ಪ್ರತಿಷ್ಠಿತ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದು, ಇದು ಏಷ್ಯಾಡ್ ಇತಿಹಾಸದಲ್ಲೇ ಭಾರತದ ಗರಿಷ್ಠ ಸಂಖ್ಯೆಯ ಕ್ರೀಡಾಳುಗಳ ದಾಖಲೆಯಾಗಿದೆ. ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾರತದ ಕ್ರೀಡಾಳುಗಳು, ವನಿತೆಯರು ಖಾಕಿ ವಿನ್ಯಾಸದ ಆಕರ್ಷಕ ಸೀರೆ ಮತ್ತು ಪುರುಷರು ಅದೇ ಬಣ್ಣದ ಕುರ್ತಾ ಧರಿಸಿದ್ದರು. ಉದ್ಘಾಟನಾ ಸಮಾರಂಭ ಕಲಾತ್ಮಕ ಕಾರ್ಯಕ್ರಮದೊಂದಿಗೆ ಪ್ರಾರಂಭವಾಯಿತು. ಪ್ರಮುಖ ಅತಿಥಿಗಳ ನಡುವೆ ಚೀನದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾದ ಹಂಗಾಮಿ ಅಧ್ಯಕ್ಷ ರಣಧೀರ್ ಸಿಂಗ್, ವೇದಿಕೆಯಲ್ಲಿದ್ದರು. ಏಷ್ಯನ್ ಗೇಮ್ಸ್ ಆಯೋಜನಾ ಸಮಿತಿ ಅಧ್ಯಕ್ಷ ಗಾವೊ ಜಿಡಾನ್ ಮಾತನಾಡಿದರು.

ಇನ್ನು ಈ ಬಾರಿಯ ಕ್ರೀಡಾಕೂಟದಲ್ಲಿ ಒಟ್ಟು 45 ದೇಶಗಳ 12 ಸಾವಿರಕ್ಕೂ ಕ್ರೀಡಾಪಟುಗಳು ಕಾಣಿಸಿಕೊಂಡಿದ್ದಾರೆ. ಈ ಕ್ರೀಡಾಪಟುಗಳು 40 ಸ್ಪರ್ಧೆಗಳಲ್ಲಿ ಕಣಕ್ಕಿಳಿಯಲಿದ್ದು, ಈ ಮೂಲಕ ಚಿನ್ನದ ಪದಕಕ್ಕಾಗಿ ಪೈಪೋಟಿ ನಡೆಸಲಿದ್ದಾರೆ.

ಹಾಗೆಯೇ ಭಾರತದ 655 ಕ್ರೀಡಾಪಟುಗಳು ಈ ಬಾರಿ ಕಣದಲ್ಲಿದ್ದು, ಅತ್ಯುತ್ತಮವಾದ ಪ್ರದರ್ಶನವನ್ನು ನಿರೀಕ್ಷಿಸಬಹುದು. ಈ ಬಾರಿಯ ಏಷ್ಯನ್ ಗೇಮ್ಸ್ ಕ್ರೀಡಾಕೂಟ ಸೆ.19ರಿಂದ ಶುರುವಾಗಿದೆ. ಅಂದರೆ ಆರಂಭದಲ್ಲಿ ಕೆಲ ಪಂದ್ಯಗಳ ಅರ್ಹತಾ ಸುತ್ತುಗಳು ನಡೆದಿದ್ದು, ಕೆಲ ಪಂದ್ಯಗಳನ್ನು ಆಯೋಜಿಸಲಾಗಿದೆ. ಇದೀಗ ಉದ್ಘಾಟನಾ ಕಾರ್ಯಕ್ರಮದ ಮೂಲಕ ಎಲ್ಲಾ ಕ್ರೀಡಾಕೂಟಗಳಿಗೂ ಚಾಲನೆ ನೀಡಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

1ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿಕೋರುವ
ಸ್ನೇಹಿತ
ಬಿ.ಜಿ.ಪ್ರಕಾಶ್, ಯರಗನಹಳ್ಳಿ

ಶ್ರೀ ವಿಜಯ್‌ಕುಮಾರ್ ಎಂ.

SITE FOR SALE

40x52 North-West corner site @ Rs. 40 Lakhs.
MUDA APPROVED
3 kms from Ring Road, Behind Chamundi Hill
Mob: 9538583377

ಬೇಕಾಗಿದ್ದಾರೆ

ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೇಲ್ಸ್ ಮ್ಯಾನ್ ಮತ್ತು ಸೇಲ್ಸ್ ಗರ್ಲ್ಸ್
ಆಕರ್ಷಕ ಸಂಬಳ +
ESI+PF, Incentive
ಗಾಂಧಿ ಸರ್ಕಲ್, ಮೈಸೂರು
ಮೊ: 9980620678

DREAM WORLD TRAVELS Mysore

Dubai 5 Nights 6 Days
GROUP PACKAGE COST: Per Person
Rs.89,300/- Incl Tax
Only 6 seats available
DEPARTURE DATE
Oct 27th 2023



For More Details Contact :
994 5242 427

3ನೇ ವರ್ಷದ ಸವಿನೆನಪು



ಜಿ.ಚನ್ನಪ್ಪ
(ಲೇಟ್ ತಾಯಮ್ಮನ ಗಿರಿಗೌಡರ ಮಗ)

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನೀವು ತೋರಿಸಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ ಹಾಗೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಧರ್ಮಪತ್ನಿ ಲಕ್ಷ್ಮಿ, ಮಗಳು-ತನ್ಮಯಿ, ಮಂಜುಳ, ಶ್ರೀನಿವಾಸ್, ಲಲಿತ, ನಾಗರಾಜು, ಕುಟುಂಬವರ್ಗ ಕೆ.ಜಿ.ಕೊಪ್ಪಲು – ಜಯನಗರ ಹಾಗೂ ಚಿಕ್ಕಹರದನಹಳ್ಳಿ ಗ್ರಾಮಸ್ಥರು, ಮೈಸೂರು



SAMAGRA SUPER STORE

SUPER MARKET
A Venture of
BHARAT BHUVI VENTURES LIMITED
WE ARE HIRING!!!
- SUPERVISORS
- BILLING EXECUTIVE
- CUSTOMER SALES EXECUTIVE

Interview Date: 25/09/2023
Call : 90353 62606

MUDA APPROVED SITES FOR SALE

30x40, 30x50,
80% Bank Loan at Vijayanagar 4th Stage, Mysore.
Contact : **SSG Developer**
91104 19135 / 81053 67933

ಮೈಸೂರು ಮಿತ್ರ — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಭೋಗ್ಯಕ್ಕೆ/ ಬಾಡಿಗೆಗೆ ಜಾಗ ಬೇಕಾಗಿದೆ

ವರ್ತುಲ ರಸ್ತೆಯ ಎಡಭಾಗದ ಪಿನಕಲ್ ಜಂಕ್ಷನ್‌ನಿಂದ ಜಿಆರ್‌ಎಸ್ ಸ್ನೋಪಾರ್ಕ್ ಕಡೆಗೆ	120 ಅಡಿ x 120 ಅಡಿ
ಮೈಸೂರು ನಗರ ಮುಡಾ/ ಕಾರ್ಪೋರೇಷನ್ ಮಿತಿ ಒಳಗೆ	100 ಅಡಿ x 100 ಅಡಿ
ಮಾನಂದವಾಡಿ ರಸ್ತೆಯ ಬಲಭಾಗದ ಲಿಂಕ್ ಮುಖ್ಯ ರಸ್ತೆಯ ಜಂಕ್ಷನ್‌ನಿಂದ ಮೈಸೂರು ವರ್ತುಲ ರಸ್ತೆಯ ಜಂಕ್ಷನ್ ಕಡೆಗೆ	70 ಅಡಿ x 70 ಅಡಿ
ಆನೇಚೌಕುರ್– ಹಾಸನ ರಸ್ತೆ (ಎನ್‌ಹೆಚ್ 21) 2ಕಿ.ಮೀ ಒಳಗಡೆ ಎನ್.ಹೆಚ್.275 ಇಂಟರ್‌ಸೆಕ್ಷನ್	100 ಅಡಿ x 100 ಅಡಿ
ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ತಿಪ್ಪೇಸ್ವಾಮಿ ವೃತ್ತ ಮತ್ತು ರಿಂಗ್ ರಸ್ತೆ ಜಂಕ್ಷನ್ ನಡುವಿನ ಬೋಗಾದಿ ರಸ್ತೆ	120 ಅಡಿ x 120 ಅಡಿ
ಆರ್.ಟಿ. ನಗರದಿಂದ ಜೆಪಿ ನಗರದ ಕಡೆ ವರ್ತುಲ ರಸ್ತೆ ಎಡಭಾಗದಲ್ಲಿ	100 ಅಡಿ x 100 ಅಡಿ
ಬಂಡಿಪಾಳ್ಯದಿಂದ ಲಲಿತಾದ್ರಿಪುರ ವರ್ತುಲ ರಸ್ತೆ	100 ಅಡಿ x 100 ಅಡಿ

9945445255, 9738034312

SITES FOR SALE

MUDA APPROVED
20x30, 30x40
4.5 kms from Bogadi Ring Road, attached to Pheripheral Ring Road, Mysore
9611277776, 9880440033

ಬೇಕಾಗಿದ್ದಾರೆ

ಅಂಗಡಿ ಕೆಲಸಕ್ಕೆ ಹುಡುಗರು – ಹುಡುಗಿಯರು.
ಅಶೋಕ ರೋಡ್, ದೊಡ್ಡ ಗಡಿಯಾರದ ಹತ್ತಿರ. ಸಂಪರ್ಕಿಸಿ:
Mob: 9448608680

HERITAGE HOMES

MYSURU - HUNSUR HIGHWAY, MYSORE
MEGA RESIDENTIAL TOWNSHIP
MUDA LIMITS



30x40 | 30x50
40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೇವಲ ₹550/ ಪ್ರತಿ ಚದರ ಅಡಿ
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಸುಲಭ 4 ಕಂತುಗಳ ಸೌಲಭ್ಯವಿದೆ
ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ
ಅದ್ವಿಕಾ ವೆಂಚರ್ಸ್
9513301854 / 9071386615

ಮೈಸೂರು ಪ್ರಾಂತ್ಯ ಮಟ್ಟದ ಸರ್ಕಾರಿ ಅಧಿಕಾರಿಗಳ ಹಾಗೂ ಇತರೆ ನೌಕರರ ಗೃಹ ನಿರ್ಮಾಣ ಸಹಕಾರಿ ಸಂಘ (ನಿ.), ಹೂಟಗಳ್ಳಿ, ಮೈಸೂರು

ನೋಂದಣಿ ಸಂಖ್ಯೆ : ಜೆ.ಆರ್.ಎಂ/ಎಸ್–7/ಹೆಚ್.ಹೆಚ್.ಎಸ್/41736/2013–14 ದಿನಾಂಕ: 03–06–2023
ನಂ.66, ಹೆಚ್.ಐ.ಜಿ.–1, ಗ್ರೂಪ್–4, ಹಬ್ಬಲ್ ರೋಡ್, 2ನೇ ಹಂತ ಕೆ.ಹೆಚ್.ಬಿ. ಕಾಲೋನಿ ಹೂಟಗಳ್ಳಿ, ಮೈಸೂರು –18

11ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ಸಂಘದ ಸರ್ವ ಸದಸ್ಯರ 11ನೇ ವಾರ್ಷಿಕ ಮಹಾಸಭೆಯನ್ನು, ದಿನಾಂಕ: 25/09/2023 ರಂದು ಸೋಮವಾರ ಬೆಳಿಗ್ಗೆ 11–00 ಗಂಟೆಗೆ ಮೈಸೂರು ನಗರ ಶ್ರೀ ದರ್ಶಿನಿ ಫಂಕ್ಷನ್ ಹಾಲ್ ನಂ.40/ಎ, ಹೆಚ್.ಐ.ಜಿ, ಗ್ರೂಪ್–2, ಮಹಿಳಾ ಪ್ರಥಮ ದರ್ಜೆ ಕಾಲೇಜು ಹತ್ತಿರ ಕೆ.ಹೆಚ್.ಬಿ ಕಾಲೋನಿ ಹೂಟಗಳ್ಳಿ ಮೈಸೂರುರಲ್ಲಿ ಸಂಘದ ಅಧ್ಯಕ್ಷರಾದ ಶ್ರೀಎಸ್ ರವಿರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಈ ಸಂಬಂಧ ಎಲ್ಲಾ ಅರ್ಹ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ರವಾನಿಸಲಾಗಿದೆ. ಸದರಿ ಆಹ್ವಾನ ಪತ್ರಿಕೆ ತಲುಪದೇ ಇರುವಂತಹ ಸದಸ್ಯರು ಗಳು ಇದನ್ನೇ ಆಹ್ವಾನ ಪತ್ರಿಕೆಯೆಂದು ಭಾವಿಸಿ ವಾರ್ಷಿಕ ಮಹಾಸಭೆಗೆ ಹಾಜರಾಗಬೇಕಾಗಿ ಈ ಮೂಲಕ ಕೋರಲಾಗಿದೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸೈಟು ಮಾರಾಟಕ್ಕಿದೆ

30x50 ಅಳತೆ, ಪಶ್ಚಿಮ ದಿಕ್ಕು ಸೈಟು ಮಾರಾಟಕ್ಕಿದೆ.
ಪ್ರೀತಿ ಲೇಔಟ್‌ನಲ್ಲಿ, ವಿಜಯನಗರ 4ನೇ ಹಂತದ ಹತ್ತಿರ, ಮೈಸೂರು.
Mob: 9480631518



ONLY ONE WAY TAXI CHARGE
MYSORE to BANGALORE City drop or Pick up
BANGALORE to MYSORE Airport drop or Pick up
Shakthi Nagar MYSURU
9611177599

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

PUBLIC NOTICE

This is to inform the public at large that Our client Sri. Nanjundaiah. K.B., S/o. Boraiah, aged about 43 years, R/at. No:25, Gavipuram, HBCS Layout, Mallathalli, Bengaluru south (M) 9448955833 intends to purchase the property bearing Sy. No: 185/1 to an extent of 1 acre 26 guntas and Sy No: 185/2 to an extent of 34 guntas of Naganahalli Kasaba Hobli, Mysuru Taluk and District from one Smt. Mariyam Fouzeen, W/o. Mohammed Ansar, R/of. No: 132/2, BABE IKHALAS Main Road, Bhatkal, Uttara Kannada District who is the absolute owner in possession having absolute right, title, interest and ownership over the said property. If anybody has any sort of objections/claim over the said property shall contact the undersigned advocate or the above purchaser by showing the relevant documents to establish your right, title and possession over the said property within a period of 15 days from the date of this paper publication. If anybody claiming interest fails to do so within the said period our client will proceed to purchase the above property and deem that the above property is free from all sorts of encumbrances.

SCHEDULE PROPERTY

All that piece and parcel of property bearing Sy. No: 185/1 to an extent of 1 acre 26 guntas and Sy No: 185/2 to an extent of 34 guntas of Naganahalli Village, Kasaba Hobli, Mysuru Taluk and District and bounded on the:
East by : Virijanale, **West by :** Mysuru-Bengaluru Main and Service Road, **North by :** Property of Chaluvaiah **South by :** Property of Venkate Gowda

Sd/- **NARASIMHA REDDY,** Advocate
S.N Associaties No.1064/32, Ramamurihy Arcade, 2nd Floor, Triveni Road, Cokula 1st Stage, 2nd Phase, Near Ramaiah College Bus Stop, Bengaluru-54.
Email : snassociates2010@gmail.com
Date:23.09.2023, Place: Bangalore.

ಮೈಸೂರು ಪ್ರಾಂತ್ಯ ಮಟ್ಟದ ಸರ್ಕಾರಿ ಅಧಿಕಾರಿಗಳ ಹಾಗೂ ಇತರೆ ನೌಕರರ ಗೃಹ ನಿರ್ಮಾಣ ಸಹಕಾರಿ ಸಂಘ (ನಿ.), ಹೂಟಗಳ್ಳಿ, ಮೈಸೂರು

ನಂ. 35, ಹೆಚ್.ಐ.ಜಿ–1, ಗ್ರೂಪ್–4, 2ನೇ ಹಂತ,
ಕೆಹೆಚ್‌ಬಿ ಕಾಲೋನಿ, ಮುಖ್ಯರಸ್ತೆ, ಹೂಟಗಳ್ಳಿ, ಮೈಸೂರು ನಗರ–570018

ವಿಳಾಸ ಬದಲಾವಣೆ

ಮೈಸೂರು ಪ್ರಾಂತ್ಯ ಮಟ್ಟದ ಸರ್ಕಾರಿ ಅಧಿಕಾರಿಗಳು ಹಾಗೂ ಇತರ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ರಿ.) ಮೈಸೂರು ಇದರ ಸದರಿ ಕಚೇರಿ ನಂ.35, ಹೆಚ್‌ಐಜಿ–1, ಗ್ರೂಪ್–4, ಕೆಹೆಚ್‌ಬಿ ಕಾಲೋನಿ ಹೂಟಗಳ್ಳಿ, ಮೈಸೂರು ಇದರ ಕಚೇರಿಯು ನಂ.66, ಹೆಚ್.ಐ.ಜಿ. ಗ್ರೂಪ್ –4, 2ನೇ ಹಂತ ಕೆ.ಹೆಚ್.ಬಿ. ಕಾಲೋನಿ ಹೂಟಗಳ್ಳಿ, ಮೈಸೂರು ಈ ವಿಳಾಸಕ್ಕೆ ಬದಲಾವಣೆಯಾಗಿದ್ದು, ಸಂಘದ ಸದಸ್ಯರು ಇನ್ನೂ ಮುಂದೆ ಸಂಘದ ಎಲ್ಲಾ ಕಾರ್ಯಚಟುವಟಿಕೆಗಳಿಗಾಗಿ ಸಂಬಂಧಪಟ್ಟ ಕಛೇರಿಯನ್ನು ಸಂಪರ್ಕಿಸಬೇಕಾಗಿ ಈ ಮೂಲಕ ತಿಳಿಸಿರುತ್ತೇವೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿ

ವಿಜಯನಗರ ಪತ್ತಿನ ಸಹಕಾರ ಸಂಘ ನಿಯಮಿತ

#12, ನೆಲಅಂತಸ್ತು, ಕನ್ನಡ ಸಾಹಿತ್ಯ ಪರಿಷತ್ತು ಭವನ ರಸ್ತೆ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಮುಂಭಾಗ, ವಿಜಯನಗರ 1ನೇ ಹಂತ, ಮೈಸೂರು–570017

ನಮ್ಮ ಸಂಘದ 20 ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 24–09–2023 ರ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಮುಲಕನಾಡು ಭವನ, ಹುಣಸೂರು ಮುಖ್ಯರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಪಕ್ಕ, ಏರ್ಪಡಿಸಲಾಗಿದೆ. ಸಂಘದ ಅಧ್ಯಕ್ಷರಾದ ಶ್ರೀ ಕೆ.ಎಂ.ತೀರ್ಥರಾಜು ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿದೆ. ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನ ಪತ್ರಿಕೆಯೆಂದು ಪರಿಗಣಿಸಿ ಸಭೆಗೆ ಭಾಗವಹಿಸಬೇಕಾಗಿ ವಿನಂತಿ.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/– ಶ್ರೀಮತಿ ನಂದಿನಿ ಎಂ. ಕಾರ್ಯದರ್ಶಿ

PUBLIC NOTICE

My client is intending to purchase the immovable property bearing GF-113 and FF-115, MIG-1, Group-4, situated at HUDCO Scheme at Hootagally Phase-2, KHB Colony, Mysore of Block consisting of 4 residential tenement and 2 in 4 in the multi-storied building measuring East to West 08.00 mtrs and North to South 16 mtrs (plinth area of each house is 48.17 sq.mtrs) bounded on the East: House No. 35, MIG-2, Group-4, on the West: Road, On the North: House No. 110 to 112 MIG-1, Group-4 on the South: House No. 114 to 115 MIG-1, Group-4 from its owner Mr. Mohammed Shafiulla Khan, duly represented by his daughter and GPA Holder Mrs. Sara Sanobar. Any person having any objections or claiming any right, title or interest in the said property are required to lodge the same with the undersigned along with documentary evidence within 15 days from this date failing which my client shall proceed with the transactions of the said property free from all encumbrances.

Sd/- Sudha T.C., B.A.L., LL.B
Advocate, Flat No. B-218, 1st Floor, Wilson Vintage Apt., No. 24, 12th Cross, Opp. Adugodi P.O., Wilson Garden, Bangalore-560 027.
Ph: 2220707 / 9880080528
Mysore
Date: 22-9-2023

WE ARE HIRING...

We are hiring for the following position.
- **Team Leader –** Minimum of 4 to 8 years of experience,
- **Quality Analyst –** Minimum 3 to 6 years of experience
- **Process Associate –** Fresher or Experience (0 to 3 years)

Skills set
- Good in reading, writing and speaking English.
- Candidates from BPM - Voice or Non-voice process are preferred,
- Knowledge of Insurance products, AI/ML, Document Verification/ Validation, or any other BPM Process will be an added advantage.
- Any graduation with Knowledge of MS Office products.

Interested candidates can walk in with an updated resume for an interview

WALK-IN DETAILS
24-09-2023 to 30-09-2023
Timing: 10:30 am to 4:00 pm

Venue: **Kriya Nextwealth Pvt. Ltd.**
#331-B, KIADB Hebbal Industrial Layout, Mysuru – 570018
Contact : 9380778518 / 7676156798
Applicants can also whatsapp or forward their resumes to **careers@kriyanxw.in**



ಸಿಟಿ ಬಸ್‌ನಲ್ಲಿ ಮಹಿಳೆಯ ಚಿನ್ನದ ಸರ; 4 ಸಾವಿರ ರೂ. ಮಂಗಮಾಯ

ಮೈಸೂರು,ಸೆ.23(ಆರ್‌ಕೆ)– ಮೈಸೂರು ನಗರ ಸಾರಿಗೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆ ಕೊರಳಿನಲ್ಲಿದ್ದ 40 ಗ್ರಾಂ ಚಿನ್ನದ ಮಾಂಗಲ್ಯ ಸರ ಹಾಗೂ ಪರ್ಸಿನಲ್ಲಿದ್ದ 4,000 ರೂ. ಹಣ ಎಗರಿಸಿರುವ ಘಟನೆ ಬೋಗಾದಿ ರಸ್ತೆಯಲ್ಲಿ ಗುರುವಾರ ಬೆಳಿಗ್ಗೆ ಸಂಭವಿಸಿದೆ. ಶ್ರೀರಂಗಪಟ್ಟಣ ತಾಲೂಕು, ಪಾಲಹಳ್ಳಿಯ ಮಲ್ಲಿಕಾರ್ಜುನ ಅವರ ಪತ್ನಿ ಸುಧಾ ಚಿನ್ನಾಭರಣ ಮತ್ತು ನಗದು ಕಳೆದುಕೊಂಡವರು. ಸಂಬಂಧಿಕರ ಉತ್ತರ ಕ್ರಿಯಾದಿ ಕಾರ್ಯದಲ್ಲಿ ಭಾಗವಹಿಸಲೆಂದು ಪಾಲಹಳ್ಳಿಯಿಂದ ಸಿಟಿ ಬಸ್‌ನಲ್ಲಿ ಮೈಸೂರು ನಗರ ಬಸ್ ನಿಲ್ದಾಣಕ್ಕೆ ಬಂದ ಅವರು, ಬೋಗಾದಿ ಮಾರ್ಗದ ಮತ್ತೊಂದು ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು.

ಜನಜಂಗುಳಿ ಇದ್ದ ಕಾರಣ ಸೀಟು ಸಿಗದೆ ಮಗು ಎತ್ತಿಕೊಂಡು ಪಕ್ಕಕ್ಕೆ ಬಂದು ನಿಂತ ಮಹಿಳೆಯೊಬ್ಬರು ಕುಳಿತಿದ್ದ ಸುಧಾ ಅವರ ಕೈಗೆ ಮಗುವನ್ನು ಕೊಟ್ಟು ಪಕ್ಕದಲ್ಲೇ ನಿಂತಿದ್ದಳು. ಬಸ್ಸು ಆಯಿಷ್ ಸರ್ಕಲ್‌ಗೆ ಬಂದು ನಿಂತಾಗ ಆಕೆ ಮಗುವನ್ನು ಪಡೆದು ಕೊಂಡು ಬಸ್ ಇಳಿದಿದ್ದಾಳೆ. ಮುಂದಿನ ಸ್ಟಾಪ್, ಹರ್ಷ ಬಾರ್ ಬಳಿ ಇಳಿಯ ಬೇಕಾಗಿದ್ದರಿಂದ ಸುಧಾ ಅವರು ಪರ್ಸ್ ನೋಡಿಕೊಂಡಾಗ ಅದರ ಜಿಪ್ ಅರ್ಧ ತೆರೆದಿತ್ತು. ಅಚ್ಚರಿಯಿಂದ ಪರಿಶೀಲಿಸಿದಾಗ ಅದರಲ್ಲಿದ್ದ 4,000 ರೂ. ನಗದು ಕಾಣಿಸ ಲಿಲ್ಲ. ನಂತರ ಕೊರಳಲ್ಲಿದ್ದ 40 ಗ್ರಾಂ ಚಿನ್ನದ ಮಾಂಗಲ್ಯ ಸರವೂ ಇಲ್ಲದಿರುವುದು ತಿಳಿಯಿತು. ತಕ್ಷಣ ಸುಧಾ ಅವರು ಬಸ್ಸಿನ ಕಂಡಕ್ಟರ್, ಡ್ರೈವರ್‌ಗೆ ವಿಷಯ ತಿಳಿಸಿ, ನೆರವು ಕೇಳಿದರೂ ಅವರು ತಲೆ ಕೆಡಿಸಿಕೊಳ್ಳದ ಕಾರಣ, ಅವರು ಮುಂದಿನ ಹರ್ಷ ಬಾರ್ ಸರ್ಕಲ್ ಬಳಿಯ ನಿಲ್ದಾಣದಲ್ಲಿ ಬಸ್‌ನಿಂದಿಳಿದು ಸಂಬಂಧಿಕರಿಗೆ ಫೋನ್ ಮಾಡಿ ಕರೆಸಿಕೊಂಡು ಸರಸ್ವತಿಪುರಂ ಠಾಣೆಗೆ ತೆರಳಿ ದೂರು ನೀಡಿದರು.

ಬಸ್ ಪ್ರಯಾಣದ ಟಿಕೆಟ್ ಪಡೆದು ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಸುಧಾ ಅವರನ್ನು ಕರೆದುಕೊಂಡು ಹೋಗಿ ಬಸ್‌ನಿಂದಿಳಿದ ಸ್ಥಳ ಹಾಗೂ ಅಪರಿಚಿತ ಮಹಿಳೆ ಇಳಿದ ನಿಲ್ದಾಣಗಳ ಸ್ಥಳ ಮಹಜರು ನಡೆಸಿದರು. ಅಲ್ಲಿನ ಸಿಸಿಟಿವಿ ಕ್ಯಾಮರಾಗಳ ಫುಟೇಜಸ್ ಪಡೆದಿರುವ ಪೊಲೀಸರು, ಸುಳಿವಿನ ಜಾಡು ಹಿಡಿದು ತನಿಖೆ ನಡೆಸುತ್ತಿದ್ದಾರೆ.

ಪ್ರಯಾಣಿಕರ ಸೋಗಿನಲ್ಲಿ ಮಗುವನ್ನು ಬಳಸಿಕೊಂಡು ಆಭರಣ ಕಳವು, ಪಿಕ್ ಪಾಕೆಟ್ ಮಾಡುವ ಮಹಿಳೆಯರ ತಂಡ ಕಾರ್ಯಪ್ರವೃತ್ತವಾಗಿರುವ ಶಂಕೆ ಇದ್ದು, ಹಳೇ ಕಳ್ಳಿಯ ಕೈವಾಡವಿರಬಹುದೆಂದು ಸಂಶಯಗೊಂಡಿರುವ ಸರಸ್ವತಿಪುರಂ ಠಾಣೆ ಪೊಲೀಸರು, ಆರೋಪಿಗಳ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಸುಪ್ರೀಂಕೋರ್ಟ್ ಆದೇಶದಂತೆ ತಮಿಳುನಾಡಿಗೆ ನಿರಂತರ ನೀರು ಹರಿಸಿದರೆ

ಕೆಆರ್‌ಎಸ್, ಕಬಿನಿ ಜಲಾಶಯದಲ್ಲಿ ಉಳಿಯುವುದು 22 ಟಿಎಂಸಿ ನೀರಷ್ಟೆ!

ಮುಂದಿನ 8 ತಿಂಗಳು ಕುಡಿಯುವ ನೀರಿಗೂ ಕೊರತೆ ಸಾಧ್ಯತೆ

● ಸುಪ್ರೀಂಕೋರ್ಟ್ ಆದೇಶಿಸಿರುವುದು 5 ಸಾವಿರ ಕ್ಯುಸೆಕ್ ● ಈಗ ಬಿಡುತ್ತಿರುವುದು 9,131 ಕ್ಯುಸೆಕ್ ನೀರು ● ನೈರುತ್ಯ ಮುಂಗಾರಿನಿಂದ ಮೆಟ್ಟೂರು ಭರ್ತಿ ಸಾಧ್ಯತೆ ● ತಮಿಳುನಾಡಿನಲ್ಲಿ ಬೆಳೆಗೆ ಪೂರ್ಣ ಪ್ರಮಾಣದ ನೀರು ಲಭ್ಯ ● ಕರ್ನಾಟಕದಲ್ಲಿ ಬೆಳೆ ಇರಲಿ, ಕುಡಿಯುವ ನೀರಿಗೆ ಹಾಹಾಕಾರ

ಮೈಸೂರು, ಸೆ.23(ಬಿಎಲ್‌ಯು)– ಕಾವೇರಿ ನದಿ ನೀರು ನಿರ್ವಹಣಾ ಮಂಡಳಿ ಆದೇಶದಂತೆ ತಮಿಳುನಾಡಿಗೆ ನಿರಂತರವಾಗಿ ಕಾವೇರಿ ನೀರು ಬಿಡುತ್ತಿರುವುದರಿಂದ ಮಂಡ್ಯದ ಕೆಆರ್‌ಎಸ್ ಹಾಗೂ ಮೈಸೂರಿನ ಕಬಿನಿ ಜಲಾಶಯದಲ್ಲಿ ಡೆಡ್ ಸ್ಟೋರೇಜ್ ಹೊರತುಪಡಿಸಿ ಪ್ರಸ್ತುತ 29.97 ಟಿಎಂಸಿ ನೀರಿದೆ. ಈಗ ಸುಪ್ರೀಂಕೋರ್ಟ್ ಆದೇಶದಂತೆ ಇನ್ನು 15 ದಿನ 7.50 ಟಿಎಂಸಿ ನೀರು ಬಿಟ್ಟರೆ, ಇನ್ನು 2 ಜಲಾಶಯದಲ್ಲಿ ನೀರಿನ ಪ್ರಮಾಣ 22.47 ಟಿಎಂಸಿಗೆ ಕುಸಿಯಲಿದ್ದು, ಮುಂದೆ ಕುಡಿಯುವ ನೀರಿಗೂ ಹಾಹಾ ಕಾರ ಉಂಟಾಗುವುದು ನಿಶ್ಚಿತ.

ಕಾವೇರಿ ನದಿ ನೀರು ನಿರ್ವಹಣಾ ಮಂಡಳಿ ಆದೇಶವನ್ನು ಚಾಚೂ ತಪ್ಪದೆ ಪಾಲಿಸುತ್ತಿರುವ ರಾಜ್ಯ ಸರ್ಕಾರ ಕಳೆದ ಎರಡೂವರೆ ತಿಂಗಳಿಂದ ನಿರಂತರವಾಗಿ ನೀರು ಬಿಟ್ಟಿದೆ. ಈಗ ಮತ್ತೆ ಸುಪ್ರೀಂ ಕೋರ್ಟ್ ಆದೇಶದಂತೆ ಪ್ರತಿ ದಿನ 5 ಸಾವಿರ ಕ್ಯುಸೆಕ್ ನೀರು ಬಿಡುತ್ತಿದೆ.

ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿ, ಇಂದಿನ ಮಟ್ಟ 96.86 ಅಡಿಗಳಾಗಿವೆ. ಜಲಾಶಯಕ್ಕೆ 4,792 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 6,631 ಕ್ಯುಸೆಕ್ ನೀರನ್ನು ತಮಿಳುನಾಡಿಗೆ ಹರಿಸಲಾಗುತ್ತಿದೆ. 6.33 ಟಿಎಂಸಿ ಡೆಡ್ ಸ್ಟೋರೇಜ್ ಹೊರತುಪಡಿಸಿ, 16.47 ಟಿಎಂಸಿ ನೀರು ಬಳಕೆಗೆ ದೊರೆಯಲಿದೆ.

ಮೈಸೂರಿನ ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿ, ಇಂದಿನ ಮಟ್ಟ 2,275 ಅಡಿಗಳಾಗಿವೆ. ಜಲಾಶಯಕ್ಕೆ 2,796 ಕ್ಯುಸೆಕ್ ನೀರು ಹರಿದು ಬರುತ್ತಿದ್ದು, 2,500 ಕ್ಯುಸೆಕ್ ತಮಿಳುನಾಡಿಗೆ ಬಿಡಲಾಗುತ್ತಿದೆ. ಕಬಿನಿ ಜಲಾಶಯದಲ್ಲಿ ಡೆಡ್ ಸ್ಟೋರೇಜ್ ಹೊರತುಪಡಿಸಿ ಒಟ್ಟು 13.50 ಟಿಎಂಸಿ ನೀರು ಬಳಕೆಗೆ ಲಭ್ಯವಿದೆ.

ಡೆಡ್ ಸ್ಟೋರೇಜ್ ಬಿಟ್ಟು ಕೆಆರ್‌ಎಸ್‌ನಲ್ಲಿ ದೊರೆಯುವ 16.47 ಟಿಎಂಸಿ ಹಾಗೂ ಕಬಿನಿ ಜಲಾಶಯದ 13.50 ಟಿಎಂಸಿ ಸೇರಿ ಒಟ್ಟು ಎರಡೂ ಜಲಾಶಯದಿಂದ 29.97 ಟಿಎಂಸಿ ನೀರು ಪ್ರಸ್ತುತ ಲಭ್ಯವಿದೆ.

ಈಗ ಸುಪ್ರೀಂಕೋರ್ಟ್ ಆದೇಶದಂತೆ ಪ್ರತಿದಿನ 5 ಸಾವಿರ ಕ್ಯೂಸೆಕ್‌ನಂತೆ 15 ದಿನಗಳ ಕಾಲ 7.50 ಟಿಎಂಸಿ ನೀರು ಬಿಟ್ಟರೆ ಅಂತಿಮವಾಗಿ 22.47 ಟಿಎಂಸಿ ನೀರು ಮಾತ್ರ ಜಲಾಶಯದಲ್ಲಿ ಉಳಿಯುತ್ತದೆ.



ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಶನಿವಾರ ಕೃಷ್ಣರಾಜಸಾಗರ ಜಲಾಶಯಕ್ಕೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದರು. ಮಾಜಿ ಸಚಿವರಾದ ಜಿ.ಟಿ.ದೇವೇಗೌಡ, ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಮುನಿರತ್ನ, ಮಾಜಿ ಶಾಸಕರಾದ ಸುರೇಶ್‌ಗೌಡ, ರವೀಂದ್ರ ಶ್ರೀಕಂಠಯ್ಯ, ನಿಖಿಲ್ ಕುಮಾರಸ್ವಾಮಿ ಇನ್ನಿತರರಿದ್ದರು.

ಈಗಾಗಲೇ ಮುಂಗಾರು ಕೈ ಕೊಟ್ಟಿದ್ದು, ಹಿಂಗಾರು ಮಳೆಯ ಲಕ್ಷಣಗಳು ಕಾಣುತ್ತಿಲ್ಲ. ಹಾಗಾಗಿ ಕರ್ನಾಟಕದ ಪಾಲಿಗೆ ಈ ವರ್ಷದ ಮಳೆಗಾಲ ಮುಗಿದಂತೆಯೇ. ಇದರಿಂದ ಮುಂದಿನ ಮೇ ತಿಂಗಳ ತನಕ ಜಲಾಶಯ ತುಂಬುವುದಿಲ್ಲ. ಇದರಿಂದ ಮುಂದಿನ 8 ತಿಂಗಳ ತನಕ ಈಗ ಉಳಿಯುವ 22.47 ಟಿಎಂಸಿ ನೀರು ಕುಡಿಯಲು ಸಾಕಾಗುವುದೇ ಎಂಬ ಪ್ರಶ್ನೆ ಎದುರಾಗಿದೆ. ಈ ನೀರು ಕುಡಿಯುವುದಕ್ಕೇ ಸಾಕಾಗುವುದಿಲ್ಲ ಎಂದ ಮೇಲೆ ಬೆಳೆ ಬೆಳೆಯಲು ನೀರು ಸಿಗುವುದೇ ಎಂಬುದು ಅನ್ನದಾತರ ಆತಂಕದ ನೂರು ಪ್ರಶ್ನೆ.

ತಮಿಳುನಾಡಿಗೆ ನೈರುತ್ಯ ಮಾರುತದ ಮಳೆ ನಿರೀಕ್ಷೆ ಇದೆ. ಆ ವೇಳೆ ಮೆಟ್ಟೂರು, ಭವಾನಿ ಸೇರಿದಂತೆ ತಮಿಳುನಾಡಿನ ಇತರ ಜಲಾಶಯ ತುಂಬುವ ಸಾಧ್ಯತೆ ಇದೆ ಜೊತೆಗೆ ಈಗಾಗಲೇ ಬಿಟ್ಟಿರುವ ಕಾವೇರಿ ನೀರು ಮೆಟ್ಟೂರಿನಲ್ಲಿ ಶೇಖರಣೆಯಾಗಿದೆ. ಇದರಿಂದ ತಮಿಳುನಾಡಿನಲ್ಲಿ ಸಮೃದ್ಧ ಬೆಳೆ ಬೆಳೆಯುವ ಸಾಧ್ಯತೆಗಳು ಹೆಚ್ಚಿವೆ.

ಆದರೆ ಕರ್ನಾಟಕದ ಕಾವೇರಿ ಜಲಾಯನ ಪ್ರದೇಶದಲ್ಲಿ ಬೆಳೆ ಬೆಳೆಯುವುದಿರಲಿ, ಕುಡಿಯುವ ನೀರಿಗೂ ಕೊರತೆ ಆಗುವುದು ನಿಶ್ಚಿತ. ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರ ಹಾಗೂ ಸುಪ್ರೀಂ ಕೋರ್ಟ್‌ಗೆ ಈ ವಾಸ್ತವತೆಯನ್ನು ನಮ್ಮ ಅಧಿಕಾರಿಗಳು ಹಾಗೂ ವಕೀಲರು ಮನವರಿಕೆ ಮಾಡಿಕೊಟ್ಟಿಲ್ಲವೆ ಎಂಬ ಪ್ರಶ್ನೆ ಎದುರಾಗಿದೆ. ತಮಿಳುನಾಡಿಗೆ ಪ್ರತಿದಿನ 5 ಸಾವಿರ ಕ್ಯುಸೆಕ್ ನೀರು ಹರಿಸುವಂತೆ ಸುಪ್ರೀಂಕೋರ್ಟ್ ಆದೇಶ ನೀಡಿದೆ.

> ಕಳೆದ 120 ವರ್ಷದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಕಾವೇರಿ ಜಲಾಯನ ಪ್ರದೇಶಗಳ ಅಣೆಕಟ್ಟುಗಳಲ್ಲಿ ನೀರಿನ ಪ್ರಮಾಣ ತೀವ್ರ ಕುಸಿದಿದೆ. ಮೈಸೂರು, ಬೆಂಗಳೂರು ಸೇರಿದಂತೆ ಇತರೆಡೆ ಕುಡಿಯುವ ನೀರಿಗೆ ತಿಂಗಳಿಗೆ 2 ಟಿಎಂಸಿ ಅವಶ್ಯವಿದೆ ಎಂದು ಲೆಕ್ಕಾಚಾರ ಹಾಕಲಾಗಿದೆ. ಅದರಂತೆ ಮುಂದಿನ ಮಳೆಗಾಲದ ತನಕ ಅಂದರೆ 8 ತಿಂಗಳವರೆಗೆ 16 ಟಿಎಂಸಿ ನೀರಿನ ಅವಶ್ಯಕತೆ ಇದೆ. ಸುಪ್ರೀಂಕೋರ್ಟ್ ಆದೇಶದಂತೆ ತಮಿಳುನಾಡಿಗೆ 5 ಸಾವಿರ ಕ್ಯುಸೆಕ್ ನೀರು ಬಿಟ್ಟು ಒಟ್ಟಾರೆ ಉಳಿಯುವ ನೀರು ಕುಡಿಯಲು ಸಾಕಾಗುತ್ತದೆ. ಆದರೆ ಬೆಳೆ ಬೆಳೆಯಲು ಸಾಧ್ಯವಿಲ್ಲ. ಈಗ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಲ್ಲಿ ಸ್ವಲ್ಪಮಟ್ಟಿಗೆ ಒಳ ಹರಿವು ಹೆಚ್ಚಾಗಿದೆ. ಒಳಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಾದರೆ ಬೆಳೆಗೂ ನೀರು ಬಿಡಬಹುದು. **–ವೆಂಕಟೇಶ್, ಚೀಫ್ ಇಂಜಿನಿಯರ್, ನೀರಾವರಿ ಇಲಾಖೆ**

ಆದರೆ ಕೆಆರ್‌ಎಸ್‌ನಿಂದ 6,631 ಕ್ಯುಸೆಕ್ ಹಾಗೂ ಕಬಿನಿ ಜಲಾಶಯದಿಂದ 2,500 ಕ್ಯುಸೆಕ್ ಸೇರಿ ಒಟ್ಟು 9,131 ಕ್ಯುಸೆಕ್ ನೀರನ್ನು ತಮಿಳುನಾಡಿಗೆ ಬಿಡಲಾಗುತ್ತಿದೆ. ಅಂದರೆ ಸುಪ್ರೀಂಕೋರ್ಟ್ ಆದೇಶಿಸಿರುವುದಕ್ಕಿಂತ ಹೆಚ್ಚಾಗಿ 4,131 ಕ್ಯುಸೆಕ್ ಬಿಡಲಾಗುತ್ತಿದೆ. ರಾಜ್ಯ ಸರ್ಕಾರದ ಈ ನಡೆ ಅನುಮಾನ ಮೂಡಿಸಿದೆ.

ಲೋಕಸಭಾ ಚುನಾವಣೆ: ಕಾಂಗ್ರೆಸ್ ವೀಕ್ಷಕರ ನೇಮಕ

ಬೆಂಗಳೂರು,ಸೆ.23–ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಸಿದ್ಧತೆ ಆರಂಭಿಸಿದ್ದು, ಕ್ಷೇತ್ರವಾರು ಸಂಭಾವ್ಯ ಅಭ್ಯರ್ಥಿಗಳ ಮಾಹಿತಿ ಸಂಗ್ರಹಿಸಿ ವರದಿ ನೀಡಲು ಸಚಿವರನ್ನು ವೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಬಿ.ಎಸ್.ಸುರೇಶ್, ಮಂಡ್ಯಕ್ಕೆ ಡಾ.ಎಂ.ಸಿ.ಸುಧಾಕರ್, ಚಾಮರಾಜನಗರ–ದಿನೇಶ್ ಗುಂಡೂರಾವ್, ಹಾಸನ–ಎನ್.ಚೆಲುವರಾಯಸ್ವಾಮಿ, ಬಾಗಲಕೋಟೆಗೆ ಪ್ರಿಯಾಂಕ ಖರ್ಗೆ, ಬೆಂಗಳೂರು ಕೇಂದ್ರಕ್ಕೆ ಎನ್.ಎಸ್.ಬೋಸ್‌ರಾಜ್, ಬೆಂಗಳೂರು ಉತ್ತರ ಡಾ.ಜಿ.ಪರಮೇಶ್ವರ, ಬೆಂಗಳೂರು ಗ್ರಾಮಾಂತರ ಕೆ.ವೆಂಕಟೇಶ್, ಬೆಂಗಳೂರು ದಕ್ಷಿಣ ಡಾ.ಶರಣಪ್ರಕಾಶ ಪಾಟೀಲ, ಬೆಳಗಾವಿ ಶಿವರಾಜ್ ಎಂ.ತಂಗಡಗಿ, ಗುಲ್ಬರ್ಗಾ ಬಿ.ನಾಗೇಂದ್ರ, ಬೀದರ್ ಸಂತೋಷ್ ಎಸ್.ಲಾಡ್, ವಿಜಯಪುರ ಸತೀಶ್ ಜಾರಕಿ ಹೊಳಿ, ಚಿಕ್ಕಬಳ್ಳಾಪುರ ಜಮೀರ್ ಅಹಮದ್ ಖಾನ್, ಚಿಕ್ಕೋಡಿ ಡಿ.ಸುಧಾಕರ್, ಚಿತ್ರದುರ್ಗ ಡಾ. ಹೆಚ್.ಸಿ.ಮಹದೇವಪ್ಪ, ದಕ್ಷಿಣ ಕನ್ನಡ ಮಧು ಬಂಗಾರಪ್ಪ ದಾವಣಗೆರೆ ಈಶ್ವರ್ ಖಂಡ್ರೆ, ಬಳ್ಳಾರಿ ಶಿವಾನಂದ ಪಾಟೀಲ್, ಧಾರವಾಡ ಲಕ್ಷ್ಮೀ ಹೆಬ್ಬಾಳ್ಕರ್, ಹಾವೇರಿ ಎಸ್.ಎಸ್.ಮಲ್ಲಿಕಾರ್ಜುನ, ಕೋಲಾರ ರಾಮಲಿಂಗ ರೆಡ್ಡಿ, ಕೊಪ್ಪಳ ಆರ್.ಬಿ.ತಿಮ್ಮಾಪುರ, ರಾಯಚೂರು ಕೆ.ಹೆಚ್.ಮುನಿಯಪ್ಪ, ಶಿವಮೊಗ್ಗ ಕೆ.ಎನ್.ರಾಜಣ್ಣ, ತುಮಕೂರು ಕೃಷ್ಣ ಭೈರೇಗೌಡ, ಉಡುಪಿ–ಚಿಕ್ಕಮಗಳೂರು ಮಂಕಾಳ ವೈದ್ಯ ಹಾಗೂ ಉತ್ತರ ಕನ್ನಡ ಕ್ಷೇತ್ರಕ್ಕೆ ಹೆಚ್.ಕೆ.ಪಾಟೀಲ್ ಅವರನ್ನು ನೇಮಿಸಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆದೇಶಿಸಿದ್ದಾರೆ.



ಮೈಸೂರು ತಾಲೂಕು ಬೀರಿಹುಂಡಿ ಗ್ರಾಮದ 'ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ'ದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು. ಮೈಮುಲ್ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕ ಕೆ.ಉಮಾಶಂಕರ್, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಕೆ.ಮರೀಗೌಡ, ಡೈರಿ ವ್ಯವಸ್ಥಾಪಕ ದಿವಾಕರ್, ಸಂಘದ ಅಧ್ಯಕ್ಷೆ ಭಾಗ್ಯಮ್ಮ, ಗುಡ್ಡಪ್ಪನವರಾದ ಮಾದೇಗೌಡ, ಗ್ರಾಮ ಪಂಚಾಯ್ತಿ ಸದಸ್ಯ ಶಿವಣ್ಣ, ಕರೀಗೌಡ, ಬೋಳೇಗೌಡರು, ಡೈರಿ ವಿಸ್ತರಣಾಧಿಕಾರಿ ರಮ್ಯಾ ಮತ್ತಿತರರು ಭಾಗವಹಿಸಿದ್ದರು.

ನಾಳೆ ಮೈಸೂರಿಗೆ ಉಡುಸಲಮ್ಮ ದೇವಿ ಉತ್ಸವಮೂರ್ತಿ ಆಗಮನ



ಮೈಸೂರು, ಸೆ.23–ತುಮಕೂರು ಜಿಲ್ಲೆ, ತಿಪಟೂರು ತಾಲೂಕಿನ ಉಡುಸಲಮ್ಮ ದೇವಿ ಉತ್ಸವ ಮೂರ್ತಿ ಸೆ.25ರಂದು ಸಂಜೆ 7 ಗಂಟೆಗೆ ಮೈಸೂರಿನ ಜಯನಗರದಲ್ಲಿರುವ ಶ್ರೀರಾಮ ಮಂದಿರಕ್ಕೆ ಆಗಮಿಸಲಿದೆ ಎಂದು ಜಯನಗರ ಶ್ರೀರಾಮ ಮಂದಿರದ ಅಧ್ಯಕ್ಷ ಅರುಣ್ ಶರ್ಮ ತಿಳಿಸಿದ್ದಾರೆ. ಶೃಂಗೇರಿಯ ಗ್ರಾಮ ದೇವತೆಯಾದ ಉಡುಸಲಮ್ಮ ದೇವಿ ಇದೇ ಪ್ರಪ್ರಥಮ ಬಾರಿಗೆ ಮೈಸೂರಿಗೆ ಆಗಮಿಸುತ್ತಿದ್ದು, ಸುಮಾರು 3 ಗಂಟೆಗಳ ಕಾಲ ವಿಶೇಷ ಪೂಜೆ, ಉತ್ಸವ ನಡೆಯಲಿದ್ದು, ಭಕ್ತಾದಿಗಳು ಪಾಲ್ಗೊಳ್ಳುವಂತೆ ಅವರು ಕೋರಿದ್ದಾರೆ.


ನಿದ್ರೆಯಿಂದ ವಿಕ್ರಮ್ ಲ್ಯಾಂಡರ್, ಪ್ರಗ್ಯಾನ್ ರೋವರ್ ಎಬ್ಬಿಸುವ ಮೊದಲ ಯತ್ನ ವಿಫಲ

ಬೆಂಗಳೂರು, ಸೆ.23– ಚಂದ್ರಯಾನ 3ರ 14 ದಿನಗಳ ಯಶಸ್ವಿ ಕಾರ್ಯಾಚರಣೆ ಬಳಿಕ 14 ದಿನಗಳ ಸುದೀರ್ಘ ನಿದ್ರೆಗೆ ಜಾರಿದ್ದ ವಿಕ್ರಮ್ ಲ್ಯಾಂಡರ್, ಪ್ರಗ್ಯಾನ್ ರೋವರ್‌ಗಳನ್ನು ಎಬ್ಬಿಸುವ ಮೊದಲ ಪ್ರಯತ್ನ ವಿಫಲವಾಗಿದೆ.

ಶುಕ್ರವಾರ ಚಂದ್ರನ ಮೇಲಿರುವ ವಿಕ್ರಮ್ ಲ್ಯಾಂಡರ್ ಮತ್ತು ಪ್ರಗ್ಯಾನ್ ರೋವರ್‌ಗೆ ಬೆಂಗಳೂರಿನ ಇಸ್ರೋ ನಿಯಂತ್ರಣ ಕೇಂದ್ರದಿಂದ ವಿಜ್ಞಾನಿಗಳು ಸಂದೇಶ ರವಾನಿಸಿದ್ದು, ಈ ಸಂದೇಶಕ್ಕೆ ಲ್ಯಾಂಡರ್ ಮತ್ತು ರೋವರ್‌ನಿಂದ ಯಾವುದೇ ರೀತಿಯ ಪ್ರತಿಕ್ರಿಯೆ ಬಂದಿಲ್ಲ ಎಂದು ತಿಳಿದು ಬಂದಿದೆ. ಚಂದ್ರನ ಮೇಲೆ ಇಳಿದಿರುವ ವಿಕ್ರಮ್ ಲ್ಯಾಂಡರ್ ಮತ್ತು ಪ್ರಜ್ಞಾನ್ ರೋವರ್ ಜತೆಗಿನ ಸಂಪರ್ಕ ಮರುಸ್ಥಾಪಿಸಲು ಇಸ್ರೋ ಶುಕ್ರವಾರ ಪ್ರಯತ್ನಿಸಿತು. ಇದು ಫಲ ಕೊಟ್ಟಿಲ್ಲ. ಆದರೂ, ಸಂಪರ್ಕ ಸಾಧನೆಯ ಪ್ರಯತ್ನ ಮುಂದುವರಿದಿದೆ.

ಚಂದ್ರಯಾನ 3ರ ವಿಕ್ರಮ್ ಲ್ಯಾಂಡರ್ ಮತ್ತು ಪ್ರಜ್ಞಾನ ರೋವರ್ ಅನ್ನು ಪುನಃ ಸಕ್ರಿಯಗೊಳಿಸುವ ಪ್ರಯತ್ನಕ್ಕೆ ಶುಕ್ರವಾರ ಸರಿಯಾದ ಸ್ಪಂದನೆ ಸಿಕ್ಕಿಲ್ಲ. ಆದಾಗ್ಯೂ, ಪ್ರಯತ್ನ ಮುಂದುವರಿದಿದೆ.


ನಿಧನ



ಬಸವಣ್ಣ

ಮೈಸೂರು, ಸೆ.23– ಮೈಸೂರು ನಗರಪಾಲಿಕೆ ಆಯುಕ್ತರ ಕಚೇರಿಯಲ್ಲಿ ದಫೇದಾರರಾಗಿ ನಿವೃತ್ತರಾಗಿದ್ದ ಹಾಗೂ ಮೈಸೂರು ರಾಜೇಂದ್ರನಗರದ ಬಸವೇಶ್ವರ ರಸ್ತೆಯ ನಿವಾಸಿ ಬಸವಣ್ಣ (92) ಅವರು ಶನಿವಾರ ನಿಧನರಾದರು. ಮೃತರು ಪತ್ನಿ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12.30ಕ್ಕೆ ಮೈಸೂರು ಬನ್ನಿಮಂಟಪದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಎಚ್.ಆರ್. ಹರಿಪ್ರಸಾದ್



ನಂಜನಗೂಡು ತಾಲೂಕಿನ ಹನಿಯಂಬಳ್ಳಿ ಗ್ರಾಮದ ನಿವಾಸಿ ಎಚ್.ಆರ್. ಹರಿಪ್ರಸಾದ್ (51) ಶನಿವಾರ ನಿಧನರಾದರು. ಮೃತರು ತಾಯಿ ಪುಟ್ಟ ಚಿನ್ನಮ್ಮ, ಪತ್ನಿ ನಿಂಗಮಣಿ, ಮಕ್ಕಳಾದ ನಿಖಿಲ್, ಪೂರ್ಣಿಮಾ, ಮದನ್‌ಕುಮಾರ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಹನಿಯಂಬಳ್ಳಿ ಗ್ರಾಮದಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮರಟಿಕ್ಯಾತನಹಳ್ಳಿ ಚೆಲುವೇಗೌಡರು

ಮೈಸೂರು ತಾಲೂಕಿನ ಮರಟಿಕ್ಯಾತನಹಳ್ಳಿ ನಿವಾಸಿ ಹಾಗೂ ಗ್ರಾಮದ ಯಜಮಾನರಾದ ಲೇಟ್ ಕರೀಗೌಡರ ಪುತ್ರ ಚೆಲುವೇಗೌಡ(73) ಇಂದು ರಾತ್ರಿ ನಿಧನರಾದರು. ಇವರು ಪತ್ನಿ ಲಕ್ಷ್ಮಮ್ಮ, ಪುತ್ರರಾದ ಸುರೇಶ್, ರಾಮು, ವೆಂಕಟೇಶ್, ಪುತ್ರಿ ಲತಾ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಭಾನುವಾರ) ಮಧ್ಯಾಹ್ನ 1 ಗಂಟೆಗೆ ಮರಟಿಕ್ಯಾತನಹಳ್ಳಿಯ ಅವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮುಕ್ತ ವಿವಿ ಪ್ರಶ್ನೆ ಪತ್ರಿಕೆ ಮಾರಾಟ ಪ್ರಕರಣ

ಚಾ.ನಗರ ಕೇಂದ್ರದಿಂದ ಸೋರಿಕೆ

ಪ್ರಾಥಮಿಕ ತನಿಖೆಯಲ್ಲಿ ಸಿಸಿಬಿ ಪೊಲೀಸರಿಗೆ ಸುಳಿವು ಪತ್ತೆ

ಮೈಸೂರು, ಸೆ. 23(ಆರ್‌ಕೆ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ (ಕೆಎಸ್‌ಓಯು)ದ ಪರೀಕ್ಷಾ ಪ್ರಶ್ನೆ ಪತ್ರಿಕೆ ಮಾರಾಟ ಪ್ರಕರಣವು ದಿನದಿಂದ ದಿನಕ್ಕೆ ಹೊಸ ತಿರುವು ಪಡೆದುಕೊಳ್ಳುತ್ತಿದೆ.



ವಿಶ್ವವಿದ್ಯಾನಿಲಯದ ಚಾಮರಾಜನಗರ ಪರೀಕ್ಷಾ ಕೇಂದ್ರದಿಂದ ಮೊಟ್ಟ ಮೊದಲು ಕಂಪ್ಯೂಟರ್ ಇನ್ ಬ್ಯುಸಿನೆಸ್ ವಿಷಯದ ಪ್ರಶ್ನೆ ಪತ್ರಿಕೆಯು ವಾಟ್ಸಾಪ್ ಮೂಲಕ ಪಿಡಿಎಫ್ ಮಾದರಿಯಲ್ಲಿ ವಿದ್ಯಾರ್ಥಿಗಳಿಗೆ ರವಾನೆಯಾಗಿದೆ ಎಂಬುದು ತನಿಖೆ ನಡೆಸುತ್ತಿರುವ ಪೊಲೀಸರಿಗೆ ಪತ್ತೆಯಾಗಿದೆ.

ತಂತ್ರಜ್ಞಾನ ನೆರವಿನಿಂದ ಸುಳಿವಿನ ಜಾಡು ಹಿಡಿದ ಸಿಸಿಬಿ ಘಟಕದ ತನಿಖಾ ತಂಡದ ಅಧಿಕಾರಿಗಳು ಹಾಗೂ ಸಿಬ್ಬಂದಿ ಇಂದು ಚಾಮರಾಜನಗರ ಅಧ್ಯಯನ ಕೇಂದ್ರಕ್ಕೆ ಭೇಟಿ ನೀಡಿ ಅಲ್ಲಿನ ದಾಖಲೆಗಳನ್ನು ವಶಪಡಿಸಿಕೊಂಡು ಮೊದಲು ಮೊಬೈಲ್ ವಾಟ್ಸಾಪ್‌ನಿಂದ ಸೆಂಡ್ ಮಾಡಿದ ವ್ಯಕ್ತಿಯನ್ನು ವಶಕ್ಕೆ ಪಡೆದು, ಪರಿಶೀಲನೆ ನಡೆಸುತ್ತಿದ್ದಾರೆ.

ಚಾಮರಾಜನಗರದಿಂದ ರವಾನೆಯಾದ ಪ್ರಶ್ನೆ ಪತ್ರಿಕೆಯ ಪಿಡಿಎಫ್ ನಂತರ ಮಂಗಳೂರು ಅಧ್ಯಯನ ಕೇಂದ್ರದಿಂದಲೂ ಹಲವರಿಗೆ ರವಾನೆಯಾಗಿದೆ ಎಂಬ ಮಾಹಿತಿ ತಿಳಿಯುತ್ತಿದ್ದಂತೆಯೇ ಕಾರ್ಯಪ್ರವೃತ್ತರಾಗಿರುವ ಪೊಲೀಸರು, ಮೊಬೈಲ್ ಕರೆಗಳ ಮಾಹಿತಿ ಆಧರಿಸಿ ಸಂಬಂಧಪಟ್ಟವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಎಲ್ಲಾ ಪದವಿ, ಸ್ನಾತಕ ಪದವಿ ಹಾಗೂ ಡಿಪ್ಲೊಮಾ ಕೋರ್ಸುಗಳ ಪರೀಕ್ಷೆ ನಡೆಸುವುದು, ಪ್ರಶ್ನೆ ಪತ್ರಿಕೆ ಸಿದ್ಧಗೊಳಿಸುವುದು, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮಾಡಿ ಫಲಿತಾಂಶ ನೀಡುವುದು ಪರೀಕ್ಷಾಂಗ ಕುಲಸಚಿವರ ಜವಾಬ್ದಾರಿಯಾಗಿದ್ದು, ಡೀನ್, ಕುಲಸಚಿವ ಹಾಗೂ ಕುಲಪತಿಗಳು ಅದರ ಮೇಲ್ವಿಚಾರಣೆ ನಡೆಸುತ್ತಾರಷ್ಟೆ.

ಆದರೆ, ಪರೀಕ್ಷಾಂಗ ಕುಲಸಚಿವರೇ ಪ್ರಶ್ನೆ ಪತ್ರಿಕೆ ಸಿದ್ಧಪಡಿಸಲು ಸಂಬಂಧಪಟ್ಟ ಹಿರಿಯ ಪ್ರಾಧ್ಯಾಪಕರಿಗೆ ಜವಾಬ್ದಾರಿ ನೀಡುವುದರಿಂದ ಅವರಿಗೆ ಗೊತ್ತಿಲ್ಲದಂತೆ ಪ್ರಶ್ನೆ ಪತ್ರಿಕೆಗಳು ಪರೀಕ್ಷೆಗೆ ಮುಂಚೆಯೇ ಮೊಬೈಲ್ ವಾಟ್ಸಾಪ್ ಮೂಲಕ ರವಾನೆಯಾಗಲು ಸಾಧ್ಯವಿಲ್ಲ ಎಂಬ ಪ್ರಾಥಮಿಕ ಅಂಶವು ತನಿಖಾನಿರತ ಸಿಸಿಬಿ ಅಧಿಕಾರಿಗಳಿಗೆ ಸ್ಪಷ್ಟವಾಗಿದೆ.

ತಂತ್ರಜ್ಞಾನ ಬಳಸಿ ತನಿಖೆಯನ್ನು ಚುರುಕುಗೊಳಿಸಿದಷ್ಟೂ ಈ ಜಾಲ ಆಳವಾಗುತ್ತಾ ಹೋಗುತ್ತಿದ್ದು, ಮುಕ್ತ ವಿಶ್ವವಿದ್ಯಾನಿಲಯದ ಹೊರಗುತ್ತಿಗೆ, ಹಂಗಾಮಿ ನೌಕರರನ್ನು ಬಳಸಿಕೊಂಡು ಪರೀಕ್ಷಾ ಪ್ರಶ್ನೆ ಪತ್ರಿಕೆಗಳನ್ನು ವ್ಯಾಪಕವಾಗಿ ಮಾರಾಟ ಮಾಡಲಾಗಿದೆ ಎಂಬುದು ತಿಳಿದು ಬಂದಿದೆ.

ಇದು ಕೇವಲ ಅಂತಿಮ ವರ್ಷದ ಬಿಕಾಂ ಕಂಪ್ಯೂಟರ್ ಇನ್ ಬ್ಯುಸಿನೆಸ್ ವಿಷಯದ ಪ್ರಶ್ನೆ ಪತ್ರಿಕೆಗಷ್ಟೇ ಸೀಮಿತವಾಗದೇ, ಎಲ್ಲಾ ಪದವಿಯ ಎಲ್ಲಾ ವರ್ಷಗಳ ಎಲ್ಲಾ ವಿಷಯದ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳೂ ಮಾರಾಟವಾಗಿರುವ ಶಂಕೆ ವ್ಯಕ್ತವಾಗಿದೆ.

ದಿನದಿಂದ ದಿನಕ್ಕೆ ಮುಕ್ತ ವಿವಿ ಪ್ರಶ್ನೆ ಪತ್ರಿಕೆ ಮಾರಾಟ ಪ್ರಕರಣವು ರೋಚಕ ತಿರುವು ಪಡೆಯುತ್ತಿದ್ದು, ಪ್ರಕರಣ ಬಯಲಾಗುತ್ತಿದ್ದಂತೆಯೇ ಕೆಲವರು ತಮ್ಮ ಮೊಬೈಲ್‌ನಲ್ಲಿ ಚಾಟ್ ಮಾಡಿರುವುದನ್ನು ಡಿಲೀಟ್ ಮಾಡಿಕೊಂಡಿದ್ದಾರಲ್ಲದೇ, ಕೆಲವರು ತಮ್ಮ ಮೊಬೈಲ್ ಸಿಮ್ ಕಾರ್ಡ್‌ಗಳನ್ನೇ ನಾಶ ಮಾಡಿದ್ದಾರೆಂಬ ಮಾಹಿತಿಯೂ ಪೊಲೀಸರಿಗೆ ಲಭ್ಯವಾಗುತ್ತಿದೆ.

ಇಂದೂ ಸಿಸಿಬಿ ಅಧಿಕಾರಿಗಳು ಮುಕ್ತ ಗಂಗೋತ್ರಿಯಲ್ಲಿರುವ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಕಚೇರಿ, ಪರೀಕ್ಷಾ ಭವನ, ಪರೀಕ್ಷಾಂಗ ಕುಲಸಚಿವರ ಕಚೇರಿಗೆ ಭೇಟಿ ನೀಡಿ ಪರೀಕ್ಷಾ ಪ್ರಕ್ರಿಯೆ ವಿಧಾನ, ಪ್ರಶ್ನೆ ಪತ್ರಿಕೆ ತಯಾರಿಸಿದವರ ಮಾಹಿತಿ, ಮುದ್ರಣವಾಗುವ ಸ್ಥಳ, ಗೌಪ್ಯತೆ ಕಾಪಾಡುವ ಸಂಬಂಧ ಮಾಡಿಕೊಂಡಿರುವ ಒಪ್ಪಂದದ ಷರತ್ತುಗಳು, ಮತ್ತಿತರ ಅಗತ್ಯ ಮಾಹಿತಿಗಳನ್ನು ಕಲೆ ಹಾಕಿದರು. ಸೋಮವಾರ ಸಿಸಿಬಿ ತನಿಖಾ ತಂಡದ ಅಧಿಕಾರಿಗಳು ಮಂಗಳೂರಿಗೆ ತೆರಳಲಿದ್ದು, ಮುಕ್ತ ವಿಶ್ವವಿದ್ಯಾನಿಲಯದ ಅಲ್ಲಿನ ಪ್ರಾದೇಶಿಕ ಕೇಂದ್ರದಲ್ಲೂ ಪರಿಶೀಲನೆ ನಡೆಸಲಿದ್ದಾರೆ. ಅಲ್ಲಿನ ಸ್ಥಳೀಯ ಪೊಲೀಸರ ನೆರವು ಪಡೆದು ಕೆಲ ಶಂಕಿತ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲು ಸಿಸಿಬಿ ತಂಡವು ಅಗತ್ಯ ಸಿದ್ಧತೆ ನಡೆಸಿದೆ.

ಪ್ರವಾಸೋದ್ಯಮ ಇಲಾಖೆಯಿಂದ ವಿನೂತನ ಚಾಲೆಂಜ್!

ಮೈಸೂರು, ಸೆ.23(ಎಸ್‌ಬಿಡಿ)– ವಿಶ್ವ ಪರಿಸರ ದಿನಾಚರಣೆ ಹಿನ್ನೆಲೆಯಲ್ಲಿ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ವಿನೂತನ ಚಾಲೆಂಜ್ ನೀಡಿದ್ದು, ಆಸಕ್ತರು ಭಾಗವಹಿಸುವಂತೆ ಮನವಿ ಮಾಡಲಾಗಿದೆ.

ವಿಡಿಯೋ ಮತ್ತು ಫೋಟೋ ಚಾಲೆಂಜ್: ಕಂಟೆಂಟ್ ಕ್ರಿಯೇಟರ್ಸ್ ಮತ್ತು ಪ್ರವಾಸಿ ಉತ್ಸಾಹಿಗಳು ಟೂರಿಸಂ ಅಂಡ್ ಗ್ರೀನ್ ಇನ್ವೆಸ್ಟ್‌ಮೆಂಟ್ಸ್ ಸೇರಿದಂತೆ ಇತರೆ ಥೀಮ್ ಮೇಲೆ ರೀಲ್ಸ್, ವಿಡಿಯೋ ಅಥವಾ ವ್ಲಾಗ್ ರಚಿಸಿ, ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಮತ್ತೊಂದು ವಿಭಾಗದಲ್ಲಿ ನಿಮ್ಮ ಕುಟುಂಬ ಅಥವಾ ಗೆಳೆಯರೊಂದಿಗೆ ಕರ್ನಾಟಕ ಪ್ರವಾಸ ಕೈಗೊಂಡು ಕ್ಲಿಕ್ಕಿಸಿದ ಉತ್ತಮ ಫೋಟೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುವ ಮೂಲಕವೂ ಇದರಲ್ಲಿ ಪಾಲ್ಗೊಳ್ಳಬಹುದು.

ರೀಲ್ಸ್, ವಿಡಿಯೋ ಅಥವಾ ವ್ಲಾಗ್‌ಗಳು ಹಾಗೂ ಕುಟುಂಬ ಅಥವಾ ಗೆಳೆಯರೊಂದಿಗೆ ಪ್ರವಾಸದಲ್ಲಿ ಕ್ಲಿಕ್ಕಿಸಿದ ಉತ್ತಮ ಫೋಟೋವನ್ನು #WTDkar nataka compitationಗೆ ಹ್ಯಾಷ್ ಟ್ಯಾಗ್ ಮಾಡಿ, @karnatakaworldನಲ್ಲಿ ಪೋಸ್ಟ್ ಮಾಡಬೇಕು. ಟ್ಯಾಗ್ ಮಾಡುವ ಮೊದಲು, ಪ್ರವಾಸೋದ್ಯಮ ಇಲಾಖೆ ಪೇಜ್ ಅನ್ನು ಫಾಲೋ ಮಾಡಿರಬೇಕು.

ಇನ್ನೆರಡೇ ದಿನ: ಸ್ಪರ್ಧೆಗೆ ಪೋಸ್ಟ್ ಮಾಡಲು ಸೆ.25 ಕಡೇ ದಿನವಾಗಿದ್ದು, ಹೆಚ್ಚು ಕಾಮೆಂಟ್ಸ್ ಮತ್ತು ಲೈಕ್ ಪಡೆದ ಮೊದಲ 3 ಪೋಸ್ಟ್‌ಗಳನ್ನು ವಿಜೇತರನ್ನಾಗಿ ಅಂದು ಸಂಜೆ 6 ಗಂಟೆಗೆ ಘೋಷಿಸಲಾಗುತ್ತದೆ. ಸೆ.27, ವಿಶ್ವ ಪ್ರವಾಸೋದ್ಯಮ ದಿನದಂದು ಬಹುಮಾನ ನೀಡಲಾಗುತ್ತದೆ. ವಿಜೇತರಿಗೆ ಜೆಎಲ್‌ಆರ್, ಕೆಎಸ್‌ಟಿಡಿಸಿ ಮತ್ತು ಇತರೆ ಖಾಸಗಿ ಹೋಟೆಲ್‌ಗಳಲ್ಲಿ ಒಂದು ರಾತ್ರಿ 2 ಹಗಲು ಉಚಿತವಾಗಿ ವಾಸ್ತವ್ಯ ಕಲ್ಪಿಸಿ ಕೊಡಲಾಗುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಟೆರೇಸಿಯನ್ ಪಪೂರ್ವ ಕಾಲೇಜಿನಲ್ಲಿ ಇತಿಹಾಸ ವಿಭಾಗದಿಂದ ಏರ್ಪಡಿಸಿದ್ದ ಐತಿಹಾಸಿಕ ಮೇಳವನ್ನು ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಶ್ರೀಧರ ಉದ್ಘಾಟಿಸಿದರು. ಟೆರೇಸಿಯನ್ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಸ್ಟೀವನ್ ಫರ್ನಾಂಡಿಸ್, ಕಾಲೇಜಿನ ಕಲಾ ವಿಭಾಗದ ಮುಖ್ಯಸ್ಥೆ ಸಾಧನ, ವಾಣಿಜ್ಯ ವಿಭಾಗದ ಮುಖ್ಯಸ್ಥೆ ಅರ್ಸಲ ಜಾರ್ಜ್, ವಿಜ್ಞಾನ ವಿಭಾಗದ ಮುಖ್ಯಸ್ಥೆ ಶ್ರೀಮತಿ ರಬಿಯುತಾಜಿನ್ ಇದ್ದರು.

ಜಯಚಾಮರಾಜೇಂದ್ರ ಒಡೆಯರ್ ಬದುಕಿನ ಅಮೂಲ್ಯ ಪ್ರಸಂಗಗಳ ಸಂಪುಟ ಹೊರತರಬೇಕು

● ಹಿರಿಯ ಸಂಶೋಧಕ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಆಶಯ ● ಡಾ.ಸುಧಾಮಣಿ ಅವರ 'ರಾಜರ್ಷಿ' ಶ್ರೀಮನ್ಮಹಾರಾಜ ಜಯ ಚಾಮರಾಜೇಂದ್ರ ಒಡೆಯರ್ ಬಹದ್ದೂರ್-ಜೀವನ ಮತ್ತು ಸಾಧನೆಗಳು ಕೃತಿ ಬಿಡುಗಡೆ

ಮೈಸೂರು,ಸೆ.23(ಎಸ್‌ಬಿಡಿ)–ಶ್ರೀ ಜಯಚಾಮರಾಜೇಂದ್ರ ಒಡೆಯರ್‌ಗೆ ಸಂಬಂಧಿಸಿದ ಸ್ವಾರಸ್ಯಕರ ಹಾಗೂ ರೋಚಕ ಪ್ರಸಂಗಗಳ ಸಂಪುಟ ಪ್ರಕಟವಾಗಬೇಕು ಎಂದು ಹಿರಿಯ ಸಂಶೋಧಕ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಆಶಯ ವ್ಯಕ್ತಪಡಿಸಿದರು.

ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಪ್ರತಿಷ್ಠಾನ ಮತ್ತು ಸಂಸ್ಕೃತಿ ಬುಕ್ ಏಜೆನ್ಸೀಸ್ ಪ್ರಕಾಶನದ ಸಹಯೋಗದಲ್ಲಿ ಮೈಸೂರಿನ ಮಾನಸಗಂಗೋತ್ರಿ ವಿಜ್ಞಾನ ಭವನದಲ್ಲಿ ಶನಿವಾರ ಆಯೋಜಿಸಿದ್ದ ಇತಿಹಾಸ ನಿವೃತ್ತ ಪ್ರಾಧ್ಯಾಪಕಿ ಡಾ.ಬಿ.ವಿ.ಸುಧಾಮಣಿ ಅವರ 'ರಾಜರ್ಷಿ' ಶ್ರೀಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್– ಜೀವನ ಮತ್ತು ಸಾಧನೆಗಳು(1919–1974) ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಹಾರಾಜ ಕಾಲೇಜಿನಲ್ಲಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಅರ್ಥಶಾಸ್ತ್ರ ಅಧ್ಯಾಪಕರಾಗಿದ್ದ ಪ್ರೊ.ಎಂ.ಹೆಚ್.ಗೋಪಾಲ್ ಅವರು ನನ್ನೊಂದಿಗೆ ಹಲವು ಸಂಗತಿಗಳನ್ನು ಹಂಚಿಕೊಂಡಿದ್ದರು. ರಾಜಕುಮಾರರಾಗಿದ್ದರೂ ಇತರ ವಿದ್ಯಾರ್ಥಿಗಳಂತೆ ತರಗತಿಗೆ ಹಾಜರಾಗಿದ್ದನ್ನು ಸ್ಮರಿಸಿಕೊಂಡಿದ್ದರು. ಇಂಗ್ಲಿಷ್ ಅಧ್ಯಾಪಕರು ಪರೀಕ್ಷೆಯಲ್ಲಿ ನೂರಕ್ಕೆ 53 ಅಂಕ ನೀಡಿದ್ದಾಗ ರಾಜಕುಮಾರ ಎನ್ನುವ ಕಾರಣಕ್ಕೆ ಹೆಚ್ಚು ಅಂಕ ನೀಡಿದ್ದೀರಾ ಎಂದು ಪ್ರಶ್ನಿಸಿದ್ದರು. ಹಾಗಾಗಿದ್ದರೆ ನಿಮಗೆ 70–80 ಅಂಕ ನೀಡುತ್ತಿದ್ದೆ. ನಾನು ನಿಖರ ಅಂಕ ದಾಖಲಿಸಿದ್ದೇನೆ ಎಂದು ಅಧ್ಯಾಪಕರು ಸ್ಪಷ್ಟಪಡಿಸಿದರಂತೆ. ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರಿಗೆ ರಾಷ್ಟ್ರಮಟ್ಟದ ಪ್ರಶಸ್ತಿ ಬಂದಾಗ ಅವರನ್ನು ಅರಮನೆಗೆ ಬರಮಾಡಿಕೊಂಡಾಗ ಅವರು ಕೂರುವವರೆಗೂ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಕುಳಿತುಕೊಳ್ಳಲಿಲ್ಲ. ಮಾಸ್ತಿ ಅವರನ್ನು ಅತ್ಯಂತ ಗೌರವಯುತವಾಗಿ ನಡೆಸಿಕೊಂಡಿದ್ದರು. ಇಂತಹ ಸ್ವಾರಸ್ಯಕರ ಪ್ರಸಂಗಗಳು ಸಂಪುಟವಾಗಿ ಬರಬೇಕು ಎಂದು ಆಶಿಸಿದರು.



ಇತಿಹಾಸ ನಿವೃತ್ತ ಪ್ರಾಧ್ಯಾಪಕಿ ಡಾ.ಬಿ.ವಿ.ಸುಧಾಮಣಿ ಅವರ 'ರಾಜರ್ಷಿ' ಶ್ರೀಮನ್ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್–ಜೀವನ ಮತ್ತು ಸಾಧನೆಗಳು(1919–1974) ಕೃತಿಯ ಎರಡು ಬೃಹತ್ ಸಂಪುಟಗಳನ್ನು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಪುತ್ರಿಯರಾದ ಶ್ರೀಮತಿ ಕಾಮಾಕ್ಷಿದೇವಿ ಮತ್ತು ಶ್ರೀಮತಿ ಇಂದ್ರಾಕ್ಷಿದೇವಿ ಶನಿವಾರ ಬಿಡುಗಡೆ ಮಾಡಿದರು.

ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ರಾಜನೀತಿ, ಆಡಳಿತ, ಸಮಾಜಸೇವೆ ದೃಷ್ಟಿಕೋನದಲ್ಲಿ ಎಲ್ಲಾ ಮಾಹಿತಿಗಳೂ ದಾಖಲಾಗಿವೆ. ಆದರೆ ವಿಶೇಷವಾಗಿ ಅವರ ತತ್ವಜ್ಞಾನ ಸಾಧನೆ, ಸಂಗೀತ, ಸಾಹಿತ್ಯ ಸೇವೆಯ ಬಗ್ಗೆ ಸಾಕಷ್ಟು ವಿವರ ದಾಖಲಾಗಬೇಕಿದೆ. ಅವರು ಅತ್ಯಂತ ಅಭಿಮಾನದಿಂದ ಪುಸ್ತಕಗಳನ್ನು ಬರೆದಿದ್ದಾರೆ. ಸಂಗೀತ ಕೃತಿಗಳನ್ನು ರಚಿಸಿದ್ದಾರೆ. ಪ್ರಕಾಶನ ಮಾಲೆ ಮೂಲಕ ನಾಡಿನ ಸಾಹಿತ್ಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಸ್ವಂತ ಖರ್ಚಿನಲ್ಲಿ ಬೃಹತ್ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇದೆಲ್ಲವೂ ಜನರಿಗೆ ತಿಳಿಯಬೇಕು. ಜಯಚಾಮರಾಜೇಂದ್ರ ಒಡೆಯರ್ ಸಾಹಿತ್ಯ ಸೇವೆ ಪ್ರಯೋಜನ ಪಡೆದು, ಅದನ್ನು ಮುಂದಿನ ಪೀಳಿಗೆಗೆ ದಾಟಿಸುವವರ ಸಂಖ್ಯೆ ಹೆಚ್ಚಾಗಬೇಕು ಎಂದರು.

ಐತಿಹಾಸಿಕ ದಾಖಲೆ: ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರ ಬಾಲ್ಯ, ಜೀವನ, ಹಳೆಯ ಮೈಸೂರು ಸಂಸ್ಥಾನ ಆಧುನಿಕ ಕರ್ನಾಟಕವಾಗಿ ಬದಲಾದ ಸಂಧಿ ಕಾಲದಲ್ಲಿ ಅವರ ಆಡಳಿತ ನಿರ್ವಹಣೆ ಕುರಿತು ಹಲವು ಬಿಡಿ ಲೇಖನ, ಟಿಪ್ಪಣಿ, ಪ್ರಬಂಧ, ಕೆಲವು ಪುಸ್ತಗಳು ಬಂದಿವೆ. ಆದರೆ ಡಾ.ಬಿ.ವಿ.ಸುಧಾಮಣಿ ಅವರ ಕೃತಿ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಕುರಿತ ಸಮಗ್ರ ಮಾಹಿತಿಯನ್ನೊಳಗೊಂಡಿದೆ. ಓದುಗರ ಮನಸ್ಸಿಗೆ ಹಿತವಾಗುವಂತೆ, ಹರ್ಷವಾಗುವಂತೆ ಸರಳವಾಗಿ ದಾಖಲಿಸಿದ್ದಾರೆ. ವಿದ್ಯಾರ್ಥಿಗಳು, ಆಸಕ್ತರು, ಕುತೂಹಲಿಗಳಿಗೆ ಇದು ಐತಿಹಾಸಿಕ ಗ್ರಂಥ ಎಂದು ಬಣ್ಣಿಸಿದರು.

ಮೈಸೂರು ಸಂಸ್ಥಾನದ ನಾಡಗೀತೆ(ಕಾಯೌ ಶ್ರೀಗೌರಿ...)ಯೊಂದಿಗೆ ಕೃತಿ ಬಿಡುಗಡೆ ಕಾರ್ಯಕ್ರಮ ಆರಂಭಿಸಿದ್ದು, ಸಂತಸದ ಸಂಗತಿ. ಈ ನಾಡಗೀತೆಯ ಸರಿಯಾದ ಪಾಠ ಯಾವುದು? ಯಾರು ರಚಿಸಿದರು? ಅದು ಸ್ವಹಸ್ತಾಕ್ಷರದಲ್ಲಿದೆಯೇ? ಮೂಲ ಪಾಠ ಏನಾಗಿತ್ತು? ನಂತರದಲ್ಲಿ ಅರಸೊತ್ತಿಗೆ ಬದಲಾವಣೆಯಿಂದ ಏನೆಲ್ಲ ಬದಲಾಯಿತು? ಇಂತಹ ವಿಚಾರಗಳು ಇಂದಿಗೂ ನನ್ನನ್ನು ಕಾಡುತ್ತಿವೆ. ಈ ಸಂಬಂಧ ಅಧ್ಯಯನ ಮಾಡಿ ಪ್ರಬಂಧ ಬರೆಯುವ ಆಲೋಚನೆ ಮಾಡಿ 15 ಪುಸ್ತಕಗಳನ್ನು ತರಿಸಿಕೊಂಡೆ. ಆದರೆ ಅಧಿಕೃತ ಕೃತಿ ಸಿಗದ ಕಾರಣ ಪ್ರಯತ್ನ ಮುಂದುವರೆಯಲಿಲ್ಲ. ಆದರೆ ಈ ಕೆಲಸ ಅಗತ್ಯವಾಗಿ ಆಗಬೇಕು ಎಂದು ಅಭಿಪ್ರಾಯಿಸಿದರು. ಇದಕ್ಕೂ ಮುನ್ನ ಮಹಾರಾಜ ಶ್ರೀ ಜಯಚಾಮ ರಾಜೇಂದ್ರ ಒಡೆಯರ್ ಪುತ್ರಿಯರಾದ ಶ್ರೀಮತಿ ಕಾಮಾಕ್ಷಿ ದೇವಿ ಮತ್ತು ಶ್ರೀಮತಿ ಇಂದ್ರಾಕ್ಷಿ ದೇವಿ ಅವರು ಡಾ.ಬಿ.ವಿ.ಸುಧಾಮಣಿ ಅವರ 'ರಾಜರ್ಷಿ' ಶ್ರೀಮನ್ಮಹಾರಾಜ ಜಯಚಾಮ ರಾಜೇಂದ್ರ ಒಡೆಯರ್ ಬಹದ್ದೂರ್–ಜೀವನ ಮತ್ತು ಸಾಧನೆಗಳು (1919–1974) ಕೃತಿಯ ಎರಡು ಬೃಹತ್ ಸಂಪುಟಗಳನ್ನು ಬಿಡುಗಡೆ ಮಾಡಿದರು. ಇಂದ್ರಾಕ್ಷಿದೇವಿ ಅವರ ಪತಿ ಆರ್.ರಾಜಾಚಂದ್ರ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಲೇಖಕಿ ಡಾ.ಬಿ.ವಿ.ಸುಧಾಮಣಿ ಮಾತನಾಡಿದರು. ಸಂಸ್ಕೃತಿ ಬುಕ್ ಏಜೆನ್ಸೀಸ್ ಪ್ರಕಾಶನದ ಸಂಸ್ಕೃತಿ ಸುಬ್ರಹ್ಮಣ್ಯ ಮತ್ತಿತರರು ಉಪಸ್ಥಿತರಿದ್ದರು.

> ನಮ್ಮ ತಂದೆ ಕರುಣಾಮಯಿ, ಪರೋಪಕಾರಿಯಾಗಿದ್ದರು. ಪ್ರಜೆಗಳಿಗೆ ಉಪಕಾರ ಮಾಡುವುದೇ ಅವರ ಆದ್ಯತೆಯಾಗಿತ್ತು. ಸದಾ ಜನರ ಬಗ್ಗೆಯೇ ಯೋಚಿಸುತ್ತಿದ್ದರು. ಆದ್ದರಿಂದಲೇ ಇಂದಿಗೂ ನಮ್ಮ ತಂದೆಯವರನ್ನು ಜನ ಅತ್ಯಂತ ಗೌರವದಿಂದ ಸ್ಮರಿಸಿಕೊಳ್ಳುತ್ತಾರೆ. ಇದು ನಮ್ಮ ಪರಿವಾರದ ಎಲ್ಲರೂ ಹೆಮ್ಮೆಪಡುವ ಕ್ಷಣ. **–ಶ್ರೀಮತಿ ಕಾಮಾಕ್ಷಿದೇವಿ**



ಮೈಸೂರು ಮಹಾನಗರ ಪಾಲಿಕೆ ಸದಸ್ಯ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ ಅವರನ್ನು ಜನ್ಮದಿನದ ಹಿನ್ನೆಲೆಯಲ್ಲಿ ಅಭಿನಂದಿಸಲಾಯಿತು. ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ರಾಮಚಂದ್ರ, ಪುಟ್ಟಸ್ವಾಮಿ ಇದ್ದರು.

ಇಂದು ಎಂ.ಡಿ.ಪಲ್ಲವಿ ಅವರಿಂದ ಸುಗಮ ಸಂಗೀತ ಸಂಜೆ ಕಾರ್ಯಕ್ರಮ



ಮೈಸೂರು, ಸೆ.23–ಉಡುಪಿ ಪೇಜಾವರ ಮಠದ ಶ್ರೀ ಶ್ರೀ ವಿಶ್ವ ಪ್ರಸನ್ನತೀರ್ಥ ಶ್ರೀ ಪಾದಂಗಳವರ 36ನೇ ಚಾತುರ್ಮಾಸ್ಯದ ಪ್ರಯುಕ್ತ ಎಂ.ಡಿ.ಪಲ್ಲವಿ ಅವರಿಂದ ಸುಗಮ ಸಂಗೀತ ಸಂಜೆ ಸಂಗೀತ ಕಾರ್ಯಕ್ರಮವನ್ನು ಸರಸ್ವತಿಪುರಂನಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ನಾಳೆ (ಸೆ.24) ಸಂಜೆ 7 ಗಂಟೆಗೆ ಆಯೋಜಿಸಲಾಗಿದೆ ಎಂದು ಚಾತುರ್ಮಾಸ್ಯ ಸಮಿತಿಯ ಕಾರ್ಯಾಧ್ಯಕ್ಷ ರವಿಶಾಸ್ತ್ರಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ಮಂಡ್ಯ ಬಂದ್ ಸಂಪೂರ್ಣ ಯಶಸ್ವಿ

ಆರ್.ಪಿ.ರಸ್ತೆ, ಗುತ್ತಲು ರಸ್ತೆ, ನೂರಡಿ ರಸ್ತೆ, ಬನ್ನೂರು ರಸ್ತೆ ಸಂಪೂರ್ಣ ಸ್ತಬ್ಧಗೊಂಡಿದ್ದವು. ಅಲ್ಲಲ್ಲಿ ದ್ವಿಚಕ್ರ ವಾಹನಗಳು ಸಂಚರಿಸುತ್ತಿದ್ದರೆ, ರಸ್ತೆಗಳು ಸಂಪೂರ್ಣ ಖಾಲಿ ಖಾಲಿ.

ಪೆಟ್ರೋಲ್ ಸಿಗದೇ ಪರದಾಟ: ಹೋಟೆಲ್, ಅಂಗಡಿ–ಮುಂಗಟ್ಟು, ಪೆಟ್ರೋಲ್ ಬಂಕ್, ಸಿನಿಮಾ ಮಂದಿರಗಳು, ವೈನ್ ಸ್ಟೋರ್‌ಗಳು ಸೇರಿದಂತೆ ಎಲ್ಲವೂ ಬಂದ್. ಪೆಟ್ರೋಲ್ ಸಿಗದೇ ದ್ವಿಚಕ್ರ ವಾಹನ ಸವಾರರು ಪರದಾಡುತ್ತಿದ್ದ ದೃಶ್ಯ ಕಂಡು ಬಂತು.

ನಗರ ವ್ಯಾಪ್ತಿಯ ಶಾಲಾ, ಕಾಲೇಜು ಬಂದ್: ಮಂಡ್ಯ ನಗರ ವ್ಯಾಪ್ತಿಯ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಕೆಲ ವಿದ್ಯಾರ್ಥಿಗಳು ರಜೆ ವಿಚಾರ ಗೊತ್ತಿಲ್ಲದೇ ಶಾಲಾ–ಕಾಲೇಜು ಬಳಿ ಬಂದು ನಂತರ ರಜೆ ಎಂದು ತಿಳಿದ ಮೇಲೆ ಅಲ್ಲಿಂದ ತೆರಳುತ್ತಿದ್ದ ದೃಶ್ಯಗಳು ಕಂಡು ಬಂದವು. ಆದರೆ ಗ್ರಾಮೀಣ ಪ್ರದೇಶದಲ್ಲಿದ್ದ ಶಾಲಾ, ಕಾಲೇಜುಗಳು ಎಂದಿನಂತೆ ಕಾರ್ಯ ನಿರ್ವಹಿಸಿದವು.

ಬಸ್‌ಗಳಿಲ್ಲದೇ ಪರದಾಟ: ಇನ್ನು ಪ್ರಯಾಣಿಕರು, ಶಾಲಾ ಕಾಲೇಜು ವಿದ್ಯಾರ್ಥಿಗಳು ಬಸ್‌ಗಳಿಲ್ಲದೇ ಪರದಾಡುವಂತಾಗಿತ್ತು. ನಗರದ ಕೇಂದ್ರ ಬಸ್ ನಿಲ್ದಾಣ ಸಂಪೂರ್ಣ ಸ್ತಬ್ಧಗೊಂಡಿತ್ತು ನಿಲ್ದಾಣದಲ್ಲಿ ಒಂದೇ ಒಂದು ಬಸ್ ಇಲ್ಲದೇ ಖಾಲಿ ಖಾಲಿ ಹೊಡೆಯುತ್ತಿದ್ದ ದೃಶ್ಯ ಕಂಡು ಬಂತು. ಭಾರೀ ಪ್ರತಿಭಟನೆ ಇದ್ದಿದ್ದರಿಂದ ಬಸ್ ಸಂಚಾರಕ್ಕೆ ಬದಲಿ ವ್ಯವಸ್ಥೆ ಮಾಡಿದ್ದರೆ, ಮಂಡ್ಯ ಬಸ್ ಡಿಪೋದಿಂದ ಬಸ್ ನಿಲ್ದಾಣಕ್ಕೆ ಬಸ್‌ಗಳು ಬರಲಿಲ್ಲ.

ಮಂಡ್ಯ ಪ್ರವೇಶ ನಿರ್ಬಂಧಿಸಿದ್ದ ಪೊಲೀಸರು: ಮಂಡ್ಯ ನಗರದಲ್ಲಿ ಭಾರೀ ಪ್ರತಿಭಟನೆ ಹಿನ್ನೆಲೆಯಲ್ಲಿ ಸಾರಿಗೆ ಬಸ್‌ಗಳು ಹಾಗೂ ಭಾರೀ ವಾಹನಗಳಿಗೆ ನಿರ್ಬಂಧ ವಿಧಿಸಲಾಗಿತ್ತು. ಕೇವಲ ಮಂಡ್ಯ ನಗರದ ಜನರಿಗಷ್ಟೇ ನಗರ ಪ್ರವೇಶಿಸಲು ಅವಕಾಶ ಮಾಡಿಕೊಡಲಾಗಿತ್ತು. ಮೈಸೂರು ಕಡೆಯಿಂದ ಬರುತ್ತಿದ್ದ ವಾಹನಗಳಿಗೆ ವಿ.ಸಿ.ಫಾರಂ ಗೇಟ್ ಬಳಿ, ಅತ್ತ ಬೆಂಗಳೂರು ಕಡೆಯಿಂದ ಬರುವವರಿಗೆ ಶ್ರೀನಿವಾಸಪುರ ಗೇಟ್ ಬಳಿ, ಬನ್ನೂರು ಮಾರ್ಗದಿಂದ ಬರುವವರಿಗೆ ಕ್ಯಾತುಂಗೆರೆ ಗೇಟ್, ನಾಗಮಂಗಲದಿಂದ ಬರುವವರಿಗೆ ಚಿಕ್ಕಮಂಡ್ಯ, ಮಳವಳ್ಳಿ ಮಾರ್ಗದಿಂದ ಬರುವವರಿಗೆ ಗುತ್ತಲು ರಸ್ತೆಯಲ್ಲೇ ಪ್ರವೇಶ ನಿರ್ಬಂಧಿಸಲಾಗಿತ್ತು. ಇದರಿಂದ ಮಂಡ್ಯ ನಗರದಿಂದ ಬಸ್‌ನಲ್ಲಿ ಸಂಚರಿಸುವವರಿಗೆ ಭಾರೀ ಸಮಸ್ಯೆ ಉಂಟಾಯಿತು.

ಐಜಿಪಿ ಬೋರಲಿಂಗಯ್ಯ ಪರಿಶೀಲನೆ: ಬಂದ್ ಹಿನ್ನಲೆಯಲ್ಲಿ ನಗರದಾದ್ಯಂತ ಭಾರೀ ಕಟ್ಟೆಚ್ಚರ ವಹಿಸಿದ್ದ ಜಿಲ್ಲಾ ಪೊಲೀಸರು ಯಾವುದೇ ಅಹಿತಕರ ಘಟನೆ ನಡೆಯದಂತೆ ಕ್ರಮ ತೆಗೆದುಕೊಂಡಿದ್ದರು. ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ ಅವರು ಮಂಡ್ಯ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತ ಸೇರಿದಂತೆ ಪ್ರಮುಖ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಬಂದೋಬಸ್ತ್ ಬಗ್ಗೆ ಎಸ್ಪಿ ಯತೀಶ್‌ರಿಂದ ಮಾಹಿತಿ ಪಡೆದುಕೊಂಡರು. ಬಂದ್ ಹಿನ್ನೆಲೆಯಲ್ಲಿ ಸ್ಥಳೀಯ ಪೊಲೀಸರ ಜೊತೆಗೆ ರ‍್ಯಾಪಿಡ್ ಆಕ್ಷನ್ ಪೋರ್ಸ್ ಸಿಬ್ಬಂದಿ ಸಹ ಕಾರ್ಯ ನಿರ್ವಹಿಸಿದವು.

ಬಳಿಕ ಮಾತನಾಡಿದ ಎಸ್ಪಿ ಯತೀಶ್, ಮಂಡ್ಯದಲ್ಲಿ ಶಾಂತಿಯುತವಾಗಿ ಪ್ರತಿಭಟನೆ ನಡೆದಿದೆ. ಬಂದ್ ಹಿನ್ನೆಲೆಯಲ್ಲಿ ಭದ್ರತಾ ಪಡೆಯನ್ನು ನಿಯೋಜನೆ ಮಾಡಿದ್ದು, ಸದ್ಯ ಎಲ್ಲಿಯೂ ಯಾವುದೇ ಅಹಿತಕರ ಘಟನೆ ನಡೆದಿಲ್ಲ ಎಂದು ಸ್ಪಷ್ಟಪಡಿಸಿದರು.

ಇನ್ನು ಹಿತರಕ್ಷಣಾ ಸಮಿತಿ ಧರಣಿ ಸ್ಥಳಕ್ಕೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಜೆಡಿಎಸ್‌ನ ಮಾಜಿ ಶಾಸಕರು ಮತ್ತು ಬಿಜೆಪಿ ಮುಖಂಡ ಸಿ.ಟಿ.ರವಿ ಆಗಮಿಸಿ, ಬೆಂಬಲ ಸೂಚಿಸಿದರು. ಕಾವೇರಿ ನೀರನ್ನು ತಮಿಳುನಾಡಿಗೆ ಹರಿಸುತ್ತಿರುವ ಕ್ರಮ ಖಂಡಿಸಿ ವಿವಿಧ ಸಂಘಟನೆಗಳು ಕರೆ ನೀಡಿದ್ದ ಮದ್ದೂರು ಬಂದ್ ಸಹ ಸಂಪೂರ್ಣ ಯಶಸ್ವಿಗೊಂಡಿದ್ದು, ಅಂಗಡಿ, ಮುಂಗಟ್ಟುಗಳು, ಶಾಲಾ, ಕಾಲೇಜುಗಳು ಬಂದ್ ಆಗಿದ್ದವು. ವಿವಿಧೆಡೆ ಕನ್ನಡಪರ, ರೈತಪರ ಸಂಘಟನೆಗಳು ಪ್ರತಿಭಟನೆ ನಡೆಸಿದವು.

ರಾಜ್ಯಕ್ಕೆ ನಿರಂತರ ಅನ್ಯಾಯ: ಹೆಚ್ಡಿಕೆ

ಪ್ರಸ್ತುತ 30 ಸಾವಿರ ಕೋಟಿ ಬೆಳೆ ನಷ್ಟ ಆಗಿದೆ. ಭತ್ತ, ಕಬ್ಬು ಬೆಳೆಯುವ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಲ್ಲಿ ವಿಷಯ ಮಂಡನೆ ಮಾಡುವಲ್ಲಿ ನಮ್ಮ ಅಧಿಕಾರಿಗಳು ಲಘುವಾಗಿ ನಡೆದುಕೊಂಡಿದ್ದಾರೆ ಎಂದು ಸರ್ಕಾರ ಮತ್ತು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

ಸುಪ್ರೀಂಕೋರ್ಟ್ ತೀರ್ಪಿನಂತೆ ನೀರು ಬಿಡಬೇಕು. ಇಲ್ಲದಿದ್ದರೆ ನ್ಯಾಯಾಂಗ ನಿಂದನೆ ಆಗುತ್ತದೆ ಎಂದು ರಾಜ್ಯ ಸರ್ಕಾರದವರು ಹೇಳುತ್ತಿದ್ದಾರೆ. ತಮಿಳುನಾಡಿಗೆ ನೀರು ನಿಲ್ಲಿಸಿದರೆ ನ್ಯಾಯಾಂಗ ನಿಂದನೆ ಆಗಲ್ಲ. ಸುಪ್ರೀಂ ಕೋರ್ಟ್‌ಗೆ ನೀರು ಬಿಡಲು ಆಗಲ್ಲ ಎಂದು ಮೇಲ್ಮನವಿ ಸಲ್ಲಿಸಿ ಎಂದು 2016ರ ತೀರ್ಪು ಪ್ರಸ್ತಾಪಿಸಿದ ಹೆಚ್ಡಿಕೆ, ಪಾಲಿಸಲು ಆಗದ ತೀರ್ಪನ್ನು ಪಾಲಿಸದಿದ್ದರೆ ನ್ಯಾಯಾಂಗ ನಿಂದನೆ ಆಗಲ್ಲ ಎಂದು ಆಂಧ್ರದ ನೀರಾವರಿ ಪ್ರಕರಣ ಸಂಬಂಧ ನ್ಯಾಯಮೂರ್ತಿ ಉದಮ್ ಮಲ್ಲಿಕ್ ಹೇಳಿದ್ದರು. ಸೆ.22, 2016 ನ್ಯಾಯಾಲಯ ಅದನ್ನು ಎತ್ತಿ ಹಿಡಿದಿತ್ತು. ಅದೇ ರೀತಿ ರಾಜ್ಯ ಸರ್ಕಾರ ನೀರು ಬಿಡಲು ಆಗಲ್ಲ ಎಂದು ಮೇಲ್ಮನವಿ ಸಲ್ಲಿಸಲಿ ಎಂದು ಸಲಹೆ ನೀಡಿದರು. ಕಾವೇರಿ ಹೋರಾಟಕ್ಕೆ ಜಯ ಸಿಗುವವರೆಗೂ ರೈತರ ಹೋರಾಟಕ್ಕೆ ನಮ್ಮ ಬೆಂಬಲವಿದ್ದು, ಯಾವುದೇ ನ್ಯಾಯಾಂಗ ನಿಂದನೆ ಆಗಲ್ಲ. ತಕ್ಷಣ ನೀರು ನಿಲ್ಲಿಸಿ. ಪ್ರಾಧಿಕಾರ ಕರೆಯುವ ಸಭೆಗೆ ನಮ್ಮ ಪ್ರತಿನಿಧಿಗಳು ಹೋಗಲ್ಲ. ವಿಡಿಯೋ ಕಾನ್ಫರೆನ್ಸ್ ಮೂಲಕ ಸಭೆಯಲ್ಲಿ ಮಾತನಾಡುತ್ತಾರೆ. ಬೆಂಗಳೂರು ಚಿಂತೆ ಬಿಟ್ಟು ನೀರಿನ ಸಮಸ್ಯೆ ಬಗೆಹರಿಸಿ ಎಂದು ಡಿ.ಕೆ.ಶಿವಕುಮಾರ್‌ಗೆ ಸಲಹೆ ನೀಡಿದ್ದೇನೆ ಎಂದರು.

ಕೆಆರ್‌ಎಸ್‌ಗೆ ಭೇಟಿ: ಇದಕ್ಕೂ ಮುನ್ನ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಜೆಡಿಎಸ್‌ನ ಹಾಲಿ ಮತ್ತು ಮಾಜಿ ಶಾಸಕರೊಂದಿಗೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಅಣೆಕಟ್ಟೆಗೆ ಭೇಟಿ ನೀಡಿ, ನೀರಿನ ಮಟ್ಟ ಪರಿಶೀಲಿಸಿ, ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರು.

ಕಾವೇರಿ ಹೋರಾಟದ ಕಹಳೆ

ವರ್ತಿಸುತ್ತಿರುವುದು ಖಂಡ ನೀಯ ಎಂದರು. ತಮಿಳುನಾಡು ವ್ಯವ ಸಾಯಕ್ಕೆ ಅಕ್ರಮವಾಗಿ ನೀರು ಬಳಸು ತ್ತಿದೆ, 32 ಟಿಎಂಸಿ ಬದಲಿಗೆ 67 ಟಿಎಂಸಿ ನೀರು ಪಡೆದಿದ್ದು, ಅಲ್ಲಿನ ರೈತರ ಹಿತ ಕಾಪಾಡಲು ಕರ್ನಾಟಕ ಸರಕಾರ ಮುಂದಾಗಿದೆ ಎಂದು ಟೀಕಿಸಿದರು. ಇದು ಅತ್ಯಂತ ಬೇಜವಾಬ್ದಾರಿಯ ಸರಕಾರ, ಬ್ರ್ಯಾಂಡ್ ಬೆಂಗಳೂರಿಗೆ ನೀರಿಲ್ಲದ ದುಸ್ಥಿತಿ ಬರಲಿದೆ, ಲಕ್ಷಾಂತರ ಜನರಿಗೆ ನೀರಿನ ಸಮಸ್ಯೆ ಎದುರಾಗಲಿದೆ. ಪರಿಸ್ಥಿತಿಯನ್ನು ಸುಪ್ರೀಂಕೋರ್ಟ್ ಗಮನಕ್ಕೆ ತರುವಲ್ಲಿ ಸರಕಾರ ಸಂಪೂರ್ಣ ವಿಫಲವಾಗಿದೆ. ರಾಜ್ಯ ಸರಕಾರಕ್ಕೆ ಆಡಳಿತದ ಮೇಲೆ ನಿಯಂತ್ರಣ ಇಲ್ಲದಂತಾಗಿದೆ, ಮುಖ್ಯಮಂತ್ರಿ ಸಿದ್ದ ರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವ ಕುಮಾರ್, ತಮಿಳುನಾಡಿನ ಹಿತಕ್ಕಾಗಿ ರಾಜ್ಯದ ಹಿತವನ್ನು ಬಲಿ ಕೊಟ್ಟಿದ್ದಾರೆ.

ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವ ಮೂಲಕ ಕಾವೇರಿ ಜಲ ವಿವಾದವನ್ನು ರಾಜಕೀಯ ವಿಷಯವಾಗಿ ಪರಿವರ್ತಿಸಲು ಮುಖ್ಯಮಂತ್ರಿ ಮುಂದಾಗಿದ್ದಾರೆ.

ಕಾವೇರಿ ಜಲಾನಯನ ಪ್ರದೇಶದ ಜನರು ನೀರಿಗಾಗಿ ಗುಳೆ ಹೋಗುವ ಸ್ಥಿತಿ ಬರಲಿದ್ದು, ತಮಿಳುನಾಡಿಗೆ ನೀರು ಹರಿಸುವುದನ್ನು ತಕ್ಷಣ ನಿಲ್ಲಿಸಬೇಕು ಎಂದು ಒತ್ತಾಯಿಸಿದರು. ಸಂಸದ ಪಿ.ಸಿ.ಮೋಹನ್ ಮಾತನಾಡಿ, ಕರ್ನಾಟಕ ಮತ್ತು ಕನ್ನಡಿಗರ ಹಿತ ಕಾಪಾಡುವಲ್ಲಿ ಕಾಂಗ್ರೆಸ್ ಸರಕಾರ ಸಂಪೂರ್ಣ ವಿಫಲವಾಗಿದೆ ಎಂದರು.

'ಬೆಂಗಳೂರು ಬಂದ್'

ಬಿಜೆಪಿ ಬೆಂಬಲ: ವಿವಿಧ ಸಂಘಟನೆಗಳು ಕರೆದಿರುವ ಬೆಂಗಳೂರು ಬಂದ್‌ಗೆ ರಾಜ್ಯ ಬಿಜೆಪಿ ಬೆಂಬಲ ವ್ಯಕ್ತಪಡಿಸಿದೆ. ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರೈತ ಸಂಘಟನೆಗಳು ಹಾಗೂ ವಿವಿಧ ಕನ್ನಡಪರ ಸಂಘಟನೆಗಳು ಕರೆ ಕೊಟ್ಟಿರುವ ಬೆಂಗಳೂರು ಬಂದ್‌ಗೆ ರಾಜ್ಯ ಬಿಜೆಪಿಯು ಸಂಪೂರ್ಣ ಬೆಂಬಲ ವ್ಯಕ್ತಪಡಿಸುತ್ತದೆ. ಕಾವೇರಿಯ ಪ್ರತಿಯೊಂದು ಪ್ರತಿಭಟನೆಗಳಲ್ಲಿಯೂ ವಿವಿಧ ಸಂಘಟನೆಗಳ ಜೊತೆಗೆ ರಾಜ್ಯದ ಬಿಜೆಪಿ ನಾಯಕರೂ ಪಾಲ್ಗೊಳ್ಳಲಿದ್ದಾರೆ ಎಂದು ಅವರು ಹೇಳಿದರು.

ಮೈಸೂರಲ್ಲಿ ಕಾವೇರಿ ಹೋರಾಟಕ್ಕೆ ಸಾಥ್ ನೀಡಿದ ವಕೀಲರು



ಮೈಸೂರು, ಸೆ.23(ಜಿಎ)–ಮೈಸೂರಿನಲ್ಲಿ ವಕೀಲರು ಇಂದು ಕೋರ್ಟ್ ಕಲಾಪದಿಂದ ಹೊರಗುಳಿದು ಕಾವೇರಿ ಹೋರಾಟಕ್ಕೆ ಸಾಥ್ ನೀಡಿದರು.

ನಗರದ ನ್ಯಾಯಾಲಯದ ಮುಂಭಾಗವಿರುವ ಗಾಂಧಿ ಪುತ್ಥಳಿ ಬಳಿ ನೂರಾರು ವಕೀಲರು ಮಾನವ ಸರಪಳಿ ನಿರ್ಮಾಣ ಮಾಡಿ, ಸರ್ಕಾರದ ವಿರುದ್ಧ ವಿವಿಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ನ್ಯಾಯಾಲಯದ ಆಸುಪಾಸಿನ ಎಲ್ಲಾ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ಪೊಲೀಸರು ನಿರ್ಬಂಧ ಹೇರಿದರು. ಈ ವೇಳೆ ಮೈಸೂರು ವಕೀಲರ ಸಂಘದ ಅಧ್ಯಕ್ಷ ಮಹದೇವ ಸ್ವಾಮಿ ಮಾತನಾಡಿ, ನಮಗೆ ಕುಡಿಯಲು ನೀರಿಲ್ಲ. ಈ ನಡುವೆ ತಮಿಳುನಾಡಿಗೆ ನೀರು ಬಿಡುವುದು ಎಷ್ಟು ಸರಿ. ಮೊದಲು ಸಂಕಷ್ಟ ಸೂತ್ರ ಅಳವಡಿಸಬೇಕು. ಹಾಗೇ ಮೇಕೆದಾಟು ಯೋಜನೆ ಜಾರಿ ಮಾಡಿದ್ದರೆ ನಮ್ಮ ನೀರು ನಮ್ಮಲ್ಲಿ ಉಳಿಯುತ್ತಿತ್ತು ಎಂದರು. ಕಾರ್ಯದರ್ಶಿ ಉಮೇಶ್ ಮಾತನಾಡಿ, ಕರ್ನಾಟಕದಲ್ಲಿ ಜಲಾಶಯಗಳಲ್ಲಿ ಇರುವ ನೀರಿನ ಮಟ್ಟದ ಅಂಕಿ ಅಂಶದ ವಿವರಣೆ ನೀಡುವಲ್ಲಿ ನಮ್ಮ ವಕೀಲರು ವಿಫಲರಾಗಿದ್ದಾರೆ. ಕಾವೇರಿ ನೀರಿನ ಪ್ರಯೋಜನ ಎಲ್ಲರೂ ಪಡೆಯುತ್ತಿದ್ದಾರೆ. ಪ್ರತಿಭಟನೆ ಕೇವಲ ಸರ್ಕಾರವನ್ನು ಎಚ್ಚರಿಸಲು ಅಷ್ಟೇ. ರಾಜ್ಯದ ಪರವಾದ ಮಂಡನೆ ಮಾಡುತ್ತಿರುವ ವಕೀಲರು ರಾಜ್ಯದ ಪರಿಸ್ಥಿತಿ ಬಗ್ಗೆ ತಿಳಿಸಿ, ಸುಪ್ರೀಂ ಕೋರ್ಟ್‌ನಲ್ಲಿ ಮರು ಪರಿಶೀಲನೆಗೆ ಮನವಿ ಸಲ್ಲಿಸಬೇಕು ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ಪುಟ್ಟಸಿದ್ದೇಗೌಡ ಸೇರಿದಂತೆ ನೂರಾರು ವಕೀಲರು ಪಾಲ್ಗೊಂಡಿದರು.

ಇಡೀ ರಾಜ್ಯ ಬರ ಪೀಡಿತವೆಂದು ಘೋಷಿಸಿ ಪರಿಹಾರ ಕಲ್ಪಿಸಲು ಆಗ್ರಹಿಸಿ ಸಿಪಿಐ(ಎಂ) ಪ್ರತಿಭಟನೆ



ಮೈಸೂರು, ಸೆ.23(ಜಿಎ)–ರಾಜ್ಯವನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಿ, ಅಗತ್ಯ ಪರಿಹಾರ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಸದಸ್ಯರು ಮೈಸೂರಿನ ಗಾಂಧಿಚೌಕದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

ರಾಜ್ಯಕ್ಕೆ ಮುಂಗಾರು ತಡವಾಗಿ ಪ್ರವೇಶಿಸಿದ್ದರಿಂದ ರಾಜ್ಯದ ಹಲವೆಡೆ ಬಿತ್ತನೆ ನಡೆಯಲಿಲ್ಲವೆಂದು ಸರ್ಕಾರದ ಅಂಕಿ ಅಂಶಗಳು ಹೇಳುತ್ತಿವೆ. ಇದೀಗ ಬಿತ್ತನೆಯಾದ ಪ್ರದೇಶದ ಬೆಳೆಯು ಮಳೆ ಅಭಾವದಿಂದ ರೈತರ ಕೈ ಸೇರುತ್ತಿಲ್ಲ. ಹಲವೆಡೆ ರೈತರು ಮೊದಲು ಬಿತ್ತಿದ ಬೆಳೆಗೆ ಸಕಾಲಿಕ ಮಳೆ ಬರದೇ ನಂತರ ಮಳೆಗೆ ಮರು ಬಿತ್ತನೆ ಮಾಡಿದ ಬೆಳೆಯು ಇದೀಗ ಕೈ ಸೇರುವ ಗ್ಯಾರಂಟಿ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಈ ಬರವು ಮುಂದೆ ವ್ಯಾಪಕವಾಗಿ, ಸಾಲಬಾಧಿತ ರೈತರ ಆತ್ಮಹತ್ಯೆಗೂ ಕಾರಣವಾಗಬಹುದು. ಕೃಷಿರಂಗ ಬರಕ್ಕೆ ತುತ್ತಾದಲ್ಲಿ ಮುಂದೆ ಆಹಾರಧಾನ್ಯದ ಬೆಲೆಗಳು ಮತ್ತಷ್ಟು ಗಗನಮುಖಿಯಾಗುವ ಎಲ್ಲಾ ಸಂಭವಗಳಿವೆ. ಇವು ಪಟ್ಟಣ ಹಾಗೂ ನಗರದ ಜನತೆಯನ್ನು ಬಾಧೆಗೀಡು ಮಾಡಲಿವೆ. ಹೀಗಾಗಿ, ಇಡೀ ರಾಜ್ಯವೇ ಬರ ಪೀಡಿತವಾಗಿ ಬದಲಾಗುತ್ತಿರುವುದರಿಂದ ರಾಜ್ಯವನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು. ಕೇಂದ್ರ ಸರ್ಕಾರದ ಮೇಲೆ ಹೆಚ್ಚಿನ ಒತ್ತಡ ಹೇರಿ ನೆರವು ಪಡೆಯಲು ರಾಜ್ಯ ಸರ್ಕಾರವು ಬರ ಪರಿಹಾರಕ್ಕೆ ಕ್ರಮ ವಹಿಸಬೇಕಾಗಿದೆ ಎಂದು ಒತ್ತಾಯಿಸಿದರು.

ಬರ ಪೀಡಿತ ಕೂಲಿಕಾರರು, ಬಡ ರೈತರು ಗುಳೆ ಹೋಗದಂತೆ ತಡೆಯಲು ಉದ್ಯೋಗ ಖಾತ್ರಿ ಕೆಲಸವನ್ನು ಪ್ರತಿ ಕುಟುಂಬಕ್ಕೆ 150 ದಿನಗಳ ಕಾಲ ಕಡ್ಡಾಯವಾಗಿ ದೊರೆಯುವಂತೆ ಅಗತ್ಯ ಕ್ರಮ ವಹಿಸಬೇಕು. ಬೆಳೆ ನಷ್ಟಕ್ಕೆ ಬೆಳೆ ವಿಮೆ ದೊರಕುವಂತೆ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದರು. ಬಡ ರೈತರು, ಕೂಲಿಕಾರರು ಮತ್ತು ಸ್ತ್ರೀಶಕ್ತಿ ಸಂಘಗಳ ಮಹಿಳೆಯರ ಎಲ್ಲಾ ಸಾಲ ಮನ್ನಾ ಮಾಡಬೇಕು. ಬೆಳೆ ನಷ್ಟ ಪರಿಹಾರವನ್ನು ಒದಗಿಸಬೇಕು. ಮುಂದಿನ ಸಾಲಿಗೆ ಉಚಿತ ಬೀಜ, ಗೊಬ್ಬರ, ಕೀಟ ನಾಶಕಗಳನ್ನು ಒದಗಿಸಬೇಕು. ಬಿತ್ತನೆಯ ಹಾಗೂ ಕೊಯ್ಲು ಕೆಲಸಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿ ತರಬೇಕು ಎಂದು ಒತ್ತಾಯಿಸಿದರು.

ಬರಗಾಲದ ಕಾರಣದಿಂದ ಬರ ಬಾಧಿತರ ಶೈಕ್ಷಣಿಕ ಶುಲ್ಕಗಳನ್ನು ಮನ್ನಾ ಮಾಡಬೇಕು. ಆಹಾರ ಧಾನ್ಯಗಳ ಕೃತಕ ಅಭಾವ ಸೃಷ್ಟಿಸಿ, ಕಾಳಸಂತೆಯಲ್ಲಿ ಗ್ರಾಹಕರನ್ನು ಸುಲಿಗೆಗೊಳಪಡಿಸುವ ಕಾಳಸಂತೆಕೋರರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ)ನ ಕಾರ್ಯದರ್ಶಿ ಜಗದೀಶ್ ಸೂರ್ಯ, ಬಸವಯ್ಯ, ಕೆ.ಬಸವರಾಜು, ವಿಜಯ್ ಕುಮಾರ್, ಜಗನಾಥ್, ಬಲರಾಮ್, ಪುಟ್ಟಮಲ್ಲಯ್ಯ, ನಾಗರಾಜು ಮತ್ತು ಮಹದೇವ್ ಭಾಗಿಯಾಗಿದ್ದರು.

ವಾಮಮಾರ್ಗದಲ್ಲಿ ಟಿಕೆಟ್ ಗಿಟ್ಟಿಸಿದ ನಿಮಗೆ ಸಿದ್ದರಾಮಯ್ಯ ಟೀಕಿಸುವ ನೈತಿಕತೆ ಇಲ್ಲ

ಶಾಸಕ ಶ್ರೀವತ್ಸಗೆ ಸುಬ್ರಹ್ಮಣ್ಯ ತಿರುಗೇಟು



ಮೈಸೂರು, ಸೆ.23(ಬಿಎಲ್‌ಯು)–ಮತದಾರರಿಗೆ ಆಮಿಷವೊಡ್ಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿಧಾನ ಸಭಾ ಸದಸ್ಯತ್ವ ಅಸಿಂಧುಗೊಳಿಸುವಂತೆ ಆಗ್ರಹಿಸಿರುವ ಶಾಸಕ ಟಿ.ಎಸ್.ಶ್ರೀವತ್ಸ ಹೇಳಿಕೆಗೆ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಖಂಡಿಸಿದ್ದಾರೆ. ಮತದಾರರಿಗೆ ಯಾವುದೇ ಆಮಿಷವೊಡ್ಡಿಲ್ಲ ಎಂದು ಯತೀಂದ್ರ ಈಗಾಗಲೇ ತಿಳಿಸಿದ್ದಾರೆ. ಜೊತೆಗೆ ಸಿದ್ದರಾಮಯ್ಯ ಕೂಡ ಸ್ಪಷ್ಟನೆ ನೀಡಿದ್ದಾರೆ. ಆದರೂ ಸಿದ್ದರಾಮಯ್ಯ ಅವರ ವಿಧಾನಸಭಾ ಸದಸ್ಯತ್ವ ಅಸಿಂಧುಗೊಳಿಸಬೇಕು ಎಂದು ಆಗ್ರಹಿಸುತ್ತಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮತಕ್ಕಾಗಿ ಕುಕ್ಕರ್, ಸೀರೆ ಹಂಚುವ ಕೆಲಸ ಸಿದ್ದರಾಮಯ್ಯ ಮಾಡಿಲ್ಲ. ಅದರ ಅಗತ್ಯವೂ ಸಿದ್ದರಾಮಯ್ಯ ಅವರಿಗಿಲ್ಲ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ಮೊದಲ ಬಾರಿಗೆ ಮುಖ್ಯಮಂತ್ರಿ ಆಗಿದ್ದಾಗ ಮಾಡಿದ ಜನಪರ ಕಾರ್ಯಗಳಿಂದ 2ನೇ ಬಾರಿ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಗಿದೆ ಎಂದು ಸುಬ್ರಹ್ಮಣ್ಯ ತಿಳಿಸಿದ್ದಾರೆ. ಜನಪರ ಕೆಲಸ ಮಾಡಿದ ಕೃಷ್ಣರಾಜ ಕ್ಷೇತ್ರದ ಮಾಜಿ ಸಚಿವರಿಗೆ ಟಿಕೆಟ್ ತಪ್ಪಿಸಿ ಯಾವ ರೀತಿ ವಾಮ ಮಾರ್ಗದಲ್ಲಿ ಗೆಲುವು ಸಾಧಿಸಿದ್ದೀರಾ ಎಂಬುದು ನಮಗೆ ಗೊತ್ತಿದೆ. ಹೀಗಿರುವಾಗ ಸಿದ್ದರಾಮಯ್ಯ ಬಗ್ಗೆ ಮಾತನಾಡುವ ನೈತಿಕತೆ ನಿಮಗೆ ಇಲ್ಲ ಎಂದು ಸುಬ್ರಹ್ಮಣ್ಯ ಅವರು ಶಾಸಕ ಶ್ರೀವತ್ಸ ಅವರಿಗೆ ತಿರುಗೇಟು ನೀಡಿದ್ದಾರೆ.

ಸಹಸ್ರ ಚಂಡಿ ಮಹಾಯಾಗ

ಮೈಸೂರು, ಸೆ23– ಮೈಸೂರಿನ ಅಮೃತೇಶ್ವರ ದೇವಾಲಯದ ಶ್ರೀ ಸಾಮ್ರಾಜ್ಯ ಮಹಾಲಕ್ಷ್ಮೀ ದಿವ್ಯ ಸಾನ್ನಿಧ್ಯದಲ್ಲಿ 73ನೇ ವರ್ಷದ ಶರನ್ನವ ರಾತ್ರಿ ಪ್ರಯುಕ್ತ ಅ.15ರಿಂದ 23ರವರೆಗೆ ಹಾಗೂ ಅ.27ರಂದು ವಿಸ್ತಾರ ಸಹಸ್ರ ಚಂಡಿ ಮಹಾಯಾಗ ನೆರವೇರಲಿದೆ.

ಡಾ.ಭಾನುಪ್ರಕಾಶ ಶರ್ಮರವರ ಮಾರ್ಗದರ್ಶನ ಹಾಗೂ ಮೈಕುಮಾರ್ ನೇತೃತ್ವದಲ್ಲಿ ಯಜ್ಞೇಶ್ವರ ಐತಾಳ ಅವರಿಂದ 10 ದಿನ ಶ್ರೀ ಚಕ್ರನವಾವರಣ ಪೂಜೆ, ಮೈಸೂರು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ರವರ ಸಹಕಾರದಲ್ಲಿ 73ನೇ ವಿಸ್ತಾರ ಸಹಸ್ರ ಚಂಡೀ ಮಹಾಯಾಗ ನೆರವೇರಿಸಲಾಗುವುದು. ಪ್ರತಿದಿನ ಶತಚಂಡಿ ಹೋಮ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ.ಸಂ.9845183392, 9845183399 ಅನ್ನು ಸಂಪರ್ಕಿಸಬಹುದು.

'ಸ್ವಾಮಿ ಮತ್ತು ಸ್ನೇಹಿತರು' ಪ್ರತಿಮೆಗಳ ತುಳಿದು ಅನಾಗರಿಕ ವರ್ತನೆಗೆ ನಿವಾಸಿಗಳ ಬೇಸರ

ಮೈಸೂರು,ಸೆ.23–ಮೈಸೂರಿನ ಯಾದವಗಿರಿ ಜಾಯ್ ಐಸ್‌ಕ್ರೀಂ ಫ್ಯಾಕ್ಟರಿ ವೃತ್ತಕ್ಕೆ ದೀಪಾಲಂಕಾರ ಮಾಡುವ ವೇಳೆ ಕೆಲವರು ಅಲ್ಲಿನ ಪ್ರತಿಮೆಗಳ ಮೇಲೆ ಕಾಲಿಟ್ಟು, ತುಳಿದ ಬಗ್ಗೆ ಸ್ಥಳೀಯರು ಅತೀವ ಬೇಸರ ವ್ಯಕ್ತಪಡಿಸಿದ್ದಾರೆ.



ಮೈಸೂರು ಖ್ಯಾತ ಉದ್ಯಮಿ ಸಿದ್ಧಾರ್ಥ್ ಗ್ರೂಪ್‌ನ ಗಿರಿ ಮತ್ತು ಕುಟುಂಬದವರು ಈ ವೃತ್ತದಲ್ಲಿ ಸ್ಥಾಪಿಸಿರುವ ಆರ್.ಕೆ.ನಾರಾಯಣ್ ಅವರ ಪ್ರಸಿದ್ಧ ಕಾದಂಬರಿ 'ಮಾಲ್ಗುಡಿ ಡೇಸ್'ನ ಪಾತ್ರಗಳಾದ 'ಸ್ವಾಮಿ ಮತ್ತು ಸ್ನೇಹಿತರು' ಪ್ರತಿಮೆಗಳನ್ನು ಅನಾವರಣಗೊಳಿಸಿ ಇನ್ನೂ ಏಳು ತಿಂಗಳು ಕಳೆದಿಲ್ಲ. ಅಷ್ಟರಲ್ಲೇ ಈ ಪ್ರತಿಮೆಗಳನ್ನು ಹೀಗೆ ಹಾಳುಮಾಡುವ ಪ್ರಯತ್ನ ನಡೆದಿದೆ. ಈ ವೃತ್ತದಲ್ಲೇ ಎಂದಿನಂತೆ ಗಣೇಶನ ಮೂರ್ತಿ ಪ್ರತಿಷ್ಠಾಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ವೃತ್ತಕ್ಕೆ ವಿದ್ಯುತ್ ದೀಪಾಲಂಕಾರ ಮಾಡುವಾಗ ಕೆಲವರು ಸುಂದರ ಪ್ರತಿಮೆಗಳ ಮೇಲೆ ಕಾಲಿಟ್ಟು ಅನಾಗರಿಕರಂತೆ ವರ್ತಿಸಿದ್ದಾರೆ. ಇದರಿಂದ ಪ್ರತಿಮೆಗಳಿಗೆ ಹಾನಿಯಾಗಬಹುದು ಇಲ್ಲವೇ ಮುರಿದು ಬೀಳಬಹುದು. ಜೊತೆಗೆ ಪ್ರತಿಮೆ ಸ್ಥಾಪಿಸಿದವರು ಹಾಗೂ ಅದಕ್ಕೆ ಸಹಕರಿಸಿದವರ ಮನಸ್ಸಿಗೆ ಘಾಸಿಯಾಗುತ್ತದೆ ಎಂಬ ಕನಿಷ್ಟ ಅರಿವಿಲ್ಲದೆ ನಡೆದುಕೊಂಡಿದ್ದಾರೆ. ಇದನ್ನು ಭಕ್ತಿ ಎನ್ನಲು ಸಾಧ್ಯವೇ ಇಲ್ಲ. ಗಣೇಶನೇ ಇಂತಹವರಿಗೆ ಸದ್ಬುದ್ಧಿ ನೀಡಬೇಕಷ್ಟೇ! ಇಲ್ಲವಾದರೆ ಮುಂದೊಂದು ದಿನ ಪ್ರತಿಮೆಗಳನ್ನು ನೆಲಕ್ಕುರುಳಿಸಬಹುದು ಎಂದು ಸ್ಥಳೀಯರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ



ಮೈಸೂರು, ಸೆ.23(ಬಿಎಲ್‌ಯು)–ಮೈಸೂರಿನ ನರಸಿಂಹರಾಜ ಸಹಕಾರ ಭವನದಲ್ಲಿ ಜಿಲ್ಲಾ ಸಹಕಾರ ಒಕ್ಕೂಟದ ಪ್ರಸಕ್ತ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು. ಸರ್ವ ಸದಸ್ಯರ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಶಾಸಕ ಜಿ.ಟಿ.ದೇವೇಗೌಡರು, ಮೈಸೂರು ಜಿಲ್ಲೆಯ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಎಲ್ಲಾ ಸಹಕಾರ ಸಂಘಗಳು ಸೇವಾ ಮನೋಭಾವದಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಸಹಕಾರ ಒಕ್ಕೂಟದಿಂದ ಸದಸ್ಯರಿಗೆ ಹಲವು ರೀತಿಯ ತರಬೇತಿ ನೀಡಲಾಗುತ್ತಿದ್ದು, ಅದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಒಕ್ಕೂಟದ ಅಧ್ಯಕ್ಷ ಹೆಚ್.ವಿ.ರಾಜೀವ್ ತಿಳಿಸಿದರು. ಒಕ್ಕೂಟದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಎಂ.ವಿಶ್ವೇಶ್ವರಯ್ಯ, ವ್ಯವಸ್ಥಾಪಕ ಪಿ.ಎಸ್.ಹರೀಶ್ ಇದ್ದರು.

ಮೈಸೂರಿಗೆ ಸ್ವಚ್ಛ ನಗರಿ ಪ್ರಶಸ್ತಿ ಬರಲು ಪೌರಕಾರ್ಮಿಕರ ಪಾತ್ರ ದೊಡ್ಡದು



ಪೌರ ಕಾರ್ಮಿಕರ ದಿನಾಚರಣೆಯಲ್ಲಿ ಶಾಸಕ ಶ್ರೀವತ್ಸ ಪ್ರಶಂಸೆ

ಮೈಸೂರು, ಸೆ.23(ಬಿಎಲ್‌ಯು)–ಮೈಸೂರು ಸ್ವಚ್ಛ ನಗರಿ ಪ್ರಶಸ್ತಿ ಪಡೆಯಲು ಪೌರಕಾರ್ಮಿಕರ ಪಾತ್ರ ಬಹಳ ದೊಡ್ಡದು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟರು. ಮೈಸೂರಿನ ಕಲಾಮಂದಿರದಲ್ಲಿ ಇಂದು ನಡೆದ ಪೌರಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ವಚ್ಛತೆ ಇರುವ ಕಾರಣ ದೇಶ–ವಿದೇಶದ ಪ್ರವಾಸಿಗರಿಂದ ಮೈಸೂರು ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.

ಮೈಸೂರು ಅಷ್ಟೇ ಅಲ್ಲದೆ ಯಾವುದೇ ನಗರ ಸ್ವಚ್ಛವಾಗಿರಲು ಪೌರಕಾರ್ಮಿಕರು ಕಾರಣಕರ್ತರಾಗಿರುತ್ತಾರೆ. ಈ ಕಾರಣದಿಂದಲೇ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪೌರಕಾರ್ಮಿಕರ ಪಾದಪೂಜೆ ಮಾಡುವ ದೊಡ್ಡ ಸಂದೇಶ ನೀಡಿದ್ದಾರೆ ಎಂದರು.

ಮಳೆ, ಚಳಿ ಎನ್ನದೆ ಪ್ರತಿ ದಿನ ಮುಂಜಾನೆ ಪೌರಕಾರ್ಮಿಕರು ಕೆಲಸ ಮಾಡುವುದರಿಂದ ನಗರ ಇಷ್ಟೊಂದು ಸುಂದರವಾಗಿ ಕಾಣಲು ಸಾಧ್ಯವಾಗಿದೆ. ಆದರೆ ಪೌರ ಕಾರ್ಮಿಕರ ಜೀವನ ಬಹಳ ಕಷ್ಟಮಯವಾಗಿದೆ ಹೀಗಾಗಿ ಸರ್ಕಾರ ಪೌರಕಾರ್ಮಿಕರ ಕಲ್ಯಾಣಕ್ಕೆ ಹೆಚ್ಚಿನ ಹಣ ಮೀಸಲಿಟ್ಟಿದೆ ಎಂದು ಶ್ರೀವತ್ಸ ಹೇಳಿದರು.

ಪೌರಕಾರ್ಮಿಕರು ಒಂದು ದಿನ ಕೆಲಸ ಮಾಡದಿದ್ದರೆ ನಗರದ ಸ್ವಚ್ಛತೆ ಕಾಪಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆ ನಗರದ ಸ್ವಚ್ಛತೆಗೆ ಪೌರ ಕಾರ್ಮಿಕರ ಪಾತ್ರ ಬಹಳ ಮುಖ್ಯವಾಗಿದೆ. ಸ್ವಚ್ಛತಾ ಕಾರ್ಯ ಮಾಡುವ ಕಾರಣ ಪೌರಕಾರ್ಮಿಕರು ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ಆದ್ಯತೆ ನೀಡಬೇಕು. ಜೊತೆಗೆ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ನಗರಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಸಲಹೆ ನೀಡಿದರು.

ಒಟ್ಟಾರೆ ಪೌರಕಾರ್ಮಿಕರ ಹಿತ ಕಾಪಾಡಲು ನಗರ ಪಾಲಿಕೆ ಯಾವಾಗಲೂ ಜೊತೆಗಿದೆ ಎಂದು ಆಯುಕ್ತರು ಭರವಸೆ ನೀಡಿದರು. ಕೊರೊನಾ ಸಂದರ್ಭದಲ್ಲಿ ಕೂಡ ಪೌರಕಾರ್ಮಿಕರು ಶ್ರಮ ವಹಿಸಿ ಕೆಲಸ ಮಾಡಿದ್ದಾರೆ. ಈ ಮೂಲಕ ಜನರ ಆರೋಗ್ಯ ಕಾಪಾಡುವಲ್ಲಿ ಪೌರ ಕಾರ್ಮಿಕರು ನೀಡಿರುವ ಕೊಡುಗೆಯನ್ನು ಸ್ಮರಿಸಬೇಕು ಎಂದು ಉಪ ಮೇಯರ್ ಡಾ.ರೂಪ ಹೇಳಿದರು. ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ನಗರ ಪಾಲಿಕೆ ಸದಸ್ಯರಾದ ಸವಿತಾ, ಭಾಗ್ಯ, ವೇದಾವತಿ, ಪ್ರಮೀಳಾ ಭರತ್, ಶಾಂತಮ್ಮ ಜಿ.ರೂಪ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಕ್ಕರೆ ನಾಡಲ್ಲಿ ಕಾವೇರಿದ ಕಾವೇರಿ ಹೋರಾಟ

ಜಿಲ್ಲಾದ್ಯಂತ ರೈತರು, ವಿವಿಧ ಸಂಘಟನೆಗಳಿಂದ ಪ್ರತಿಭಟನೆ

● ಮಂಡ್ಯದಲ್ಲಿ ಬೃಹತ್ ಪ್ರತಿಭಟನೆ ● ಮಳವಳ್ಳಿಯಲ್ಲಿ ಹೆದ್ದಾರಿ ತಡೆ ● ಕೆ.ಆರ್.ಪೇಟೆಯಲ್ಲಿ ಮಾನವ ಸರಪಳಿ, ರಸ್ತೆ ತಡೆ ● ನಾಗಮಂಗಲದಲ್ಲಿ ವಕೀಲರ ಪ್ರತಿಭಟನೆ



ಮಂಡ್ಯ, ಸೆ.23– ತಮಿಳುನಾಡಿಗೆ ಕಾವೇರಿ ನೀರು ಬಿಡುಗಡೆ ಮಾಡಬೇಕೆಂದು ಸುಪ್ರೀಂಕೋರ್ಟ್ ಆದೇಶ ಹಿನ್ನೆಲೆಯಲ್ಲಿ ಸಕ್ಕರೆ ನಾಡು ಮಂಡ್ಯದಲ್ಲಿ ಕಾವೇರಿ ಹೋರಾಟ ಕಾವೇರಿದ್ದು, ಜಿಲ್ಲಾದ್ಯಂತ ರೈತರು, ವಿವಿಧ ಸಂಘಟನೆಗಳ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ಮಂಡ್ಯ: ರೈತ ಹಿತರಕ್ಷಣಾ ಸಮಿತಿ ಮುಖಂಡರು ನಗರದ ಸರ್‌ಎಂವಿ ಪುತ್ಥಳಿ ಎದುರು ಹಾಗೂ ವಿವಿಧ ರೈತಪರ ಹಾಗೂ ಕನ್ನಡಪರ ಸಂಘಟನೆಗಳು ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿ, ಬೈಕ್ ರ‍್ಯಾಲಿ ನಡೆಸಿದರು.

ಕಾವೇರಿ ಹೋರಾಟ ಬೆಂಬಲಿಸಿ ರೈತರು, ವಿದ್ಯಾರ್ಥಿಗಳು, ವಕೀಲರು, ರಾಜಕೀಯ ಪಕ್ಷಗಳ ಕಾರ್ಯಕರ್ತರು, ರೈತ ಸಂಘಟನೆಗಳು, ಕನ್ನಡಪರ, ಪ್ರಗತಿಪರ ದಲಿತ ಸಂಘಟನೆಗಳು ಸೇರಿ ಹಲವು ಸಂಘಟನೆಗಳು ಪ್ರತಿಭಟನೆ ನಡೆಸಿದವು. ಬಂದ್ ಆರಂಭಗೊಂಡ ಬೆನ್ನಲ್ಲೇ ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಮುಖಂಡರು ನೀರು ಬಿಡಲು ಆದೇಶಿಸಿರುವ ಪ್ರತಿ ಸುಟ್ಟು ಟೀ ಕಾಯಿಸುವ ಮೂಲಕ ಪ್ರತಿಭಟಿಸಿದರು.

ಕನ್ನಡಪರ ಸಂಘಟನೆಗಳ ಕಾರ್ಯಕರ್ತರು, ರೈತರು, ವಿದ್ಯಾರ್ಥಿಗಳು ಮಾನವ ಸರಪಳಿ ರಚಿಸಿ ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ, ಕಬ್ಬಿನ ಜೊಲ್ಲೆಗಳನ್ನು ಹಿಡಿದು ಆಕ್ರೋಶ ವ್ಯಕ್ತಪಡಿಸಿದರೆ, ಜಿಲ್ಲಾ ವಕೀಲರ ಸಂಘದ ಆಶ್ರಯದಲ್ಲಿ ವಕೀಲರು ನ್ಯಾಯಾಲಯದ ಕಲಾಪದಿಂದ ಹೊರಗುಳಿದು ಕಾವೇರಿ ಹೋರಾಟ ಬೆಂಬಲಿಸಿ, ವಕೀಲರ ಸಂಘದ ಆವರಣದಿಂದ ಮೆರವಣಿಗೆ ಹೊರಟು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಧರಣಿಯಲ್ಲಿ ಭಾಗಿಯಾದರು.

ರೈತ ಸಂಘದ ಕಾರ್ಯಕರ್ತರು ಎಮ್ಮೆ ಹಿಡಿದು ಪ್ರತಿಭಟಿಸಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಮಂಡ್ಯದ ಅಶೋಕ ನಗರದ ಸೋನಾಕ್ಷಿ ಎಂಬುವರ ಸಾಕು ನಾಯಿ ಭಿತ್ತಿಪತ್ರ ಹಿಡಿದು ಕಾವೇರಿ ಚಳವಳಿಯಲ್ಲಿ ಭಾಗಿಯಾದ್ದು ಗಮನ ಸೆಳೆಯಿತು.

ಮಂಡ್ಯ ಬಂದ್ ಬೆಂಬಲಿಸಿ ಕ್ಯಾತುಂಗೆರೆ ಗ್ರಾಮಸ್ಥರು ಮಕ್ಕಳೊಂದಿಗೆ ಖಾಲಿ ಕೊಡ ಪ್ರದರ್ಶಿಸಿ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಎಂ.ಎಸ್.ಆತ್ಮಾನಂದ, ಕೆ.ಟಿ.ಶ್ರೀಕಂಠೇಗೌಡ, ಜಿ.ಬಿ.ಶಿವಕುಮಾರ್, ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಬೋರಯ್ಯ, ಕನ್ನಡಸೇನೆ ಮಂಜು, ಸಿ.ಟಿ.ಮಂಜುನಾಥ್, ಇಂಡುವಾಳು ಚಂದ್ರಶೇಖರ್, ಕರವೇ ಶಂಕರೇಗೌಡ ಸೇರಿದಂತೆ ಸಾವಿರಾರು ಮಂದಿ ಭಾಗವಹಿಸಿದ್ದರು.

ಮಳವಳ್ಳಿ: ತಮಿಳುನಾಡಿಗೆ ಕಾವೇರಿ ನೀರು ಬಿಡಬೇಕೆಂಬ ಸುಪ್ರೀಂಕೋರ್ಟ್ ಆದೇಶ ವಿರೋಧಿಸಿ ರೈತರು ಹಾಗೂ ರೈತ ಸಂಘದ(ಮೂಲ ಸಂಘಟನೆ) ಕಾರ್ಯಕರ್ತರು ತಾಲೂಕಿನ ಟಿ.ಕಾಗೇಪುರದಲ್ಲಿ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ತಮಿಳುನಾಡು ಸರ್ಕಾರ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ ಕಾರ್ಯಕರ್ತರು ಬರಗಾಲದ ಪ್ರಸ್ತುತ ಸಂದರ್ಭದಲ್ಲಿ ತಮಿಳುನಾಡಿಗೆ ನೀರನ್ನು ಹರಿಸಬಾರದೆಂದು ಆಗ್ರಹಿಸಿದರು.

ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ರಾಮಲಿಂಗೇಗೌಡ ಮಾತನಾಡಿ, ಸುಪ್ರೀಂಕೋರ್ಟ್ ಆದೇಶದಂತೆ ತಮಿಳುನಾಡಿಗೆ ಪ್ರತಿದಿನ 5 ಸಾವಿರ ಕ್ಯುಸೆಕ್ ನೀರು ಬಿಟ್ಟರೇ ಜನ ಜಾನುವಾರುಗಳು ಕುಡಿಯುವ ನೀರಿಗೂ ಪರಿತಪಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗುವುದರಿಂದ ರಾಜ್ಯ ಸರ್ಕಾರ ಸುಪ್ರೀಂ ಆದೇಶ ಪಾಲಿಸಬಾರದೆಂದು ಒತ್ತಾಯಿಸಿದರು. ಈ ವೇಳೆ ತಾಲೂಕು ಅಧ್ಯಕ್ಷ ಬಸವರಾಜು, ರೈತ ಸಂಘದ ಮುಖಂಡರಾದ ಮಹೇಶ್, ಗಿರೀಶ್, ಪುಟ್ಟಸ್ವಾಮಿ, ಕೆಂಪೇಗೌಡ, ಚೌಡಯ್ಯ, ಕೃಷ್ಣ, ಪುನೀತ್, ಚೌಡೇಗೌಡ, ಭೂಮಿಗೌಡ, ಚಿಕ್ಕವೀರಪ್ಪ, ಶ್ರೀನಿಗೌಡ, ಮಾಯಿಗಯ್ಯ, ಗಾಡಿ ಹೊನ್ನಯ್ಯನ ಚೌಡಯ್ಯ ಸೇರಿದಂತೆ ಇತರರಿದ್ದರು.

ಕೆ.ಆರ್.ಪೇಟೆ: ತಮಿಳುನಾಡಿಗೆ ನೀರು ಹರಿಸುವಂತೆ ಸುಪ್ರೀಂಕೋರ್ಟ್ ಆದೇಶ ವಿರೋಧಿಸಿ ತಾಲೂಕು ಜಯ ಕರ್ನಾಟಕ ಸಂಘಟನೆ ಕಾರ್ಯಕರ್ತರು ಪಟ್ಟಣದ ಪ್ರವಾಸಿ ಮಂದಿರ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ರಸ್ತೆತಡೆ ನಡೆಸಿದರು.

ಪಟ್ಟಣದ ಪ್ರವಾಸಿ ಮಂದಿರದ ಬಳಿ ಪ್ರತಿಭಟನಾ ಮೆರವಣಿಗೆ ನಡೆಸಿ ಕೇಂದ್ರ ಸರ್ಕಾರ, ಕಾವೇರಿ ನೀರಾವರಿ ಪ್ರಾಧಿಕಾರ ಹಾಗೂ ಸುಪ್ರೀಂಕೋರ್ಟ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಜಯ ಕರ್ನಾಟಕ ಸಂಘಟನೆ ಅಧ್ಯಕ್ಷ ಎಚ್.ಆರ್.ಸೋಮಶೇಖರ್ ಮಾತನಾಡಿ, ರಾಜ್ಯದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ ಆದರೆ ತಮಿಳುನಾಡು 3ನೇ ಬೆಳೆಗೆ ನೀರು ಕೇಳುತ್ತಿದೆ. ಇದು ನ್ಯಾಯಸಮ್ಮತವಲ್ಲ. ಸ್ವಾತಂತ್ರ್ಯ ಬರುವುದಕ್ಕೂ ಮುನ್ನ ಮಾಡಿಕೊಂಡ ನೀರು ಹಂಚಿಕೆ ಒಪ್ಪಂದವನ್ನು ಇಂದಿಗೂ ಜೀವಂತವಾಗಿ ಉಳಿಸಿಕೊಂಡಿರುವುದು ಮಹಾ ಅಪರಾಧ. ಸುಪ್ರೀಂಕೋರ್ಟ್ ರಾಜ್ಯದ ವಾಸ್ತವಾಂಶ ಅರಿತು ಆದೇಶ ನೀಡಬೇಕಿತ್ತು. ಆದರೆ ಏಕಾಏಕಿ ತಮಿಳುನಾಡಿಗೆ ನೀರು ಬಿಡುವಂತೆ ಆದೇಶಿಸಿದೆ. ಹೀಗಾಗಿ ಸರ್ಕಾರ ನೀರು ಹರಿಸದೇ ರೈತರ ಹಿತ ಕಾಪಾಡಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಸಂಘಟನೆ ಕಾರ್ಯಾಧ್ಯಕ್ಷ ಎಸ್.ರವಿ, ಪ್ರಧಾನ ಕಾರ್ಯದರ್ಶಿ ಪ್ರಭು, ಉಪಾಧ್ಯಕ್ಷ ಯುವರಾಜ್, ಆನಂದ್, ಯುವ ಅಧ್ಯಕ್ಷ ಮಹೇಶ್, ನಗರ ಘಟಕದ ಅಧ್ಯಕ್ಷ ಯೋಗೇಶ್, ಕಸಾಪ ಅಧ್ಯಕ್ಷ ವಸಂತ್, ರಾಘವೇಂದ್ರ, ಹರೀಶ್, ದಿನೇಶ್, ಶಿವಾಜಿ ಇನ್ನಿತರರಿದ್ದರು.

ನಾಗಮಂಗಲ: ತಮಿಳುನಾಡಿಗೆ ನೀರು ಹರಿಸುವಂತೆ ಸುಪ್ರೀಂಕೋರ್ಟ್ ತೀರ್ಪನ್ನು ವಿರೋಧಿಸಿ ಪಟ್ಟಣದಲ್ಲಿ ವಕೀಲರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ಪ್ರತಿಭಟನೆಯಲ್ಲಿ ವಕೀಲರ ಸಂಘದ ಕಾರ್ಯದರ್ಶಿ ಮಂಜುನಾಥ್, ಪದಾಧಿಕಾರಿಗಳಾದ ಚಂದ್ರಶೇಖರ್, ಲಕ್ಷ್ಮಿ ಸಾಗರ್, ಗೋಪಾಲ ಮೂರ್ತಿ, ಭರತ್, ಪುರುಷೋತ್ತಮ್, ಆನಂದ್, ಉಮೇಶ್, ಶಿವಣ್ಣ, ರಾಮೇಗೌಡ ಮಹದೇವ್ ಪ್ರಕಾಶ್ ಇತರರಿದ್ದರು.

ಮದ್ದೂರು, ಕೆ.ಎಂ.ದೊಡ್ಡಿ ಬಂದ್ ಯಶಸ್ವಿ



ಮದ್ದೂರು, ಸೆ.23– ತಮಿಳುನಾಡಿಗೆ ನೀರು ಬಿಡಬೇಕೆಂಬ ಸುಪ್ರೀಂಕೋರ್ಟ್ ಆದೇಶದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳು ಕರೆ ನೀಡಿದ್ದ ಮದ್ದೂರು ಬಂದ್ ಯಶಸ್ವಿಯಾಯಿತು.

ಬಂದ್ ಹಿನ್ನೆಲೆಯಲ್ಲಿ ವರ್ತಕರು ಸ್ವಯಂ ಪ್ರೇರಿತರಾಗಿ ಅಂಗಡಿ ಮುಂಗಟ್ಟುಗಳು ಬಾಗಿಲು ಮುಚ್ಚಿದ್ದವು. ಬೆಳಿಗ್ಗೆ ತೆರೆದಿದ್ದ ಹೋಟೆಲ್‌ಗಳು ಬಂದ್ ಕಾವೇರುತ್ತಿದ್ದಂತೆ ಬಾಗಿಲು ಮುಚ್ಚಿದವು. ಚಲನಚಿತ್ರ ಮಂದಿರಗಳು ಬೆಳಗಿನ ಮತ್ತು ಮಧ್ಯಾಹ್ನದ ಚಿತ್ರ ಪ್ರದರ್ಶನ ರದ್ದು ಮಾಡಿದ್ದವು. ಸರ್ಕಾರಿ ಮತ್ತು ಖಾಸಗಿ ಬಸ್ ಸಂಚಾರ ಸ್ಥಗಿತವಾಗಿತ್ತು. ಇದರಿಂದ ಪ್ರಯಾಣಿಕರು ಪರದಾಡುವಂತಾಗಿತ್ತು. ಆಟೋ ಸಂಚಾರ ವಿರಳವಾಗಿತ್ತು. ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು.

ಬಂದ್ ಹಿನ್ನೆಲೆಯಲ್ಲಿ ರಸ್ತೆಗಳು ಬಿಕೋ ಎನ್ನುತ್ತಿದ್ದವೆ ಸಾರ್ವಜನಿಕರ ಓಡಾಟ ಕಡಿಮೆಯಾಗಿತ್ತು ಬೈಕ್ ಜಾಥಾ ಮೂಲಕ ಪಟ್ಟಣದ ಪೇಟೆ ಬೀದಿಯಲ್ಲಿ ಸುತ್ತಿದ ಪ್ರತಿಭಟನಾಕಾರರು ಕೆಲವೆಡೆ ತೆರೆದಿದ್ದ ಅಂಗಡಿಗಳ ಬಾಗಿಲು ಮುಚ್ಚಿಸಿದರು. ಪ್ರಮುಖ ಪ್ರದೇಶವಾದ ಪೇಟೆ ಬೀದಿ, ಬೆಂಗಳೂರು–ಮೈಸೂರು ಹೆದ್ದಾರಿ, ಬಂದ್ ವಾತಾವರಣ ಕಂಡು ಬಂತು.

ಕೆ.ಎಂ.ದೊಡ್ಡಿ: ಕಾವೇರಿ ನೀರು ಹರಿಸುವಂತೆ ಸುಪ್ರೀಂಕೋರ್ಟ್ ತೀರ್ಪು ವಿರೋಧಿಸಿ ರೈತ ಹಿತಾರಕ್ಷಣಾ ಸಮಿತಿ ಕರೆ ನೀಡಿದ್ದ ಬಂದ್ ಬೆಂಬಲಿಸಿ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಭಾರತೀನಗರದವನ್ನು ಬಂದ್‌ಗೊಳಿಸಿ ಮದ್ದೂರು–ಮಳವಳ್ಳಿ ಮುಖ್ಯರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು. ಇಲ್ಲಿನ ಸಜನ್ ಕಾಂಪ್ಲೆಕ್ಸ್ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ರವಿಕುಮಾರ್, ಕೃಷ್ಣ, ಆರ್.ಸಿದ್ದಪ್ಪ, ಶಂಕರೇಗೌಡ, ಗಿರೀಶ್, ಚಿಕ್ಕತಿಮ್ಮೇಗೌಡ, ಸ್ವರೂಪ್‌ಚಂದ್ರ, ಮಹೇಂದ್ರ, ಎ.ಎಸ್.ರಾಜೀವ್, ವೆಂಕಟೇಶ್, ಶಿವರಾಮು, ಪುಟ್ಟಸ್ವಾಮಿ, ಬಸವರಾಜೇಗೌಡ, ಚಂದ್ರಶೇಖರ್, ಬಸವರಾಜು, ರಾಮಲಿಂಗೇಗೌಡ, ವಿನು, ವಸಂತ, ಯೋಗೇಶ್, ಬಸವರಾಜು, ರಾಜಣ್ಣ, ದೋಚಿಗೌಡ, ನಿಂಗಯ್ಯ, ಮೂರ್ತಿ, ಯತೀಶ್ ಸೇರಿದಂತೆ ಹಲರಿದ್ದರು.

ಸರ್ಕಾರ ರಾಜಕೀಯ ಬದಿಗಿಟ್ಟು ಜನಹಿತ ಕಾಪಾಡಲಿ: ಸಿ.ಟಿ.ರವಿ



ಮಂಡ್ಯ, ಸೆ.23– ಕಾವೇರಿ ವಿಚಾರದಲ್ಲಿ ರಾಜ್ಯ ಸರ್ಕಾರ ರಾಜಕೀಯ ಹಿತಾಸಕ್ತಿ ಬದಿಗಿಟ್ಟು ಜನಹಿತ ಕಾಪಾಡಬೇಕು ಎಂದು ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರಶ್ನಿಸಿದರು.

ಶನಿವಾರ ನಗರದ ಸರ್‌ಎಂವಿ ಪುತ್ಥಳಿ ಬಳಿ ನಡೆಯುತ್ತಿರುವ ರೈತ ಹಿತರಕ್ಷಣಾ ಸಮಿತಿ ಹೋರಾಟದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಬೆಂಗಳೂರು ಜನರು ನಿಮ್ಮ ವಿರುದ್ಧ ಮತಕೊಟ್ಟರೆಂದು ಅವರಿಗೆ ಕುಡಿಯುವ ನೀರು ಕೊಡಬಾರದು ಎಂದು ಕಾಂಗ್ರೆಸ್ ಸಂಚು ರೂಪಿಸಿದಂತಿದೆ. ನನಗೆ ಈ ಅನುಮಾನ ಮೂಡುತ್ತಿದ್ದು, ಅಧಿಕಾರದಲ್ಲಿದ್ದಾಗ ಗೂಂಡಾ ರೀತಿ ದುರಹಂಕಾರದಿಂದ ವರ್ತಿಸಬೇಡಿರಿ. ನಿಮ್ಮ ದುರಹಂಕಾರಕ್ಕೆ ಈ ಜನ ಮದ್ದು ಅರೆಯುತ್ತಾರೆ ಎಂದು ಕಿಡಿಕಾರಿದರು.

ಏನಾದರೂ ಆಗಲಿ ರಾಜ್ಯದ ಹಿತ ಮುಖ್ಯ ಎಂದಿದ್ದರೆ ಅದು ಸದ್ಗುಣ. ನೀರು ಉಳಿಸಿಕೊಳ್ಳುವ ಕೆಲಸ ನಿಮ್ಮಿಂದ ಆಗಿಲ್ಲ. ಹಂಚಿ ತಿನ್ನೋದು, ಕುಡಿ ಬಾಳೋದು ಈ ನೆಲದ ಗುಣ. ಈಗ ನಾವೇ ಒಣಗಿ ಹೋಗುವಾಗ ಕುಡಿಯುವ ನೀರು ಕೇಳಿದರೆ ದುರಹಂಕಾರ ಮಾತು ಆಡುತ್ತೀರಾ. ಸರ್ಕಾರ ನೀರು ಬಿಡಲ್ಲ ಎಂದು ನಿಲುವು ತಾಳಲಿ. ನಾವು ಅವರೊಂದಿಗೆ ನಿಲ್ಲುತ್ತೇವೆ. ತಮಿಳುನಾಡು ಕೇಳುವ ಮುನ್ನ ನೀರು ಬಿಟ್ಟು ಇದೀಗ ನಮಗೆ ನೀರಿಲ್ಲದಂತೆ ಈ ಸರ್ಕಾರ ಮಾಡಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ಸಿಗರು ಪಾದಯಾತ್ರೆ ಮಾಡಿದಾಗ ಜನರಿಗೆ ವಿಶ್ವಾಸ ಹೆಚ್ಚಿತ್ತು. ಹಾಗಾಗಿ ಅವರನ್ನು ದೊಡ್ಡಮಟ್ಟದಲ್ಲಿ ಗೆಲ್ಲಿಸಿದರು. ಆದರೆ ಕಾಂಗ್ರೆಸ್ ಅಧಿಕಾರ ಹಿಡಿದ ಬಳಿಕ ರೈತರ ಹಿತ ಮರೆತಿದೆ. ಮಗು ಅತ್ತಾಗ ತಾಯಿ ಹಾಲು ಕೊಡುತ್ತಾಳೆ. ಆದರೆ ತಮಿಳುನಾಡು ಕೇಳುವ ಮುನ್ನ ನಮ್ಮ ಸರ್ಕಾರ ನೀರು ಬಿಟ್ಟಿದೆ. ವಾಸ್ತವ ಪರಿಸ್ಥಿತಿ ಮನವರಿಕೆ ಮಾಡುವ ಕೆಲಸ ಆರಂಭದಲ್ಲೇ ಆಗಬೇಕಿತ್ತು. ವಾಡಿಕೆಗಿಂದ ಈ ಬಾರಿ ಮಳೆ ಕಡಿಮೆ ಇದೆ. ಡ್ಯಾಂನಲ್ಲಿ ನೀರಿನ ಸಂಗ್ರಹ ತುಂಬಾ ಕಡಿಮೆ ಇದೆ ಈ ಆದೇಶ ಪಾಲಿಸಿದರೆ ಡ್ಯಾಂನಲ್ಲಿ ಕೇವಲ 6 ಟಿಎಂಸಿ ನೀರು ಮಾತ್ರ ಉಳಿಯುತ್ತದೆ ಎಂದು ಆತಂಕ ವ್ಯಕ್ತಪಡಿಸಿದರು.

ಹೋರಾಟ ಮಂಡ್ಯದವರು ಮಾತ್ರವಲ್ಲ. ಬೆಂಗಳೂರಿನವರು ಮಾಡಬೇಕು. ಮುಂದಿನ ದಿನಗಳಲ್ಲಿ ಕುಡಿಯುವ ನೀರನ್ನು ಎಲ್ಲಿಂದ ತರುತ್ತೀರಿ. ಕಬಿನಿ, ಕೆಆರ್‌ಎಸ್ ಕಟ್ಟಿದ್ದು ತಮಿಳುನಾಡಿಗೆ ಬೇಕಾದಾಗ ನೀರು ಬಿಡೋದಕ್ಕಾ? ಮಳೆ ಆದಾಗ ನಾವ್ಯಾರು ನೀರು ಯಾಕೆ ಬಿಟ್ರಿ ಎಂದು ಕೇಳಿಲ್ಲ. ಆದರೆ ಸಂಕಷ್ಟ ಇದ್ದ ಕಾಲದಲ್ಲಿ ನೀರು ಬಿಡಬಾರದು. ನಮ್ಮ ನೀರು ನಮ್ಮ ಹಕ್ಕು ಎಂದು ಹೋರಾಟ ಮಾಡಿದವರ ಹಕ್ಕು ಈಗ ಎಲ್ಲಿಗೋಯ್ತು ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಕಿಡಿಕಾರಿದರು.

ಕಾವೇರಿ ವಿಚಾರದಲ್ಲಿ ಸೋನಿಯಾ ಗಾಂಧಿ ಮಧ್ಯ ಪ್ರವೇಶ ಮಾಡಬೇಕು. ಸೋನಿಯಾ ಅವರ ಮಾತನ್ನು ಸ್ಟಾಲಿನ್ ಕೇಳುತ್ತಾರೆ. ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಅವರು ಡಿಎಂಕೆ ಪರ ಪ್ರಚಾರಕ್ಕೆ ಹೋಗಿದ್ದರು. ಇವರು ಯಾಕೆ ಮಾತನಾಡುತ್ತಿಲ್ಲ? ಕರ್ನಾಟಕ–ತಮಿಳುನಾಡಿನಲ್ಲಿ ಇಂಡಿಯಾ ಒಕ್ಕೂಟದ ಮೈತ್ರಿ ಇದ್ದು ಇದನ್ನು ಸದ್ಬಳಕೆ ಮಾಡಿಕೊಂಡು ಮಾತುಕತೆ ಮೂಲಕ 2 ಸರ್ಕಾರ ಸಮಸ್ಯೆ ಬಗೆಹರಿಸಿಕೊಳ್ಳಲಿ ಎಂದು ಸಲಹೆ ನೀಡಿದರು.

ರಾಜ್ಯದಲ್ಲಿ ಆಡಳಿತ ನಡೆಸುವ ಪಕ್ಷ ಬದಲಾಗಿವೆ. ಆದರೆ ರೈತ ಹಿತರಕ್ಷಣಾ ಸಮಿತಿ ನಿಲುವುಗಳು ಎಂದಿಗೂ ಬದಲಾಗಿಲ್ಲ ಕಾವೇರಿ ಉಪನದಿ ಹೇಮಾವತಿ ಉಗಮವಾಗುವುದು ನಾನು ಪ್ರತಿನಿಧಿಸುವ ಚಿಕ್ಕಮಗಳೂರು ಜಿಲ್ಲೆಯಲ್ಲಿ. ನನ್ನ ಸಾರ್ವಜನಿಕ ಜೀವನ ಪ್ರಾರಂಭವಾಗಿದ್ದು ರೈತ ಚಳವಳಿ ಮೂಲಕ. ನನಗೂ ರೈತ ಕುಟುಂಬದ ಹಿನ್ನೆಲೆ ಇದೆ. ರೈತರ ನೋವು–ನಲಿವು ನನಗೆ ಗೊತ್ತಿದೆ. ಇವತ್ತು ನಡೆಯುತ್ತಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತದೆ ಇದ್ದರೆ ನಾನು ಬದುಕಿದ್ದು ಸತ್ತಂತೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಮುಖಂಡರಾದ ಇಂಡುವಾಳು ಸಚ್ಚಿದಾನಂದ, ಅಶೋಕ್ ಜಯರಾಂ, ಡಾ.ಇಂದ್ರೇಶ್ ಸೇರಿದಂತೆ ಇತರರಿದ್ದರು.

ತಿಮ್ಮಮ್ಮ ನಿಧನ



ಕೆ.ಆರ್.ಪೇಟೆ, ಸೆ.23– ತಾಲೂಕಿನ ಹರೀನಹಳ್ಳಿ ಪೂಜಾರಿ ವೆಂಕಟಯ್ಯ ಅವರ ಪತ್ನಿ ತಿಮ್ಮಮ್ಮ (85) ಶನಿವಾರ ಸಂಜೆ ನಿಧನರಾದರು.

ಮೃತರು ಮುಖಂಡರಾದ ಪೂಜಾರಿ ಯಾಲಕ್ಕಯ್ಯ ಸೇರಿದಂತೆ ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನಡೆಯಿತು.

ಮೃತರ ನಿಧನಕ್ಕೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ಸಿ.ದಿವಿಕುಮಾರ್, ಮೊರಾರ್ಜಿ ಶಾಲೆಯ ಪ್ರಿನ್ಸಿಪಾಲ್ ಸೇರಿದಂತೆ ಎಲ್ಲಾ ಸಿಬ್ಬಂದಿ ವರ್ಗದವರು, ಗಣ್ಯರು ಸಂತಾಪ ಸೂಚಿಸಿದ್ದಾರೆ.

'ಕೊಡಗು ಸಮಾಜದ ನೂರಾಂಡ್ ನಮ್ಮೆ'ಗೆ ಚಾಲನೆ

ಮೊದಲ ದಿನ ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳು; ಇಂದು ಕೊಡವ ಸಂಪ್ರದಾಯ ಸಾರುವ ಮೆರವಣಿಗೆ





ವಿರಾಜಪೇಟೆ, ಸೆ.23– ಕೊಡಗು ಕ್ರೀಡೆ ಮತ್ತು ಸೇನೆಯ ಅವಿಭಾಜ್ಯ ಅಂಗವಾಗಿದೆ ಮಕ್ಕಳ ಶಿಕ್ಷಣದೊಂದಿಗೆ ಪೋಷಕರು ಕ್ರೀಡೆಗೂ ಹೆಚ್ಚು ಪ್ರೋತ್ಸಾಹ ನೀಡುವಂತಾಗಬೇಕು ಎಂದು ಹಾಕಿ ತರಬೇತುದಾರ ಕೊಡವ ಕೇರಿ ಕಾರ್ಯಾಧ್ಯಕ್ಷ ಮೇಕೇರಿರ ರವಿ ಪೆಮ್ಮಯ್ಯ ತಿಳಿಸಿದರು.

ವಿರಾಜಪೇಟೆ 'ಕೊಡವ ಸಮಾಜದ ನೂರಾಂಡ್ ನಮ್ಮೆ'ಯ ಅಂಗವಾಗಿ ಸಮಾಜದ ಆವರಣದಲ್ಲಿ ಆಯೋಜಿಸಿದ್ದ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವ ಕೊಡವ ಜನಾಂಗ ಕ್ರೀಡೆ ಮತ್ತು ಸೇನೆಯಲ್ಲಿ ರಾಜರ ಆಳ್ವಿಕೆಯ ಕಾಲದಿಂದಲೂ ಗುರುತಿಸಿ ಕೊಂಡಿದ್ದಾರೆ ಎಂದರು. ಕ್ರೀಡೆಯನ್ನು ಹೆಚ್ಚು ಬೆಳೆಸುವ ನಿಟ್ಟಿನಲ್ಲಿ ಯುವಕರ ಪಾತ್ರ ಮಹತ್ವಾದದ್ದು ಎಂದ ಅವರು ಕೊಡವ ಸಾಂಸ್ಕೃತಿಕ ಆಚಾರ ವಿಚಾರಗಳನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ನಡೆಸುವಂತಾಗಬೇಕು ಎಂದರು.

ಕೊಡವ ಸಮಾಜದ ಅಧ್ಯಕ್ಷ ಕುಂಬೇರ ಮನುಕುಮಾರ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೊಡವ ಸಮಾಜ ಇಂದು ಶತಮಾನೋತ್ಸವ ಆಚರಿಸುತ್ತಿದ್ದು, ಇದರ ಅಂಗವಾಗಿ ಕೊಡವ ಜನಾಂಗ ಬಾಂಧವರಿಗೆ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಯುವಕರು, ಮಹಿಳೆಯರು, ಪುರುಷರು ನೂರಾಂಡ್ ನಮ್ಮೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಸೆ.24 ರಂದು ಬೆಳಗ್ಗೆ ಗಣಪತಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ನಗರದ ಗಡಿಯಾರ ಕಂಬದ ಬಳಿಯಿಂದ ಕೊಡವ ಸಮಾಜದವರೆಗೆ ನಡೆಯುವ ಮೆರವಣಿಗೆಯಲ್ಲಿ ಪುರುಷರು ಮತ್ತು ಮಹಿಳೆಯರು ಕೊಡವ ಉಡುಪು ಧರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅವರು ಕೋರಿದರು.

ಕೊಡವ ಸಮಾಜದ ಕ್ರೀಡಾ ಕಾರ್ಯದರ್ಶಿ ಅಮ್ಮಣಿಚಂಡ ಪಿ.ಸುಬ್ರಮಣಿ ಅವರು ವಿವಿಧ ಕ್ರೀಡಾ ಸ್ಪರ್ಧೆಗಳ ಬಗ್ಗೆ ಮಾಹಿತಿ ನೀಡಿದರು. ವೇದಿಕೆಯಲ್ಲಿ ಸಮಾಜದ ಉಪಾಧ್ಯಕ್ಷರಾದ ಕುಯ್ಯಮಂಡ ಕಿರಣ್, ಗೌರವ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್, ಮರಣ ನಿಧಿ ಕಾರ್ಯದರ್ಶಿ ಮಾದೇಯಂಡ ಸಂಪಿ ಪೂಣಚ್ಚ ಸೇರಿದಂತೆ ಸಮಾಜದ ಎಲ್ಲಾ ನಿರ್ದೇಶಕರುಗಳು ಉಪಸ್ಥಿತರಿದ್ದರು.

ಕ್ರೀಡಾ ಕಾರ್ಯಕ್ರಮದಲ್ಲಿ ತೆಂಗಿನ ಕಾಯಿಗೆ ಗುಂಡು ಹೊಡೆಯುವುದು, ಹಗ್ಗ ಜಗ್ಗಾಟ, ಭಾರದ ಗುಂಡು ಎಸೆತ, ಕೊಡವ ಒಲಗತಾಟ್ ಪೈಪೋಟಿ ಸೇರಿದಂತೆ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು ಕೊಡವ ಜನಾಂಗದ ಪುರುಷರು, ಮಹಿಳೆಯರು ಮತ್ತು ಮಕ್ಕಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ತ.ನಾಡಿಗೆ ನೀರು ಬಿಡುಗಡೆ ವಿರೋಧಿಸಿ ಪ್ರತಿಭಟನೆ



ಚಾಮರಾಜನಗರ, ಸೆ.23– ರಾಜ್ಯ ಸರ್ಕಾರ ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ವಿರೋಧಿಸಿ ನಗರದಲ್ಲಿ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ಹಾಗೂ ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕರ್ನಾಟಕ ಸೇನಾ ಪಡೆ: ನಗರದ ಭುವನೇಶ್ವರಿ ವೃತ್ತದಲ್ಲಿ ಜಮಾಯಿಸಿದ ಕರ್ನಾಟಕ ಸೇನಾ ಪಡೆ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿಯಲ್ಲಿ ಅರೆಬೆತ್ತಲೆಯಾಗಿ ಉರುಳು ಸೇವೆ ಮಾಡುವ ಮೂಲಕ ತಮಿಳುನಾಡು, ರಾಜ್ಯ, ಕೇಂದ್ರ ಸರ್ಕಾರ ಹಾಗೂ ಕಾವೇರಿ ನೀರಾವರಿ ಪ್ರಾಧಿಕಾರದ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ಮುಖಂಡ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಕಾವೇರಿ ನೀರಾವರಿ ಪ್ರಾಧಿಕಾರ ತಮಿಳುನಾಡು ಪರ ಕಾರ್ಯ ನಿರ್ವಹಿಸುತ್ತಿದೆ. ರಾಜ್ಯ ಸರ್ಕಾರ ನೀರು ಹರಿಸುವ ಮೂಲಕ ರೈತರ ಹಿತ ಬಲಿ ಕೊಡುತ್ತಿದೆ. ಪ್ರಸ್ತುತ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸದಿದ್ದಲ್ಲಿ ರಾಜ್ಯದ ಜನರು ಸಂಕಷ್ಟಕ್ಕೆ ಸಿಲುಕಲಿದ್ದಾರೆ. ಕೂಡಲೇ ಕರ್ನಾಟಕ ಸರ್ಕಾರ ತಮಿಳುನಾಡಿಗೆ ಹರಿಸುತ್ತಿರುವ ನೀರನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಶಾ.ಮುರಳಿ, ರಾಜು, ಚಾ.ರಾ.ಕುಮಾರ್, ಲಿಂಗರಾಜು, ಚಾಮರಾಜಗೋಪಾಲ್, ಚಾ.ಹ. ರಾಮು, ಗು.ಪುರುಷೋತ್ತಮ್, ತಾಂಡವಮೂರ್ತಿ, ಲಿಂಗರಾಜು, ಆಟೋ ನಾಗೇಶ್ ಇತರರಿದ್ದರು.

ಕಬ್ಬು ಬೆಳೆಗಾರರ ಸಂಘ: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ವಿಚಾರದಲ್ಲಿ ರಾಜ್ಯಸಭಾ ಸದಸ್ಯರು ರಾಜ್ಯದ ಪರ ಮಾತನಾಡದೇ ಮೌನ ವಹಿಸಿದ್ದಾರೆ ಎಂದು ಆರೋಪಿಸಿ ನಗರದಲ್ಲಿ ಶನಿವಾರ ಕಬ್ಬು ಬೆಳೆಗಾರರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ರಾಜ್ಯಸಭಾ ಸದಸ್ಯರಾದ ನಿರ್ಮಲಾ ಸೀತಾರಾಮನ್, ಜೈರಾಮ್ ರಮೇಶ್, ಜಗ್ಗೇಶ್, ರಾಜೀವ್, ಚಂದ್ರಶೇಖರ್, ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹಲವರ ಭಾವಚಿತ್ರಗಳನ್ನು ಹರಿದು ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ರಾಜ್ಯ ಕಬ್ಬು ಬೆಳೆಗಾರ ಸಂಘದ ಕಾರ್ಯಾಧ್ಯಕ್ಷ ಭಾಗ್ಯರಾಜ್, ಉಪಾಧ್ಯಕ್ಷ ಶಿವಮೂರ್ತಿ, ತಾಲೂಕು ಅಧ್ಯಕ್ಷ ನಾಗರಾಜ್, ಪ್ರಧಾನ ಕಾರ್ಯದರ್ಶಿ ಹರ್ಷ, ಉಡಿಗಾಲ ಗ್ರಾಮ ಘಟಕದ ಅಧ್ಯಕ್ಷ ಮಂಜುನಾಥ್, ಮುಖಂಡರಾದ ಮಹದೇವಸ್ವಾಮಿ, ಗುರುಮಲ್ಲಪ್ಪ, ಸುಧಾಕರ್, ಅರಳಿಕಟ್ಟೆ ಗ್ರಾಮ ಘಟಕದ ಅಧ್ಯಕ್ಷ ಕುಮಾರ್, ವೀರಭದ್ರಪ್ಪ, ಮಹದೇವಸ್ವಾಮಿ, ಕಿಳ್ಳಿಪುರ ಗ್ರಾಮ ಘಟಕದ ನಂದೀಶ್, ಶ್ರೀಕಂಠಪ್ಪ ಇತರರಿದ್ದರು.

ಆರೋಗ್ಯ, ಶಿಕ್ಷಣ, ಮೂಲಸೌಕರ್ಯಕ್ಕೆ ಆದ್ಯತೆ: ಡಿಸಿ



ಚಾಮರಾಜನಗರ, ಸೆ.23– ಜಿಲ್ಲೆಯಲ್ಲಿ ಆರೋಗ್ಯ, ಶಿಕ್ಷಣ ಹಾಗೂ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದರು.

ನಗರದ ಯಡಪುರದಲ್ಲಿರುವ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧನಾ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ನಿರಂತರ ವೈದ್ಯಕೀಯ ಕಲಿಕೆ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಂಚಾರಿ ಆರೋಗ್ಯ ಕೇಂದ್ರಗಳು ಹಾಗೂ ತಾಲೂಕು ಆಸ್ಪತ್ರೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಅಲ್ಲದೇ, ಕಾಲಕಾಲಕ್ಕೆ ಆರೋಗ್ಯ ತಪಾಸಣಾ ಶಿಬಿರಗಳ ಆಯೋಜನೆಯಿಂದ ಜನರು ಉತ್ತಮ ಆರೋಗ್ಯ ಹೊಂದಲು ಸಾಧ್ಯವಾಗಿದೆ ಎಂದರು.

ಜಿಲ್ಲೆಯ ಬುಡಕಟ್ಟು ಜನಾಂಗದಲ್ಲಿ ಸಿಕಲ್‌ಸೆಲ್ ಅನೀಮಿಯಾ ತೊಂದರೆ ಹೆಚ್ಚಾಗಿದ್ದು, 35 ಸಾವಿರ ಬುಡಕಟ್ಟು ಜನರಿಗೆ ಅನೀಮಿಯಾ ಸ್ಕ್ರೀನಿಂಗ್ ಪ್ರಾರಂಭಿಸಲಾಗಿದೆ. ಗಿರಿಜನರಿಗೆ ಆರೋಗ್ಯ ಸೇವೆ ಕಲ್ಪಿಸಲು ಕ್ರಮ ವಹಿಸಲಾಗಿದೆ ಎಂದರು.

ಜಿಲ್ಲೆಯಲ್ಲಿ ವೈದ್ಯಕೀಯ ಕಾಲೇಜಿನ ಬೋಧನಾ ಆಸ್ಪತ್ರೆ ಆರಂಭಕ್ಕೂ ಮೊದಲು ಕೊಳ್ಳೇಗಾಲ, ಹನೂರು ಭಾಗದ ಜನರು ತಮಿಳುನಾಡು ಆಸ್ಪತ್ರೆಗೆ ಹಾಗೂ ಚಾಮರಾಜನಗರ ಹಾಗೂ ಗುಂಡ್ಲುಪೇಟೆ ಜನತೆ ಮೈಸೂರಿನ ಆಸ್ಪತ್ರೆಗಳಿಗೆ ಹೋಗುವ ಪರಿಸ್ಥಿತಿ ಇತ್ತು. ಆದರೆ ನಗರದಲ್ಲಿ ವೈದ್ಯಕೀಯ ಆಸ್ಪತ್ರೆ ಆರಂಭದ ಬಳಿಕ ವೈದ್ಯಕೀಯ ಸೇವೆ ಇಲ್ಲಿಯೇ ಲಭ್ಯವಾಗುತ್ತಿದ್ದು, ಹೊರ ಹೋಗಬೇಕಾದ ಪರಿಸ್ಥಿತಿ ದೂರವಾಗಿದೆ ಎಂದರು.

ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಮೂಲಕ ಜನರಿಗೆ ಉಚಿತವಾಗಿ ಕೀಲು ಮತ್ತು ಮೂಳೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ. ಜನತೆ ಈ ಸೇವೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಡೀನ್ ಹಾಗೂ ನಿರ್ದೇಶಕ ಡಾ.ಹೆಚ್.ಜಿ.ಮಂಜುನಾಥ್ ಮಾತನಾಡಿ ವೈದ್ಯಕೀಯ ಬೋಧನಾ ಆಸ್ಪತ್ರೆಯಲ್ಲಿ ಅನೇಕ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ. ಇಲ್ಲಿ ನಡೆಸುವ ಕೀಲು ಮತ್ತು ಮೂಳೆ ಶಸ್ತ್ರಚಿಕಿತ್ಸೆ ಇಡೀ ರಾಜ್ಯದಲ್ಲಿಯೇ ಉತ್ತಮ ಹೆಸರು ಪಡೆದಿದೆ. ರಾಜ್ಯದ ಅನೇಕ ವಿವಿಧೆಡೆಗಳಿಂದ ಜನರು ಆಗಮಿಸಿ ಸೇವೆ ಪಡೆಯುತ್ತಿದ್ದಾರೆ ಎಂದರು.

ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಕೀಲು ಮತ್ತು ಮೂಳೆ ವಿಭಾಗದ ಮುಖ್ಯಸ್ಥ ಡಾ.ಸಿ.ವಿ.ಮಾರುತಿ ಮಾತನಾಡಿ, ಈ ಬಾರಿ ಐವರಿಗೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದ್ದು, 20 ಮಂದಿ ತಜ್ಞ ವೈದ್ಯರ ತಂಡಗಳು 5 ಥಿಯೇಟರ್‌ಗಳಲ್ಲಿ ಶಸ್ತ್ರಚಿಕಿತ್ಸೆ ನೆರವೇರಿಸುತ್ತಿದ್ದಾರೆ. ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಕಾರ್ಡು ಹೊಂದಿರುವವರಿಗೆ ಉಚಿತವಾಗಿ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ ಎಂದರು.

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಕೃಷ್ಣಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಚಿದಂಬರ, ಕೀಲು ಮತ್ತು ಮೂಳೆ ತಜ್ಞರಾದ ಡಾ.ಶೇಖ್ ಸಾಲ್ವ, ಡಾ.ರವಿಚಂದ್ರ, ಡಾ. ರಾಘವೇಂದ್ರ, ಡಾ. ಶಿವಣ್ಣ, ಇತರರು ಇದ್ದರು.

ಅಮೃತ ಕಳಶ ಯಾತ್ರೆ ಕಾರ್ಯಕ್ರಮ

ಚಾಮರಾಜನಗರ, ಸೆ.23 – ಜಿಲ್ಲಾದ್ಯಂತ ಸೆಪ್ಟೆಂಬರ್ ಮಾಹೆಯಿಂದ ಅಕ್ಟೋಬರ್ 31ರವರೆಗೆ ಮೇರಿ ಮಾಟಿ ಮೇರಾ ದೇಶ್ 'ಅಮೃತ ಕಳಶ ಯಾತ್ರೆ' ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

ಸರ್ಕಾರದ ಸುತ್ತೋಲೆ ಹಾಗೂ ಕೇಂದ್ರ ಸಂಸ್ಕೃತಿ ಮತ್ತು ಯುವಜನ ವ್ಯವಹಾರಗಳು, ಕ್ರೀಡಾ ಮಂತ್ರಾಲಯದ ಸೂಚನೆಯಂತೆ ಮನೆ ಮನೆಗಳಿಂದ ಅಮೃತ ಕಳಶದಲ್ಲಿ ಅಕ್ಕಿ ಅಥವಾ ಮಣ್ಣನ್ನು ಶೇಖರಿಸಿ ವಿವಿಧ ವೈಭವಗಳ ಮೂಲಕ ಕಾರ್ಯಕ್ರಮ ನಡೆಸಲಾಗುವುದು.

ಗ್ರಾಮಾಂತರ ಪ್ರದೇಶಗಳಿಂದ ಕಾರ್ಯಕ್ರಮ ಪ್ರಾರಂಭಿಸಿ ನಂತರ ವಿವಿಧ ಕಾರ್ಯಕ್ರಮ, ಮೆರವಣಿಗೆಗಳ ಮೂಲಕ ಪಟ್ಟಣ ಪ್ರದೇಶಗಳಲ್ಲಿಯೂ ಅಮೃತ ಕಳಶಗಳನ್ನು ಬರಮಾಡಿಕೊಂಡು ಕಾರ್ಯಕ್ರಮ ನಡೆಸಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಾಂಜಾ ಮಾರುತ್ತಿದ್ದ, ಬಳಸುತ್ತಿದ್ದ ಇಬ್ಬರ ಸೆರೆ





ಮಡಿಕೇರಿ,ಸೆ.23– ಗಾಂಜಾ ಮಾರಾಟ ಮತ್ತು ಸೇವನೆಯ ಎರಡು ಪ್ರತ್ಯೇಕ ಪ್ರಕರಣಕ್ಕೆ ಸಂಬಂಧಿಸಿದಂತೆ ಮಡಿಕೇರಿ ನಗರ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ನಗರದ ಚೈನ್ ಗೇಟ್ ಬಳಿ ವ್ಯಕ್ತಿಯೋರ್ವ ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿರುವ ಮಾಹಿತಿ ಆಧರಿಸಿ ದಾಳಿ ನಡೆಸಿದ ಪೊಲೀಸರು, ಮಹದೇವಪೇಟೆ ನಿವಾಸಿ ಅಬ್ದುಲ್ ನಾಸಿರ್(36) ಎಂಬಾತನನ್ನು ಬಂಧಿಸಿ 207 ಗ್ರಾ. ಗಾಂಜಾವನ್ನು ವಶಕ್ಕೆ ಪಡೆದಿದ್ದಾರೆ. ನಗರದ ಮಕಾನ್ ಗಲ್ಲಿಯಲ್ಲಿ ಗಾಂಜಾ ಸೇವನೆ ಮಾಡುತ್ತಿದ್ದ ಮಹದೇವಪೇಟೆ ನಿವಾಸಿ ಸೈಫುದ್ದೀನ್ ಎಂ.ಈ(26) ಎಂಬಾತನನ್ನುಬಂಧಿಸಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಮಡಿಕೇರಿ ಡಿವೈಎಸ್‌ಪಿ ಎಂ.ಜಗದೀಶ್, ನಗರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಗರ ಠಾಣಾಧಿಕಾರಿ ಎಂ.ಶ್ರೀನಿವಾಸ್, ಪಿಎಸ್‌ಐ ರಾಧ ಎ.ಬಿ ಮತ್ತು ಸಿಬ್ಬಂದಿಗಳ ತಂಡ ಕಾರ್ಯಾಚರಣೆ ನಡೆಸಿದೆ.

ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ



ಮಡಿಕೇರಿ,ಸೆ.23– ಮಣಿಪಾಲ್ ಆಸ್ಪತ್ರೆ ಮೈಸೂರು ಮತ್ತು ಮಡಿಕೇರಿ ನಗರ ಕಾಂಗ್ರೆಸ್ ಸಮಿತಿ ಸಹಯೋಗದಲ್ಲಿ ಹಿರಿಯ ನಾಗರಿಕರಿಗೆ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು.

ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಡಿಕೇರಿ ಕಾಂಗ್ರೆಸ್ ಉಪಾಧ್ಯಕ್ಷ ಎಂ.ಎಂ. ಯಾಕುಬ್ ಅವರ ನೇತೃತ್ವದಲ್ಲಿ ಆಯೋಜನೆಗೊಂಡ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಡಿಕೇರಿ ನಗರಾಧ್ಯಕ್ಷ ಬಿ.ವೈ.ರಾಜೇಶ್ ವಹಿಸಿದ್ದರು. ಮಣಿಪಾಲ್ ಆಸ್ಪತ್ರೆಯ ಡಾ.ಪ್ರದೀಪ್ ರಾಜಣ್ಣ ಮತ್ತು ಸಂಗಡಿಗರು ಹಿರಿಯ ನಾಗರಿಕರಿಗೆ ಆರೋಗ್ಯ ತಪಾಸಣೆ ನಡೆಸಿದರು.

ಶಿಬಿರದಲ್ಲಿ ಮಡಿಕೇರಿ ಕ್ಷೇತ್ರದ ಶಾಸಕ ಡಾ. ಮಂತರ್ ಗೌಡ, ಕಾಂಗ್ರೆಸ್ ನಗರ ಉಪಾಧ್ಯಕ್ಷ ಪ್ರಕಾಶ್ ಆಚಾರ್ಯ, ಸೇವಾದಳದ ಜಿಲ್ಲಾಧ್ಯಕ್ಷ ಕಾನೆಹಿತ್ಲು ಮೊಣ್ಣಪ್ಪ, ಮಾಜಿ ಮುಡಾಧ್ಯಕ್ಷ ಚುಮ್ಮಿದೇವಯ್ಯ, ಅಲ್ಪಸಂಖ್ಯಾತರ ಬ್ಲಾಕ್ ಅಧ್ಯಕ್ಷ ಕಲೀಲ್ ಭಾಷ, ಕಾರ್ಯದರ್ಶಿ ರೌಹುಫ್, ಅಲ್ಪಸಂಖ್ಯಾತರ ಘಟಕದ ನಗರಾಧ್ಯಕ್ಷ ಕೆ.ಜಿ.ಪೀಟರ್, ಮಹಿಳಾ ಕಾಂಗ್ರೆಸ್ ನಗರಾಧ್ಯಕ್ಷೆ ಹೊಟ್ಟೆಯಂಡ ಫ್ಯಾನ್ಸಿ ಪಾರ್ವತಿ ಬೆಳ್ಯಪ್ಪ, ಪ್ರಮುಖರಾದ ಅಂಬೇಕಲ್ ನವೀನ್, ವಿ.ಪಿ.ಸುರೇಶ್, ಬಿ.ಸಿ.ಜಗದೀಶ್, ಕವನ್ ಕೊತ್ತೋಳಿ, ಆರ್.ಪಿ.ಚಂದ್ರಶೇಖರ್, ಜಾನ್ಸನ್ ಪಿಂಟೋ, ಕೆ.ಎ.ಮೊಣ್ಣಪ್ಪ, ಸ್ವರ್ಣ ಲತಾ, ದಿವ್ಯ, ಪ್ರೇಮ ಕೃಷ್ಣಪ್ಪ, ರಿಯಾಜ್, ಕವನ್ ಇಬ್ರಾಹಿಂ, ಇಮ್ರಾನ್ ಸೇರಿದಂತೆ ಕಾಂಗ್ರೆಸ್ ಹಿರಿಯರು ಮತ್ತು ಮಡಿಕೇರಿ ನಗರದ ಹಿರಿಯ ನಾಗರಿಕರು ಹಾಜರಿದ್ದರು.

ಪಿ.ಕಾರ್ತಿಕ್ ಕುಟ್ಟಪ್ಪ ನಾಯಕತ್ವದಲ್ಲಿ ತಂಡ



ಮಡಿಕೇರಿ,ಸೆ23– 2023ನೇ ಸಾಲಿನ ಎನ್‌ಸಿಸಿ 'ಎಐಟಿಎಸ್‌ಸಿ' ರಾಷ್ಟ್ರೀಯ ಮಟ್ಟದ ಶೂಟಿಂಗ್, ಮ್ಯಾಪ್ ರೀಡಿಂಗ್, ಹೆಲ್ತ್ ಮತ್ತು ಹೈಜಿನ್ ಹಾಗೂ ಅಬ್ಸ್ಟಿಕಲ್ಸ್ ಸ್ಪರ್ಧೆಯಲ್ಲಿ ಕರ್ನಾಟಕ ಮತ್ತು ಗೋವಾ ಡೈರೆಕ್ಟರೆಟ್ ತಂಡ ಪಟ್ಟಮಾಡ ಪಿ.ಕಾರ್ತಿಕ್ ಕುಟ್ಟಪ್ಪ ಅವರ ನಾಯಕತ್ವದಲ್ಲಿ ಮುನ್ನಡೆಯಲಿದೆ. ಕೊಡಗು ಜಿಲ್ಲೆಯ ಬೇಂಗೂರು ಗ್ರಾಮದ ಪಟ್ಟಮಾಡ ಡಿ.ಪೊನ್ನಪ್ಪ ಹಾಗೂ ಹೇಮ ಪೊನ್ನಪ್ಪ ದಂಪತಿಯ ಪುತ್ರ ಕಾರ್ತಿಕ್ ಅವರು, ಪ್ರಸ್ತುತ ಎಂ.ಎಸ್.ರಾಮಯ್ಯ ಕಾಲೇಜ್ ಆಫ್ 'ಲಾ'ದಲ್ಲಿ ದ್ವಿತೀಯ ವರ್ಷದ ವಿದ್ಯಾರ್ಥಿಯಾಗಿದ್ದಾರೆ.

ಸಮಾಜಕ್ಕೆ ಸಂದೇಶ ಸಾರುವಂತಹ ಕಾರ್ಯಕ್ರಮಗಳನ್ನು ರೂಪಿಸಿ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೂಚನೆ



ಮೈಸೂರು,ಸೆ.23(ಪಿಎಂ)– ದಸರಾ ಆಚರಣೆಯಲ್ಲಿ ಹಮ್ಮಿಕೊಳ್ಳುವ ಪ್ರತಿಯೊಂದು ಕಾರ್ಯಕ್ರಮವೂ ಸಮಾಜಕ್ಕೆ ಉತ್ತಮ ಸಂದೇಶ ನೀಡುವಂತೆ ಇರಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಧಿಕಾರಿಗಳಿಗೆ ಸೂಚಿಸಿದರು. ಮೈಸೂರು ಅರಮನೆ ಮಂಡಳಿಯ ಸಭಾಂಗಣದಲ್ಲಿ ಶನಿವಾರ ದಸರಾ ಉಪಸಮಿತಿಗಳ ಅಧಿಕಾರಿಗಳೊಂದಿಗೆ ದಸರಾ ಸಿದ್ಧತೆ ಸಂಬಂಧ ಸಭೆ ನಡೆಸಿದ ಅವರು, ಸಾಂಸ್ಕೃತಿಕ ಕಾರ್ಯಕ್ರಮಗಳು ನಮ್ಮ ಪರಂಪರೆಯನ್ನು ಬಿಂಬಿಸುವ ರೀತಿಯಲ್ಲಿ ಇರಬೇಕು. ಕವಿಗೋಷ್ಠಿಯಲ್ಲಿ ಸಂವಿಧಾನ, ಗಣರಾಜ್ಯ, ಕರ್ನಾಟಕ ಏಕೀಕರಣ, ಮೈಸೂರು ಅರಸರ ಬಗ್ಗೆ ಮಾಹಿತಿ ನೀಡುವ ಜೊತೆಗೆ ಹಾಸ್ಯವೂ ಇರಬೇಕು. ಆಹಾರ ಮೇಳದಲ್ಲಿ ದೇಸೀಯ ಆಹಾರ ಪದ್ಧತಿ ಒತ್ತು ನೀಡುವ ಜೊತೆಗೆ ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಪ್ಲಾಸ್ಟಿಕ್ ಮುಕ್ತ ದಸರಾ ಆಚರಣೆ ಮಾಡಬೇಕು. ದಸರಾ ಚಲನ ಚಿತ್ರೋತ್ಸವದಲ್ಲಿ ಸಾಮಾಜಿಕ ಸಂದೇಶ ಸಾರುವ ಚಿತ್ರಗಳನ್ನು ಪ್ರದರ್ಶನ ಮಾಡಬೇಕು. ಯುವ ನಿರ್ದೇಶಕರಿಗೆ ಉತ್ತೇಜನ ನೀಡುವಂತೆ ಇರಬೇಕು. ಕಿರುಚಿತ್ರಗಳ ಸ್ಪರ್ಧೆ ಏರ್ಪಡಿಸೇಕು. ಫಲಪುಷ್ಪ ಪ್ರದರ್ಶನ ಆಕರ್ಷಣೀಯವಾಗಿ ಇರಬೇಕು. ಹಣ್ಣು ಮೇಳದಲ್ಲಿ ದೇಶದ ವಿವಿಧ ಭಾಗಗಳಲ್ಲಿ ಬೆಳೆಯುವ ಹಣ್ಣುಗಳ ಪ್ರದರ್ಶನ ಆಗಬೇಕು. ರೈತರಿಂದ ನೇರವಾಗಿ ಹಣ್ಣುಗಳ ಖರೀದಿ ಮಾಡಬೇಕೆಂದು ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳಾದ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ವಿವಿಧ ಜಿಲ್ಲೆಗಳಿಂದ ಸ್ತಬ್ಧಚಿತ್ರಗಳು ಬರುತ್ತವೆ. ದಸರಾ ಆಚರಣೆಯ ಮೊದಲ ದಿನವೇ ವಸ್ತು ಪ್ರದರ್ಶನ ಆವರಣದ ಎಲ್ಲಾ ಸ್ಟಾಲ್‌ಗಳು ತೆರೆಯಬೇಕು. ಎಲ್ಲೆಡೆ ಪಾರ್ಕಿಂಗ್ ವ್ಯವಸ್ಥೆ ಸಮರ್ಪಕವಾಗಿ ಇರಬೇಕು ಎಂದು ಸೂಚನೆ ನೀಡಿದರು.

ಮೂರನೇ ಪುಟದಿಂದ

ಸಾಂಪ್ರದಾಯಿಕ ದಸರಾ ಆಚರಣೆ

ದಸರಾಗೆ ಹೆಚ್ಚು ಒತ್ತು ನೀಡಲಾಗುವುದು ಎಂದು ಹೇಳಿದರು.

ಯುವ ದಸರಾಗಿಲ್ಲ ಅದ್ಧೂರಿತನ: ಯಾವ್ಯಾವ ಕಾರ್ಯಕ್ರಮಗಳನ್ನು ಕೈಬಿಡಲಾಗುತ್ತಿದೆ ಎಂದು ನಿರ್ದಿಷ್ಟವಾಗಿ ಹೇಳಬಹುದೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕ್ರೀಡೆ, ಕುಸ್ತಿ, ಅರಮನೆ ಆವರಣದ ಸಂಗೀತ–ಗಾಯನ, ವಿದ್ಯುತ್ ದೀಪಾಲಂಕಾರ, ಫ್ಲವರ್ ಶೋ ಈ ಎಲ್ಲವೂ ಸಾಂಪ್ರದಾಯಿಕ ದಸರಾಗೆ ಸೇರಲಿವೆ. ಯುವ ದಸರಾ ಇರಲಿದೆ. ಆದರೆ ದುಬಾರಿ ವೆಚ್ಚಕ್ಕೆ ಕತ್ತರಿ ಹಾಕಲೇ ಬೇಕಿದ್ದು, ಅದ್ಧೂರಿತನ ಇರುವುದಿಲ್ಲ. ಪ್ರಾಯೋಜಕತ್ವದಲ್ಲಿ ಮಾಡುವುದಾದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಸ್ಥಳೀಯ ಕಲಾವಿದರಿಂದ ಕಾರ್ಯಕ್ರಮಗಳು ಇರಲಿವೆ ಎಂದು ತಿಳಿಸಿದರು.

ದೀಪಾಲಂಕಾರಕ್ಕಿಲ್ಲ ಕಡಿತ: ದೀಪಾಲಂಕಾರ ಕಡಿಮೆ ಮಾಡುವುದಿಲ್ಲ. ಹಿಂದಿನ ವರ್ಷಗಳಂತೆಯೇ ಇರಲಿದೆ. ಕಳೆದ ಬಾರಿಗಿಂತ ಈ ದಸರಾದ ಬಜೆಟ್ ಕಡಿಮೆಯಾಗಲಿದೆ. ಜಲಸಾಹಸ ಕ್ರೀಡೆಗಳಿಗೆ ಅನುಮತಿಯಷ್ಟೇ ನೀಡುವುದರಿಂದ ಅವು ಎಂದಿನಂತೆ ನಡೆಯಲಿವೆ. ಮನೆ ಮನೆ ದಸರಾ, ಟಾಂಗಾ ದಸರಾ ಮೊದಲಾದ ದಸರಾಗಳು ಇರುವುದಿಲ್ಲ. ಆಯುಧ ಪೂಜೆ ದಿನದಂದು ಎಲ್ಲರ ಮನೆಯಲ್ಲೂ ಮಾಡುತ್ತಾರಲ್ಲವೇ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ರಸ್ತೆ ದುರಸ್ತಿಗೆ ಟೆಂಡರ್: ದಸರಾ ಸಂದರ್ಭದಲ್ಲಿ ವಾರ್ಡ್‌ವಾರು ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿತ್ತು. ಅದು ಈ ಬಾರಿಯೂ ಇರಲಿದೆಯೇ ಎಂಬುದಕ್ಕೆ ಪ್ರತಿಕ್ರಿಯಿಸಿ, ಪಾಲಿಕೆ, ಮುಡಾ ಹಾಗೂ ಲೋಕೋಪಯೋಗಿ ಇಲಾಖೆಯಿಂದ ಈ ಬಾರಿಯೂ ಆ ಎಲ್ಲವೂ ನಡೆಯಲಿವೆ. ಈ ಹಿಂದೆ ನಮ್ಮದೇ ಸರ್ಕಾರದ ಅವಧಿಯಲ್ಲಿ ಜಂಬೂ ಸವಾರಿ ಮೆರವಣಿಗೆ ಮಾರ್ಗವನ್ನು ಅರಮನೆ ಆವರಣದಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ ಕಾಂಕ್ರೀಟ್ ರಸ್ತೆ ಮಾಡಿದ್ದು, ಇಲ್ಲಿ ಗುಂಡಿ ಬೀಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಉಳಿದೆಡೆ ಗುಂಡಿ ಮುಚ್ಚುವ ಸಂಬಂಧ ರಸ್ತೆಗಳನ್ನು ಗುರುತಿಸಿ ಪಾಲಿಕೆಯಿಂದ ಟೆಂಡರ್ ಕರೆಯಲಾಗಿದ್ದು, ಅದಕ್ಕೆ ಇದೇ 29 ಕೊನೆ ದಿನವಾಗಿದೆ ಎಂದರು.

ಭತ್ಯೆ ಇಚ್ಛಿಸದವರ ನೇಮಕ: ಈಗಾಗಲೇ 17 ಉಪಸಮಿತಿಗಳನ್ನು ರಚನೆ ಮಾಡಲಾಗಿದೆ. ಈ ಸಮಿತಿಗಳಿಗೆ ಅಧಿಕಾರೇತರರ ನೇಮಕಕ್ಕೆ ಇನ್ನೂ ಸಮಯ ಇದೆ. ವೆಚ್ಚಗಳಿಗೆ ಕಡಿವಾಣ ಹಾಕುವ ಅನಿವಾರ್ಯತೆ ಇರುವ ಹಿನ್ನೆಲೆಯಲ್ಲಿ ಭತ್ಯೆಗಳನ್ನು ಬಯಸದೇ ಕೆಲಸ ಮಾಡಲಿಚ್ಛಿಸುವ ಅಧಿಕಾರೇತರರನ್ನು ನೇಮಕ ಮಾಡಲಾಗುವುದು ಎಂದು ಮತ್ತೊಂದು ಪ್ರಶ್ನೆಗೆ ಉತ್ತರಿಸಿದರು. ಗೋಲ್ಡ್ ಕಾರ್ಡ್‌ಗಳನ್ನು ಕಡಿಮೆ ಮಾಡಲಾಗುತ್ತಿದೆಯೇ ಎಂಬುದಕ್ಕೆ ಪ್ರಕ್ರಿಯಿಸಿ, ಆ ಬಗ್ಗೆ ಇನ್ನೂ ಚರ್ಚೆ ಮಾಡಿಲ್ಲ ಎಂದರು. ಪ್ರಾಯೋಜಕತ್ವದ ಜೊತೆಗೆ ಆದಾಯ ಬರುವಂತಹ ಕಾರ್ಯಕ್ರಮ ಏನಾದರೂ ಇದೆಯೇ? ಎಂಬುದಕ್ಕೆ, ದಸರಾ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲಿದೆ. ಹಾಗಾಗಿ ಆದಾಯದ ಸಂಪನ್ಮೂಲದ ಕ್ರೋಢೀಕರಣವೂ ಆಗಲಿದೆ ಎಂದು ಹೇಳಿದರು. ಏರ್ ಶೋ ಸಂಬಂಧ ಮುಖ್ಯಮಂತ್ರಿಗಳು ಈ ಹಿಂದೆ ಕೇಂದ್ರದ ರಕ್ಷಣಾ ಸಚಿವರನ್ನು ಭೇಟಿ ಮಾಡಿದ್ದರು. ಕೇಂದ್ರ ಸಚಿವರು ತಾತ್ವಿಕವಾಗಿ ಒಪ್ಪಿದ್ದಾರೆಂದು ಅವರು ಹೇಳಿದ್ದರು. ಆದರೆ ಅದಿನ್ನೂ ಅಂತಿಮಗೊಂಡಿಲ್ಲ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು. ಮಾಧ್ಯಮದ ಪರವಾಗಿ ಆಯ್ದ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ ಸಲಹೆ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳು ಹಾಗೂ ನಗರ ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಿದ್ದೇನೆ. ಸಾಧ್ಯವಾದಷ್ಟು ಸುಧಾರಣೆಗೆ ಇದು ಅನುಕೂಲವಾಗಲಿದೆ ಎಂದು ತಿಳಿಸಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಜಿಪಂ ಸಿಇಓ ಕೆ.ಎಂ.ಗಾಯಿತ್ರಿ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಅಪರ ಜಿಲ್ಲಾಧಿಕಾರಿ ಶಿವರಾಜ್, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸೇರಿದಂತೆ ದಸರಾ ಉಪಸಮಿತಿಗಳ ಅಧಿಕಾರಿಗಳು ಹಾಜರಿದ್ದರು.

ರಾಜಪರಂಪರೆಯ ವಸ್ತ್ರಧಾರಿಗಳೇ ರಾರಾಜಿಸಲಿದ್ದಾರೆ!

ಇದರಿಂದ ಅಂಬಾರಿ ಆನೆ ಹಾಸುಪಾಸು ರಾಜಪರಂಪರೆಯ ವೈಭವವೇ ಕಣ್ಮರೆಯಾಗುತ್ತಿತ್ತು. ಇದಕ್ಕೆ ಈ ಬಾರಿ ಕಡಿವಾಣ ಹಾಕಿ ಮೈಸೂರು ಸಂಸ್ಥಾನದ ಪಾರಂಪರಿಕ ವಸ್ತ್ರಧಾರಿಗಳು ಗಜಪಡೆ ಸುತ್ತಮುತ್ತ ಇರುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. ಪಾರಂಪರೆಗತವಾಗಿ ಹಲವು ತಂಡಗಳು ಮೈಸೂರು ಸಂಸ್ಥಾನದ ಸಮವಸ್ತ್ರಧರಿಸಿ, ಬಿರುದು ಬಾವಲಿ ಹಿಡಿದು ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಗುವುದು ಸಾಂಪ್ರದಾಯವಾಗಿದೆ.

ಈ ಬಾರಿ ಇವರೊಂದಿಗೆ ಪೊಲೀಸ್ ಇಲಾಖೆ ಹಾಗೂ ಅರಣ್ಯ ಇಲಾಖೆಯ ಆಯ್ದ ಸಿಬ್ಬಂದಿ ಮೈಸೂರು ರಾಜಪರಂಪರೆಯ ಸಾಂಪ್ರದಾಯಿಕವಾಗಿ ವಸ್ತ್ರ ಧರಿಸಿ, ಬಿರುದು–ಬಾವಲಿ ಹಿಡಿದು ಹೆಜ್ಜೆ ಹಾಕಲಿದ್ದಾರೆ. ಶನಿವಾರ ಅರಮನೆ ಮಂಡಳಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಈ ವಿಷಯ ತಿಳಿಸಿದರು. ಅಲ್ಲದೆ, ಈ ಸಂಬಂಧ ಸಿದ್ಧಪಡಿಸಿರುವ ಪಟ್ಟಿಯಲ್ಲಿನ ಮಾಹಿತಿಯನ್ನೂ ನೀಡಿದರು.

ಅದರಂತೆ ಪಾರಂಪರಿಕ ವಸ್ತ್ರಧಾರಿಗಳು: 10 ಮಂದಿ ಪ್ಯಾಲೆಸ್ ಜಿಲ್ಲೋ, ವಸ್ತ್ರ–ಶಾರ್ಟ್ ರೆಡ್ ಕೋಟ್, ಬ್ಲಾಕ್ ಪ್ಯಾಂಟ್, ಎಲ್ಲೋ ಬೆಲ್ಟ್, ವೈಟ್ ಗೇಟ್ ಲೆಸ್, ಬ್ಲಾಕ್ ಶೂಹಲ್ವಾನ್, ಟರ್ಬನ್ ಪೇಟ, ಮೂರು ಬಣ್ಣದ ಬಾವುಟ. 15 ಮಂದಿ ಬಿರುದು ಹಿಡಿಯುವವರು, ವಸ್ತ್ರ–ಬ್ಲಾಕ್ ಶಾರ್ಟ್ ಕೋಟ್, ರೆಡ್ ಪ್ಯಾಂಟ್, ರೆಡ್ ಬೆಲ್ಟ್, ಹಾಲವನ ಪೇಟ. 10 ಮಂದಿ ರಾಚಾವರ, ವಸ್ತ್ರ–ಗ್ರೀನ್ ಶಾಟ್ ಕೋಟ್, ರೆಡ್ ಪ್ಯಾಂಟ್, ರೆಡ್ ಬೆಲ್ಟ್ ಮತ್ತು ಕ್ರಾಸ್ ಬೆಲ್ಟ್, ವೈಟ್ ಗೇಟ್ ಲೆಸ್, ಬ್ಲಾಕ್ ಶೂ, ಗ್ರೀನ್ ಲ್ಯಾನ್ಸ್, ಗ್ರೀನ್ ರಾಚಾವರ ಪೇಟ. 10 ಮಂದಿ ಗಿರ್ಲ್ ಮೀಸೆಯವರು, ಗ್ರೀನ್ ಲಾಂಗ್ ಕೋಟ್, ರೆಡ್ ಬ್ಲಾಪ್ಯಾಂಟ್, ಕ್ರಾಸ್ ಬೆಲ್ಟ್, ಸೊಂಟಕ್ಕೆ ಪಂಚೆ. ರೆಡ್ ಲ್ಯಾನ್ಸ್, ಗಿರ್ಲ್ ಮೀಸೆ ಪೇಟ. 40 ಮಂದಿ ದರ್ಬಾರ್ ಡ್ರೆಸ್, ವಸ್ತ್ರ–ಬ್ಲಾಕ್ ಲಾಂಗ್ ಕೋಟ್, ವೈಟ್ ಪ್ಯಾಂಟ್, ಬಿಳಿ ವಲ್ಲಿ, ಬ್ಲಾಕ್ ಕೋಟ್, ವೈಟ್ ಪ್ಯಾಂಟ್. 12 ಮಂದಿ–ವಾದ್ಯವೃಂದ, ವಸ್ತ್ರ–ಬ್ಲಾಕ್ ಲಾಂಗ್ ಕೋಟ್, ಬಳಿ ಪಂಚೆ, ಹಾಲವನ ಪೇಟ (ಮುಖ್ಯಸ್ಥರಿಗೆ ಜೆರಿ ಪೇಟ). 3 ಮಂದಿ ದರ್ಬಾರ್ ಉಡಾಸ್, ವಸ್ತ್ರ–ರೆಡ್ ಲಾಂಗ್ ಕೋಟ್, ರೆಡ್ ಪ್ಯಾಂಟ್, ರೆಡ್ ಜೆರಿ ಬೆಲ್ಟ್, ರೆಡ್ ಜೆರಿ ಪೇಟ.

ಇದೇ ವೇಳೆ ಮಾತನಾಡಿದ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಗಜಪಡೆಯ ಸುತ್ತಮುತ್ತ ಸಂಪೂರ್ಣವಾಗಿ ಪೊಲೀಸರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿಯೇ ಇರಲಿದ್ದಾರೆ. ಅದಕ್ಕಾಗಿ 200 ಮಂದಿ ಆಯ್ಕೆ ಮಾಡಲಾಗುವುದು. ಅವರು ಈ ರಾಜಪರಂಪರೆ ಬಿಂಬಿಸುವ ವಸ್ತ್ರಧಾರಿಗಳಾಗಿ ಇರಲಿದ್ದಾರೆ. ಭದ್ರತೆ ದೃಷ್ಟಿಯಿಂದಲೂ ಇದು ಹೆಚ್ಚು ಸೂಕ್ತವಾಗಿದೆ ಎಂದು ಹೇಳಿದರು. ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ದಸರಾ ವೆಬ್‌ಸೈಟ್ ಸಿದ್ಧಗೊಂಡಿದೆ. ಇನ್ನು 2 ದಿನಗಳಲ್ಲಿ ವೆಬ್‌ಸೈಟ್ ಬಿಡುಗಡೆಗೊಳ್ಳಲಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬೆಂಗಳೂರು ಬಂದ್ ಮಾಡಬೇಡಿ...

ಮಾಡಿದರೆ ನಿಮ್ಮ ಹೃದಯಕ್ಕೆ ನೀವೇ ಚುಚ್ಚಿಕೊಂಡಂತೆ. ನಾವು ಎಲ್ಲಾ ರೀತಿಯಲ್ಲಿ ರೈತರ ಹಿತ ಕಾಯುತ್ತಿದ್ದೇವೆ, ಈ ಬಂದ್‌ನಿಂದ ಅವರಿಗೆ ಲಾಭ ಆಗುವುದಿದ್ದರೆ ಮಾಡಲಿ. ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಎಚ್.ಡಿ. ಕುಮಾರಸ್ವಾಮಿ ಅವರುಗಳು ಹೊಸ ಹುರುಪಿನಲ್ಲಿ ರಾಜಕೀಯ ಮಾಡಲು ಮುಂದಾಗಿದ್ದಾರೆ. ಅವರು ನೀರಿನಲ್ಲಿ ರಾಜಕಾರಣ ಮಾಡಿದರೆ, ನಾವು ರೈತರನ್ನು ಕಾಪಾಡುತ್ತಿದ್ದೇವೆ. ಕಾವೇರಿ ಕರ್ನಾಟಕದ ಆಸ್ತಿ ಅಲ್ಲ ಎಂಬ ಡಿಎಂಕೆ ನಾಯಕರ ಹೇಳಿಕೆಗೆ, ಹೌದು ಕಾವೇರಿ ಇಡೀ ದಕ್ಷಿಣ ಭಾರತದ ಆಸ್ತಿ ಎಂದರು. ಅಮಿತ್ ಶಾ ಜೊತೆ ಕುಮಾರಸ್ವಾಮಿ ಅವರು ಕಾವೇರಿ ವಿಚಾರವಾಗಿ ಚರ್ಚೆ ಮಾಡಿದ್ದೇವೆ ಎಂದು ಹೇಳಿರುವ ಬಗ್ಗೆ ವರದಿ ಬಂದಿದೆ. ಅವರು ಏನು ಚರ್ಚೆ ಮಾಡಿದ್ದಾರೆ, ಅವರ ನುಡಿಮುತ್ತು ಏನು ಎಂದು ಹೇಳಿದರೆ ನಾವು ಕೇಳುತ್ತೇವೆ ಎಂದರು.

ತಮಿಳುನಾಡಿನ ಏಜೆಂಟರಂತೆ ವರ್ತಿಸಲು ಕಾಂಗ್ರೆಸ್ ನಾಯಕರು ಮೂರ್ಖರೇ? ರಾಜ್ಯದ ಹಾಗೂ ಎಲ್ಲಾ ರೈತರ ರಕ್ಷಣೆ ಕೆಲಸ ಮಾಡುತ್ತಿದ್ದೇವೆ. ಪ್ರಧಾನಮಂತ್ರಿಗಳು ಮಧ್ಯ ಪ್ರವೇಶ ಮಾಡಬೇಕು ಎಂಬುದಾಗಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಸ್ಪಷ್ಟವಾಗಿ ಹೇಳಿದ್ದಾರೆ ಎಂದು ಶಿವಕುಮಾರ್ ತಿಳಿಸಿದರು.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ವಿಶೇಷ ಕೈಮಗ್ಗ ಮೇಳಕ್ಕೆ ಚಾಲನೆ





ಮೈಸೂರು, ಸೆ.23(ಎಸ್‌ಪಿಎನ್)– ಮೈಸೂರು ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ನವದೆಹಲಿ ಕೈಮಗ್ಗ ಜವಳಿ ಮಂತ್ರಾಲಯದ ಜವಳಿ ಅಭಿವೃದ್ಧಿ ಆಯುಕ್ತರ ಕಚೇರಿ, ಬೆಂಗಳೂರು ಕೈಮಗ್ಗ ಮತ್ತು ಜವಳಿ ಇಲಾಖೆ ನಿರ್ದೇಶಕರ ಕಚೇರಿ, ಕರ್ನಾಟಕ ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ, ಕಾವೇರಿ ಹ್ಯಾಂಡ್‌ಲೂಮ್ಸ್ ಹಾಗೂ ಜೆಎಸ್‌ಎಸ್ ಅರ್ಬನ್ ಹಾತ್ ಸಹಯೋಗದೊಂದಿಗೆ ಆಯೋಜಿಸಿರುವ 'ನನ್ನ ಕೈಮಗ್ಗ ನನ್ನ ಹೆಮ್ಮೆ' ಶೀರ್ಷಿಕೆಯ ವಿಶೇಷ ಕೈಮಗ್ಗ ಮೇಳಕ್ಕೆ ಮೈಸೂರು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು, ವಿದ್ಯುತ್‌ಚಾಲಿತ ಕೈಮಗ್ಗದ ಉತ್ಪನ್ನಗಳಿಗೆ ವಿಶೇಷ ಆದ್ಯತೆ ನೀಡುತ್ತಿವೆ. ಅಲ್ಲದೆ, ಉತ್ಪನ್ನಗಳ ಮಾರಾಟಕ್ಕೆ ವಿಶೇಷ ಗಮನ ಹರಿಸಿದ್ದು, ದೇಶದ ನಾನಾ ಭಾಗಗಳಲ್ಲಿ ಇಂತಹ ಬೃಹತ್ ಮೇಳ ಆಯೋಜಿಸುತ್ತಿದೆ. ಅದರ ಭಾಗವಾಗಿ ದೇಶೀ ಜವಳಿ ಉತ್ಪನ್ನಗಳ ಮಾರುಕಟ್ಟೆ ಉತ್ತೇಜಿಸಲು ಮೈಸೂರು ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಸಹಕಾರದೊಂದಿಗೆ ಮಾರಾಟ ಮತ್ತು ಪ್ರದರ್ಶನಕ್ಕೆ ಚಾಲನೆ ನೀಡಿದೆ ಎಂದರು.

75ಕ್ಕೂ ಹೆಚ್ಚು ಮಳಿಗೆಗಳು: ನೇಕಾರರು ಅಥವಾ ನೇಕಾರ ಸಹಕಾರ ಸಂಘ ಸಂಸ್ಥೆಗಳು ತಯಾರು ಮಾಡುತ್ತಿರುವ ಕೈಮಗ್ಗ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆಯನ್ನು ಒದಗಿಸುವ ದೃಷ್ಟಿಯಿಂದ ಮತ್ತು ಕೈಮಗ್ಗ ಉತ್ಪನ್ನಗಳು ನಶಿಸಿ ಹೋಗದಂತೆ ಕಾಪಾಡಿಕೊಂಡು ಮುಂದಿನ ಪೀಳಿಗೆಗೂ ಪರಿಚಯಿಸುವ ದೃಷ್ಟಿಯಿಂದ ಈ ಮೇಳವನ್ನು ಆಯೋಜನೆ ಮಾಡಿರುವುದು ಸರ್ಕಾರದ ಮೂಲ ಉದ್ದೇಶವಾಗಿದೆ. ಈ ವೃತ್ತಿಯನ್ನು ಅವಲಂಬಿಸಿ ಜೀವನ ನಿರ್ವಹಣೆ ಮಾಡುತ್ತಿರುವ ನೇಕಾರರ ಕುಟುಂಬಗಳಿಗೆ ಒಂದೇ ಸೂರಿನಡಿ ನೇಕಾರರು ತಯಾರು ಮಾಡಿದ ಉತ್ಪನ್ನಗಳ ಮಾರಾಟ ಮಾಡಲು ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಅಲ್ಲದೆ, ಈ ಮೇಳದಲ್ಲಿ ದೇಶದ ಸುಮಾರು 75ಕ್ಕೂ ಹೆಚ್ಚು ಕೈಮಗ್ಗ ನೇಕಾರರು ಮತ್ತು ಕುಶಲಕರ್ಮಿಗಳು ಪಾಲ್ಗೊಂಡಿದ್ದಾರೆ ಎಂದು ತಿಳಿಸಿದರು.

ರಾಜ್ಯದ ಚಿತ್ರದುರ್ಗ, ಹಾವೇರಿ, ಚಾಮರಾಜನಗರ, ಮೈಸೂರು, ಮಂಡ್ಯ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಶಿವಮೊಗ್ಗ, ಗದಗ, ಬಾಗಲಕೋಟೆ, ಕಲಬುರಗಿ ಸೇರಿದಂತೆ ಇತರೆ ಜಿಲ್ಲೆಗಳ ಕೈಮಗ್ಗ ನೇಕಾರರು ತಯಾರಿಸಿದ ರೇಷ್ಮೆ, ಹತ್ತಿ, ಉಣ್ಣೆ ಹಾಗೂ ವಿವಿಧ ಮಿಶ್ರಿತ ನೂಲುಗಳಿಂದ ತಯಾರಿಸಲಾದ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಿರುವುದು ಸಂತೋಷದ ಸಂಗತಿ ಎಂದರು.

ಶೇ.20ರಷ್ಟು ರಿಯಾಯಿತಿ: ಈ ಮೇಳದಲ್ಲಿ ಕೈಮಗ್ಗ ಉತ್ಪನ್ನಗಳನ್ನು ಖರೀದಿಸಿದವರಿಗೆ ಶೇ.20ರಷ್ಟು ರಿಯಾಯಿತಿ ಘೋಷಿಸಿದ್ದು, ಈ ಅವಕಾಶವನ್ನು ಮೈಸೂರು ಗ್ರಾಹಕರು ಬಳಸಿಕೊಳ್ಳುವಂತೆ ಸಲಹೆ ನೀಡಿದರಲ್ಲದೆ, ದೇಶೀ ಸಂಸ್ಕೃತಿಯ ಉಳಿವಿಗೆ ಸಹಕರಿಸುವಂತೆ ಮನವಿ ಮಾಡಿದರು.

ಪ್ರದರ್ಶನಗೊಳ್ಳುತ್ತಿರುವ ಉತ್ಪನ್ನಗಳು: ನಮ್ಮ ರಾಜ್ಯದ ಮೊಳಕಾಲ್ಮೂರು ರೇಷ್ಮೆ ಸೀರೆ, ಇಳಕಲ್ ಕಸೂತಿ ಸೀರೆ, ತಮಿಳುನಾಡಿನ ಪರಿಶುದ್ಧ ಕಾಂಜಿವರಂ ಸೀರೆ, ಕೇರಳದ ಕೈಮಗ್ಗ ಉತ್ಪನ್ನಗಳು, ಬಿಹಾರ್ ಮತ್ತು ಜಾರ್ಖಂಡ್ ರಾಜ್ಯದ ತಸ್ಸರ್ ಸೀರೆಗಳು, ಪಶ್ಚಿಮ ಬಂಗಾಳದ ಕಾಂತಾ ಸೀರೆ, ಬಲಚುರಿ ಸೀರೆ, ಭುಟಿಕ್ ಸೀರೆ, ಉತ್ತರ ಪ್ರದೇಶದ ಬನಾರಸಿ ಸಿಲ್ಕ್ ಸೀರೆ, ಚಿಕನ್ ಎಂಬ್ರಾಡರಿ ಸೀರೆ, ಮಧ್ಯ ಪ್ರದೇಶದ ಚಂದೇರಿ ಮಹೇಶ್ವರಿ ಸಿಲ್ಕ್ ಸೀರೆಗಳು, ಒರಿಸ್ಸಾ ಸಂಬಲ್ಪುರಿ ಸೀರೆ, ಇಕ್ಕತ್ ಸೀರೆ, ಬೋಂಕಾಯಿ ಸೀರೆ, ಕಾಶ್ಮೀರದ ಪಶ್ಮೀನಾ ಶಾಲ್, ಆಂಧ್ರಪ್ರದೇಶದ ಗೊದ್ವಲ್, ಕಲಮ್ಕಾರಿ ಸೀರೆಗಳು, ಪೋಚಂಪಲ್ಲಿ ಸೀರೆಗಳು, ಗುಜರಾತ್ ಪಟೋಲಾ ಸೀರೆಗಳು, ವಿವಿಧ ರಾಜ್ಯಗಳ ಡ್ರೆಸ್ ಮೆಟೀರಿಯಲ್‌ಗಳು ಹಾಗೂ ಕರಕುಶಲಕರ್ಮಿಗಳು ತಯಾರು ಮಾಡಿರುವ ವಸ್ತುಗಳ ಮಾರಾಟ ಮತ್ತು ಪ್ರದರ್ಶನವಿದೆ.

ಬೆಂಗಳೂರು ಕೈಮಗ್ಗ ಮತ್ತು ಜವಳಿ ಇಲಾಖೆ ನಿರ್ದೇಶಕ ಎನ್.ಶ್ರೀಧರ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಬೆಂಗಳೂರು ಕಾವೇರಿ ಹ್ಯಾಂಡ್‌ಲೂಮ್ಸ್ ಅಧ್ಯಕ್ಷ ಬಿ.ಜೆ.ಗಣೇಶ್, ವ್ಯವಸ್ಥಾಪಕ ನಿರ್ದೇಶಕ ಆರ್.ಲಿಂಗರಾಜು, ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಮೊರಬದ ಮಲ್ಲಿಕಾರ್ಜುನ, ಸಾಮಾನ್ಯ ಆಡಳಿತ ವಿಭಾಗದ ನಿರ್ದೇಶಕ ಶಂಕರಪ್ಪ, ಹಣಕಾಸು ವಿಭಾಗದ ನಿರ್ದೇಶಕ ಪುಟ್ಟಸುಬ್ಬಪ್ಪ, ಭಾರತ ಸರ್ಕಾರದ ಜವಳಿ ಮಂತ್ರಾಲಯದ ನೇಕಾರರ ಸೇವಾ ಕೇಂದ್ರ ಸಹಾಯಕ ನಿರ್ದೇಶಕ ಮಾರಿಮುತ್ತು, ಉಪ ನಿರ್ದೇಶಕ ಸಿ.ಜನಾರ್ಧನ ಸೇರಿದಂತೆ ಇತರರಿದ್ದರು.



ಮೈಸೂರಿನ ನಜರ್‌ಬಾದ್‌ನಲ್ಲಿ ಪ್ರತಿಷ್ಠಾಪಿಸಿರುವ ಗಣೇಶ ಮೂರ್ತಿ ದರ್ಶನ ಪಡೆದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರನ್ನು ಅಂಬಾರಿ ಗ್ರೂಪ್ಸ್ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿಕುಮಾರ್, ವಕೀಲರಾದ ಯಶೋಧಾ ಹಾಗೂ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಇಂದು ಭಾರತ–ಆಸ್ಟ್ರೇಲಿಯಾ 2ನೇ ಏಕದಿನ ಪಂದ್ಯ



ಇಂದೋರ್, ಸೆ.23– ಭಾರತ–ಆಸ್ಟ್ರೇಲಿಯಾ ನಡುವಿನ ಏಕದಿನ ಸರಣಿಯ 2ನೇ ಪಂದ್ಯ ಸೆ.24ರ ಭಾನುವಾರ ಇಲ್ಲಿನ ಹೋಳ್ಕರ್ ಮೈದಾನದಲ್ಲಿ ನಡೆಯಲಿದ್ದು, ಭಾರತೀಯ ಕಾಲಮಾನ ಮಧ್ಯಾಹ್ನ 1.30ಕ್ಕೆ ಪಂದ್ಯ ಆರಂಭಗೊಳ್ಳಲಿದೆ. ಮೂರು ಪಂದ್ಯಗಳ ಏಕದಿನ ಸರಣಿಯಲ್ಲಿ 1–0 ಅಂತರದ ಮುನ್ನಡೆಯಲ್ಲಿರುವ ಭಾರತ ನಾಳಿನ ಪಂದ್ಯ ಗೆದ್ದು ಸರಣಿ ತನ್ನದಾಗಿಸಿಕೊಳ್ಳಲು ಎದುರು ನೋಡುತ್ತಿದೆ. ಮತ್ತೊಂದೆಡೆ ಮೊದಲ ಪಂದ್ಯ ಸೋತಿರುವ ಆಸೀಸ್ ಈ ಪಂದ್ಯ ಗೆದ್ದು ಸರಣಿ ಸಮಬಲ ಸಾಧಿಸುವ ನಿರೀಕ್ಷೆಯಲ್ಲಿದೆ. ಒಟ್ಟಾರೆ ನಾಳಿನ ಪಂದ್ಯ ರೋಚಕತೆಯಿಂದ ಕೂಡಿರಲಿದೆ.

ಸಂಭಾವ್ಯ ತಂಡಗಳು: ಭಾರತ– ಶುಭಮನ್ ಗಿಲ್, ಋತುರಾಜ್ ಗಾಯಕ್ವಾಡ್, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್, ಕೆಎಲ್ ರಾಹುಲ್ (ನಾಯಕ), ಸೂರ್ಯಕುಮಾರ್ ಯಾದವ್, ರವೀಂದ್ರ ಜಡೇಜಾ, ವಾಷಿಂಗ್ಟನ್ ಸುಂದರ್, ಜಸ್‌ಪ್ರೀತ್ ಬುಮ್ರಾ, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್.

ಆಸ್ಟ್ರೇಲಿಯಾ– ಡೇವಿಡ್ ವಾರ್ನರ್, ಮಿಚೆಲ್ ಮಾರ್ಷ್, ಸ್ಟೀವನ್ ಸ್ಮಿತ್, ಮಾರ್ನಸ್ ಲಾಬುಶೇನ್, ಕ್ಯಾಮೆರಾನ್ ಗ್ರೀನ್, ಜಾಶ್ ಇಂಗ್ಲಿಸ್, ಮಾರ್ಕಸ್ ಸ್ಟೋಯ್ನಿಸ್, ಮ್ಯಾಥ್ಯೂ ಶಾರ್ಟ್, ಪ್ಯಾಟ್ ಕಮ್ಮಿನ್ಸ್ (ನಾಯಕ), ಜಾಶ್ ಹೇಝಲ್‌ವುಡ್, ಆಡಮ್ ಝಾಂಪ.

ಸಮಸ್ಯೆ ಪರಿಹರಿಸುವ ಕೌಶಲ್ಯ, ಸೃಜನಶೀಲತೆ ಇದ್ದರೆ

ಯಾವುದೇ ವೃತ್ತಿಯಲ್ಲೂ ಯಶಸ್ಸು ಲಭಿಸಲಿದೆ

ವೃತ್ತಿ ಮಾರ್ಗದರ್ಶಕ ಪ್ರೊ.ಶಂಕರ್ ಬೆಳ್ಳೂರ್ ಅಭಿಮತ



ಮೈಸೂರು,ಸೆ.23(ಪಿಎಂ)– ಸಮಸ್ಯೆ ಪರಿಹರಿಸುವ ಕೌಶಲ್ಯ ಹಾಗೂ ಸೃಜನಶೀಲತೆ ಇದ್ದರೆ ಯಾವುದೇ ವೃತ್ತಿ ಆಯ್ಕೆ ಮಾಡಿದರೂ ಯಶಸ್ಸು ಲಭಿಸಲಿದೆ ಎಂದು ಲೇಖಕ, ಕಾರ್ಪೊರೇಟ್ ತರಬೇತುದಾರರು ಮತ್ತು ವೃತ್ತಿ ಮಾರ್ಗದರ್ಶಕ ಪ್ರೊ.ಶಂಕರ್ ಬೆಳ್ಳೂರ್ ತಿಳಿಸಿದರು.

ಮೈಸೂರಿನ ಸಾತಗಳ್ಳಿಯ ವಿದ್ಯಾಶಂಕರ ಬಡಾವಣೆಯಲ್ಲಿರುವ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ (ಮೈಸೂರು ಪೂರ್ವ) ಅಧೀನದ ಕೊಡಗು ಮಾಡೆಲ್ ಸ್ಕೂಲ್‌ನಲ್ಲಿ ಹಮ್ಮಿಕೊಂಡಿರುವ ವಿಜ್ಞಾನ ವಸ್ತು ಪ್ರದರ್ಶನದ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ '10 ಮತ್ತು 12ನೇ ತರಗತಿ ಪೂರ್ಣಗೊಂಡ ನಂತರ ಯಶಸ್ವಿ ವೃತ್ತಿಜೀವನಕ್ಕಾಗಿ ಸರಿಯಾದ ಆಯ್ಕೆ ಮಾಡುವುದು ಹೇಗೆ?' ಎಂಬುದರ ಕುರಿತ ಉಪನ್ಯಾಸದಲ್ಲಿ ಅವರು ವೃತ್ತಿ ಮಾರ್ಗದರ್ಶನ ನೀಡಿದರು.

ಮಕ್ಕಳು ಭವಿಷ್ಯದಲ್ಲಿ ಯಾವ ವೃತ್ತಿ ಆಯ್ಕೆ ಮಾಡಿಕೊಳ್ಳಬೇಕೆಂಬ ಸ್ಪಷ್ಟತೆ ಮೂಡಿಸಲು ಪೋಷಕರು ಸ್ಫೂರ್ತಿಯಾಗಿ ನಿಲ್ಲಬೇಕು. ನಮ್ಮ ಶಿಕ್ಷಣ ಕೇವಲ ಅಂಕಗಳಿಕೆಗೆ ಸೀಮಿತವಾಗದೇ ಜ್ಞಾನ ಮತ್ತು ಕೌಶಲ್ಯ ವೃದ್ಧಿಗೆ ಪೂರಕವಾಗಿರಬೇಕು. ಸಮಸ್ಯೆ ಪರಿಹರಿಸುವ ಜ್ಞಾನ ಇರುವವರು ಪ್ರಸ್ತುತ ಅಗತ್ಯವಾಗಿದ್ದಾರೆ. ಹಾಗಾಗಿ ಸಮಸ್ಯೆ ಅರಿತು ಪರಿಹಾರ ಹುಡುಕುವ ನಾಯಕತ್ವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವರ್ಲ್ಡ್ ಎಕನಾಮಿಕ್ ಫೋರಮ್ ವತಿಯಿಂದ 2018ರಲ್ಲಿ ಒಂದು ಜಾಬ್ಸ್ ವರದಿ ಬಿಡುಗಡೆ ಮಾಡಿದೆ. ಆ ಪ್ರಕಾರ ಇನ್ನು 2ರಿಂದ 3 ವರ್ಷಕ್ಕೆ ಉದ್ಯೋಗಗಳಲ್ಲಿ ಶೇ.52ಕ್ಕೂ ಅಧಿಕವಾಗಿ ಯಂತ್ರಗಳ (ರೋಬೋಟ್) ಪಾಲಾಗಲಿದೆ. ಕೇವಲ ಶೇ.48ರಷ್ಟು ಉದ್ಯೋಗಾವಕಾಶಗಳು ಮಾತ್ರ ನಮಗೆ ದೊರೆಯಲಿವೆ ಎಂದು ಈ ವರದಿ ಹೇಳಿದೆ ಹಾಗಾಗಿ ಉದ್ಯೋಗಾವಕಾಶ ಕ್ಷೇತ್ರದಲ್ಲಿ ಇರುವ ಸವಾಲು ಅರಿತು ನಾವು ಸಿದ್ಧರಾಗಬೇಕು. ಈ ಹಿನ್ನೆಲೆಯಲ್ಲಿ ವಿದ್ಯಾಭ್ಯಾಸದ ಸಂದರ್ಭದಲ್ಲೇ ವೃತ್ತಿ ಜೀವನಕ್ಕೆ ತಯಾರಿ ನಡೆಸಬೇಕಿದೆ ಎಂದು ಹೇಳಿದರು.

ದೆಹಲಿ ವಿಶ್ವವಿದ್ಯಾನಿಲಯದಲ್ಲಿ ಕಲಾ ವಿಷಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ ಹಾಗಾಗಿ ಎಲ್ಲಾ ವಿಷಯಕ್ಕೂ ತನ್ನದೇ ಆದ ಪ್ರಾಮುಖ್ಯ ಇದ್ದೇ ಇದೆ. ಗಣಿತ ಮತ್ತು ವಿಜ್ಞಾನದಲ್ಲಿ ಹೆಚ್ಚು ಅಂಕಗಳಿಸದೇ ಹೋದವರು ದಡ್ಡರು ಎಂದುಕೊಳ್ಳುವುದು ತಪ್ಪು ಅಭಿಪ್ರಾಯವಾಗಿದ್ದು, ಬುದ್ಧಿವಂತಿಕೆಗೆ ಬಹುಮುಖಿ ಆಯಾಮಗಳಿವೆ. ಈ ನಿಟ್ಟಿನಲ್ಲಿ ನಮ್ಮ ಬುದ್ಧಿವಂತಿಕೆ ಎಲ್ಲಿದೆ ಎಂಬುದನ್ನು ನಾವು ಕಂಡುಕೊಳ್ಳಬೇಕು. ಸ್ಟೆಮ್ (ಸೈನ್ಸ್, ಟೆಕ್ನಾಲಜಿ, ಇಂಜಿನಿಯರಿಂಗ್ ಅಂಡ್ ಮ್ಯಾಕ್ಸ್) ಈ ವಿಷಯದಲ್ಲಿನ ಪರಿಣತಿಗೆ ಈಗ ಉದ್ಯಮಗಳಲ್ಲಿ ಆದ್ಯತೆ ನೀಡುತ್ತಿದ್ದು, ಇದೀಗ ಇದರ ವ್ಯಾಪ್ತಿಗೆ ಕಲಾ ವಿಷಯವನ್ನೂ ಸೇರ್ಪಡೆ ಮಾಡಲಾಗಿದೆ ಎಂದು ವಿವರಿಸಿದರು.

ಧನಾತ್ಮಕ ಚಿಂತನೆಗಳಿಂದ ಯಶಸ್ಸಿಗೆ ಪೂರಕ ವಾತಾವರಣ ನಿರ್ಮಾಣವಾಗಲಿದೆ. ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಓದಿದರೆ ಮಾತ್ರ ಸಾಧನೆ ಮಾಡಲು ಸಾಧ್ಯ ಎಂಬುದು ಸುಳ್ಳು ಎಂಬುದಕ್ಕೆ ಹಲವು ಸಾಧಕರು ನಿದರ್ಶನವಾಗಿ ನಮ್ಮ ಮುಂದಿದ್ದಾರೆ. ಜೀವನದಲ್ಲಿ ಗುರಿ ಇದ್ದರೆ ಮಾತ್ರ ಸಮಯ ಪಾಲನೆ ಮಾಡುತ್ತಾರೆ. ಹಾಗಾಗಿ ಪ್ರತಿಯೊಬ್ಬರಲ್ಲೂ ಗುರಿಯ ಬಗ್ಗೆ ಸ್ಪಷ್ಟತೆ ಹೊಂದಬೇಕು ಎಂದು ಸಲಹೆ ನೀಡಿದರು.

ಶ್ರೀ ಕಾವೇರಿ ಕೊಡವ ಅಸೋಸಿಯೇಷನ್‌ನ (ಮೈಸೂರು ಪೂರ್ವ) ಕಾರ್ಯದರ್ಶಿ ಕೆ.ಎಂ.ಬೆಳ್ಳಿಯಪ್ಪ ಶಾಲೆಯ ಶಿಕ್ಷಾ ಕೌನ್ಸಿಲ್‌ನ ಸದಸ್ಯೆ ಡಾ.ಕೆ.ಎಸ್.ಮುತ್ತಮ್ಮ, ಆಡಳಿತಾಧಿಕಾರಿ ಕಾವೇರಿ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಹಾಜರಿದ್ದರು.

'ಪ್ರೊ.ಜಿ.ಹೆಚ್.ನಾಯಕ–88, ವಿಚಾರ ಸಂಕಿರಣ

ಜಿ.ಹೆಚ್.ನಾಯಕರದ್ದು ಬಾಂಧವ್ಯ ಬೆಸೆಯುವಂತಹ ಬರಹ: ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅಭಿಮತ



ಮೈಸೂರು, ಸೆ.23(ಎಸ್‌ಬಿಡಿ)– ಮೈಸೂರಿನ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗ ಹಾಗೂ ಬೆಂಗಳೂರಿನ ಅಭಿನವ ಬಳಗದ ಸಹಯೋಗದಲ್ಲಿ 'ಪ್ರೊ.ಜಿ.ಹೆಚ್. ನಾಯಕ–88, ಕನ್ನಡ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು.

ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಪರಸ್ಪರ ಭೇಟಿ, ಮಾತುಕತೆ, ಒಡನಾಟಗಳ ಕೊರತೆಯಿಂದ ಸಂಬಂಧಗಳು ಕ್ಷೀಣಿಸುತ್ತಿವೆ. ದ್ವೇಷ, ಅಸಹನೆ, ಅಸೂಯೆ ಹೆಚ್ಚಾಗುತ್ತಿದೆ. ಈ ಪರಿಸ್ಥಿತಿಯಲ್ಲಿ ಪ್ರೀತಿಯಿಂದ ಮಾತ್ರ ಬಾಂಧವ್ಯ ಉಳಿಸಿಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಮಾನವ ಸಂಬಂಧವನ್ನು ಗೌರವ ಘನತೆಯೊಂದಿಗೆ ಉಳಿಸಿಕೊಳ್ಳಬೇಕು ಎಂಬುದನ್ನು ಪ್ರೊ.ಜಿ.ಹೆಚ್.ನಾಯಕರ ಬದುಕು ಬರಹಗಳಿಂದ ಕಲಿಯಬಹುದು. ಕನ್ನಡ ಸಾಹಿತ್ಯ ಪರಂಪರೆಯೊಂದಿಗೆ ಆಧುನಿಕ ಸಾಹಿತ್ಯವನ್ನು ಒಡಗೂಡಿಸಿಕೊಂಡು ಕೃಷಿ ಮಾಡಿದ ಕೆಲವೇ ಸಾಹಿತಿಗಳಲ್ಲಿ ಅವರೂ ಒಬ್ಬರಾಗಿದ್ದರು ಎಂದರು.

ಜಿ.ಹೆಚ್.ನಾಯಕರು ಆಧುನಿಕ ಮನೋಭಾವ ಹೊಂದಿದವರಾಗಿದ್ದರೂ ತಾವು ನಂಬಿದ್ದ ಮೌಲ್ಯಗಳನ್ನು ಕೊನೆಯವರೆಗೂ ಉಳಿಸಿಕೊಂಡಿದ್ದರು. ತಮ್ಮ ವಿಚಾರಗಳನ್ನು ನಿಷ್ಠುರವಾಗಿ ಬರವಣಿಗೆ ರೂಪದಲ್ಲಿ ವ್ಯಕ್ತಪಡಿಸುತ್ತಿದ್ದರು. ಆದರೆ ಎಂದಿಗೂ ಸೌಜನ್ಯದ ಎಳೆ ದಾಟದೆ, ಮಾನವೀಯ ಸಂಬಂಧಗಳನ್ನು ಉಳಿಸಿಕೊಂಡಿದ್ದರು. ಅಂತರಂಗದ ಚೆಲುವನ್ನು ಉಳಿಸಿಕೊಂಡಿದ್ದ ಮಹಾವಿಮರ್ಶಕ ಪ್ರೊ.ಜಿ.ಎಚ್.ನಾಯಕರ ಹೆಸರಿನಲ್ಲಿ ಈ ವಿಚಾರ ಸಂಕಿರಣ ಆಯೋಜಿಸಿರುವುದು ಹೆಮ್ಮೆಯ ಸಂಗತಿ ಎಂದು ಶ್ಲಾಘಿಸಿದರು.

ಪ್ರೊ.ಜಿ.ಹೆಚ್ ನಾಯಕರ ಒಡನಾಡಿ ಪ್ರೊ.ಎನ್.ಬೋರಲಿಂಗಯ್ಯ ಮಾತನಾಡಿ, ನಾಯಕರು ವಿಮರ್ಶೆಯ ಮುತ್ಸದ್ಧಿಯಾಗಿದ್ದರು. ದ್ವೇಷ ಬಿಟ್ಟು ಪ್ರೀತಿಯಿಂದ ದೇಶ ಕಟ್ಟಬೇಕೆಂಬುದು ಅವರ ಧೋರಣೆಯಾಗಿತ್ತು. ಸಾಹಿತ್ಯದ ಮೂಲಕ ಸ್ನೇಹ ಸಂಪದ ಮೆರೆದರು. ಅವರ ಸ್ನೇಹದಲ್ಲಿ ನಿಷ್ಕಲ್ಮಶ ಪ್ರೀತಿ, ವಾತ್ಸಲ್ಯಪೂರಿತ ಹೃದಯವಿತ್ತು. ವಿಮರ್ಶೆಯ ವಿಮರ್ಶೆ ನಿರಂತರವಾಗಿರಬೇಕು. ಈ ನಿಟ್ಟಿನಲ್ಲಿ ಜಿ.ಹೆಚ್.ನಾಯಕರ ಸಾಹಿತ್ಯ ಮತ್ತು ವಿಮರ್ಶೆ ಕುರಿತು ಹೆಚ್ಚೆಚ್ಚು ವಿಚಾರ ಸಂಕಿರಣ ನಡೆಸುವ ಮೂಲಕ ಅವರ ಸಾಹಿತ್ಯದ ಬದುಕನ್ನು ಜೀವಂತವಾಗಿರಿಸಬೇಕು ಎಂದು ಆಶಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ.ಟಿ.ವಿಜಯಲಕ್ಷ್ಮೀ ಮುರಳೀಧರ್ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ ಜಿ.ಹೆಚ್.ನಾಯಕರ ಬದುಕು–ಬರಹವನ್ನು ಬಣ್ಣಿಸಿದರು. ಜಿ.ಹೆಚ್ ನಾಯಕರ ಪುತ್ರಿ ಶ್ರೀಮತಿ ಕೀರ್ತಿ ನಾಯಕ್ ತಮ್ಮ ತಂದೆಯೊಂದಿಗಿದ್ದ ಮೌಲ್ಯಯುತ ಕ್ಷಣಗಳನ್ನು ನೆನೆದರು. ಇದೇ ವೇಳೆ ಜಿ.ಹೆಚ್.ನಾಯಕ್ ಅವರ ಧರ್ಮಪತ್ನಿ ಶ್ರೀಮತಿ ಮೀರಾನಾಯಕ್, 'ನ್ಯಾಯ ನಿಷ್ಠೂರಿ' ನುಡಿ ಹೊತ್ತಿಗೆ ಲೋಕಾರ್ಪಣೆಗೊಳಿಸಿದರು. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಹೆಚ್.ಆರ್.ತಿಮ್ಮೇಗೌಡ, ಅಭಿನವ ಬಳಗದ ನ.ರವಿಕುಮಾರ್, ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ.ವಿನೋದಮ್ಮ, ಎಂ.ನಾಗೇಶ್, ಕಿರಣ್‌ಕುಮಾರ್, ಮನೋಜ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.


ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 24-09-2023

ಎಸ್.ಪ್ರಕಾಶ್ ಬಾಬು, ಮೊ: 9844463930

ಮೈಸೂರಿನ ಮನೆ ಮನೆ ಮಾದೇಗೌಡರಿಗೆ ‘ಚುಂಚಶ್ರೀ ಪ್ರಶಸ್ತಿ’



“ಜೂನ್ 5ರಂದು ಅಂತರರಾಷ್ಟ್ರೀಯ ಪರಿಸರ ದಿನಾಚರಣೆ. ಅಂದೇ ಮಾದೇಗೌಡರ ಜನ್ಮದಿನವಾಗಿರುವುದರಿಂದ ಪ್ರತಿವರ್ಷ, ಗಿಡ ನೆಡುವ ಕಾರ್ಯಕ್ರಮದ ಮೂಲಕ ಜನ್ಮ ದಿನಾಚರಣೆ ಆಚರಿಸುತ್ತಾರೆ. ಜೂನ್ 5ಕ್ಕೆ 81ವರ್ಷ ಪೂರೈಸಿ 82ನೇ ವರ್ಷಕ್ಕೆ ಕಾಲಿಟ್ಟಿರುವ ಅವರ ಅವಿರತ ಜನಸೇವಾ ಕಾರ್ಯ ಪರಿಗಣಿಸಿ, ಆದಿಚುಂಚನಗಿರಿ ಮಹಾಸಂಸ್ಥಾನದ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಭಾನುವಾರ (ಸೆಪ್ಟೆಂಬರ್ 24) ಆದಿಚುಂಚನಗಿರಿ ಈ ಕ್ಷೇತ್ರದಲ್ಲಿ ನಡೆಯಲಿರುವ ಭವ್ಯ ಸಮಾರಂಭದಲ್ಲಿ ಡಾ. ಮಾದೇಗೌಡರಿಗೆ ‘‘ಚುಂಚಶ್ರೀ’’ ಪ್ರಶಸ್ತಿ ನೀಡಿ ಗೌರವಿಸುತ್ತಿದ್ದಾರೆ.



ಪ್ರಸ್ತುತ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ನಿವೇಶನ ಪಡೆಯುವುದು ಅತ್ಯಂತ ಅದೃಷ್ಟದ ಮಾತು. ಅರ್ಜಿ ಹಾಕಿ ಮೂರು ದಶಕದಿಂದ ಕಾದಿರುವವರು ಇದ್ದಾರೆ. ಅಂಥದರಲ್ಲಿ ಇದೇ ಸಂಸ್ಥೆಯಿಂದ ಮನೆ ಬಾಗಿಲಿಗೇ ಬಂದು ನಿವೇಶನ ಕೊಟ್ಟರು ಎಂದರೆ ಏಕ್‌ದಂ ನಂಬುವುದು ಕಷ್ಟ! ಅದೂ ಕೇವಲ ಒಂದೂವರೆ ಸಾವಿರ ರೂ.ಗೆ ನಿವೇಶನ ಕೊಟ್ಟಿದ್ದರು ಎಂದರೆ ನಂಬುವುದೇ ಇಲ್ಲ ಹೌದು ಸ್ವಾಮಿ, ನಮ್ಮ ನಡುವೆಯೇ ಸಾಮಾನ್ಯರಲ್ಲಿ ಸಾಮಾನ್ಯರಂತೆ ಬದುಕು ಸಾಗಿಸುತ್ತಿರುವ ಡಿ. ಮಾದೇಗೌಡರು 35 ವರ್ಷದ ಹಿಂದೆ ಪವಾಡಸದೃಶ್ಯ ರೀತಿ “ಆಶಾಮಂದಿರ” ಯೋಜನೆಯಡಿ ಎಲ್ಲವನ್ನೂ ಸಾಕಾರಗೊಳಿಸಿಕೊಟ್ಟರು.

ಬಡವರು ಸ್ವಂತ ಮನೆ ಹೊಂದುವುದನ್ನು ಯೋಚಿಸಲೂ ಆಗದ ಕಾಲದಲ್ಲಿ ಅವರು ಬಡವರ ಮನೆ ಬಾಗಿಲಿಗೆ ಮನೆ, ನಿವೇಶನದ ಹಕ್ಕುಪತ್ರ ಕೊಟ್ಟು ಬಂದ ಆದರ್ಶ ರಾಜಕಾರಣಿ. ಹೀಗಾಗಿ ಡಿ.ಮಾದೇಗೌಡರನ್ನು ಈಗಲೂ ಜನ **‘ಮನೆ ಮಾದೇಗೌಡ’ರು** ಎಂದು ಗೌರವದಿಂದ ಕರೆಯುತ್ತಾರೆ. ಡಿ.ಮಾದೇಗೌಡರ ಉದಾರ ಕೊಡುಗೆಯಿಂದ ಸ್ವಂತ ಮನೆ ಇಲ್ಲದೆ, ಹತ್ತಾರು ವರ್ಷದಿಂದ ಬಾಡಿಗೆ ಮನೆಯಲ್ಲೇ ವಾಸಿಸುತ್ತಿದ್ದ ಲಕ್ಷಾಂತರ ಜನ ಇಂದು ನೆಮ್ಮದಿಯಾಗಿ ಸ್ವಂತ ಸೂರಿನಲ್ಲಿ ವಾಸಿಸುತ್ತಿದ್ದಾರೆ.

ಯಜಮಾನ!: ವಂಶಪಾರಂಪರ್ಯವಾಗಿ ಡಿ.ಮಾದೇಗೌಡರದ್ದು ಯಜಮಾನರ ವಂಶ. ಮೈಸೂರಿನ ಕುಂಬಾರಕೊಪ್ಪಲಿನ 200 ವರ್ಷದ, 5 ತಲೆಮಾರುಗಳಿಂದಲೂ ಯಜಮಾನಿಕೆ ನಡೆಸಿಕೊಂಡು ಬಂದವರು. ಯಜಮಾನ್ ಬಸವೇಗೌಡರ ಮಗ ನಿಂಗೇಗೌಡ, ನಿಂಗೇಗೌಡರ ಮಗ ಬೋರೇಗೌಡ, ಬೋರೇಗೌಡ ಚನ್ನಮ್ಮ ದಂಪತಿ ಮಗನೇ ಇವರ ತಂದೆ ದೊಡ್ಡ ತಮ್ಮೇಗೌಡರು. ಸ್ವಾತಂತ್ರ್ಯ ನಂತರ ರಚನೆಯಾದ ಮೈಸೂರು ಪುರಸಭೆಯ ಸದಸ್ಯರಾಗಿದ್ದವರು. ದೊಡ್ಡ ತಮ್ಮೇಗೌಡ ಮತ್ತು ಕಲ್ಯಾಣಮ್ಮ ದಂಪತಿಯ ಮಗನೇ ಈ **‘ಮನೆ ಡಿ.ಮಾದೇಗೌಡರು’**. ಸುಮಾರು ವರ್ಷ ಮಕ್ಕಳಿಲ್ಲದ ದಂಪತಿ ಮಲೈ ಮಹದೇಶ್ವರ ಬೆಟ್ಟಕ್ಕೆ ಕಾಲ್ನಡಿಗೆಯಲ್ಲಿ ಹೆಡಗೆ (ಅಯ್ಯಪ್ಪಸ್ವಾಮಿಯ ಇರುಮುಡಿಯಂತೆ) ಹರಕೆ ಹೊತ್ತು ಹಡೆದ ಮಗನೇ ಮಾದೇಗೌಡರು. ಮಲೈ ಮಾದಪ್ಪನ ವರಪ್ರಸಾದದಿಂದ 1942ರ ಜೂ.5ರಂದು ಜನಿಸಿದರು.

ಗೌಡರ ನೆಲೆ: ‘ಕ್ವಿಟ್ ಇಂಡಿಯಾ’ ಚಳವಳಿ ಕಾಲದಲ್ಲಿ ಹುಟ್ಟಿದ ಕಾರಣಕ್ಕೋ ಏನೋ, ಮಾದೇಗೌಡರದು ಬಾಲ್ಯದಿಂದಲೂ ಸ್ವತಂತ್ರ ಮನೋಭಾವನೆ. ಮೈಸೂರು ನಗರಕ್ಕೆ ಹತ್ತಿರವಿದ್ದರೂ ಕುಂಬಾರಕೊಪ್ಪಲು ಅತ್ಯಂತ ಕುಗ್ರಾಮವಾಗಿತ್ತು. 50ರ ದಶಕದಲ್ಲಿ 300 ನಾಡ ಹೆಂಚಿನ ಮನೆಗಳಿದ್ದವು. ಅವುಗಳಲ್ಲಿ ಮಣ್ಣಿನ ತಡಿಕೆ ಮನೆಗಳೇ ಹೆಚ್ಚಿದ್ದವು. ಒಂದು ಎತ್ತಿನ ಚಕ್ಕಡಿ ಓಡಾಡುವಷ್ಟು ಇದ್ದ ಓಣಿಯೇ, ಮುಖ್ಯರಸ್ತೆಯಾಗಿತ್ತು. ಅಲ್ಲಿನ ಮಾರಿಗುಡಿಯಲ್ಲಿ ಇದ್ದದ್ದು ಏಕೈಕ ಪ್ರಾಥಮಿಕ ಶಾಲೆ. ಇಲ್ಲಿ ಭಕ್ತಾದಿಗಳ ಜಂಗುಳಿ ಹೆಚ್ಚಾದರೆ, ಯಜಮಾನ್ ಶ್ರೀನಿವಾಸ್ ಗೌಡರ ಜಗುಲಿಯೇ ಮಕ್ಕಳ ಪಾಠಶಾಲೆ. ಕೂಲಿಮಠದ ಗುರುವರ್ಯರಾದ ಚಂದ್ರಶೇಖರಯ್ಯ, ಕುಂಬಾರಕೊಪ್ಪಲಿನ ಮಕ್ಕಳಿಗೆ ಮರಳಿನಲ್ಲಿ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. ಹೀಗೇ ಪ್ರಾಥಮಿಕ ಶಿಕ್ಷಣ ಪೂರ್ಣಗೊಳಿಸಿದ ಮಾದೇಗೌಡರು ಮಾಧ್ಯಮಿಕ ಶಾಲೆಗೆ ಒಂಟಿಕೊಪ್ಪಲಿನ ಸರ್ಕಾರಿ ಶಾಲೆ ಸೇರಿದರು. ಪ್ರೌಢಶಿಕ್ಷಣವನ್ನು ಜಯಲಕ್ಷ್ಮಿಪುರಂನಲ್ಲಿರುವ ಮಹಾಜನ ಶಾಲೆಯಲ್ಲಿ ಪೂರೈಸಿದರು.

ಒಂಟಿಕೊಪ್ಪಲಿನ ಸರ್ಕಾರಿ ಶಾಲೆಯಲ್ಲಿ ಓದುವಾಗ ತಮ್ಮ ಸಮಕಾಲೀನ ಹುಡುಗರನ್ನೆಲ್ಲಾ ಸೇರಿಸಿಕೊಂಡು ಕುಂಬಾರಕೊಪ್ಪಲಿನಲ್ಲಿ ಫುಟ್ಬಾಲ್ ಆಡುವ ಮೈದಾನ ರೂಪಿಸಿದರು, ಅದೀಗ ಕೆಂಪೇಗೌಡ ಕ್ರೀಡಾಂಗಣವಾಗಿ ಕಂಗೊಳಿಸುತ್ತಿದೆ. ಹಾಗೇ ಮಹಾಜನ ಶಾಲೆಯಲ್ಲಿ ಪ್ರೌಢಶಿಕ್ಷಣ ವ್ಯಾಸಂಗ ಮಾಡುವಾಗ ಭಾರತ ಸೇವಾದಳ ಸೇರಿ ದಸರಾ ಜಂಬೂಸವಾರಿಯಲ್ಲಿ ಭಾಗವಹಿಸಿದ್ದಲ್ಲದೆ, ಬೆಳಗೊಳ ದಾಸೇಗೌಡರ ಮಗ ಶ್ರೀನಿವಾಸ್‌ರೊಂದಿಗೆ ಸೈಕಲ್‌ನಲ್ಲಿ “ನೆಹರುಜ್ಯೋತಿ” ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ರಾಜ್ಯ ಅಧ್ಯಕ್ಷ ನಾ.ಸು.ಹರ್ಡೇಕರ್ ನೇತೃತ್ವದಲ್ಲಿ ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ಭಾರತ ಸೇವಾದಳದ ಸಮಾವೇಶ ಮತ್ತು ಬೊಂಬಾಯಿಯಲ್ಲಿ ನಡೆದ 5ನೇ ರಾಷ್ಟ್ರೀಯ ಕಾಂಗ್ರೆಸ್ ಸೇವಾದಳದಲ್ಲೂ ಭಾಗವಹಿಸಿದ್ದರು.

ಶಿಸ್ತುಬದ್ಧ ತಯಾರಿ: ಶಾಲಾ ದಿನಗಳಲ್ಲೇ ಒಂಟಿಕೊಪ್ಪಲಿನಲ್ಲಿದ್ದ ರಾಮಕೃಷ್ಣ ಆಶ್ರಮಕ್ಕೆ ನಿತ್ಯ ಹೋಗುತ್ತಿದ್ದರಿಂದ ಸ್ವಾಮಿ ವಿವೇಕಾನಂದರ ಪ್ರಭಾವ ಬಾಲಕ ಮಾದೇಗೌಡರ ಮೇಲೆ ಭಾರಿ ಪರಿಣಾಮ ಬೀರಿತು. ಭಾರತ ಸೇವಾದಳದಲ್ಲಿ ಕಲಿತ ಶಿಸ್ತು ಮತ್ತು ರಾಮಕೃಷ್ಣಪರಮಹಂಸರ ತತ್ವಬೋಧನೆಗಳಿಂದ ಅವರ ಮನದಲ್ಲಿ ಸಮಾಜೋದ್ಧಾರದ ಕನಸುಗಳ ಬಿತ್ತನೆಯಾಯಿತು. ಬಡಜನರಿಗೆ ಏನಾದರೂ ಮಾಡಬೇಕೆಂಬ ಸಂಕಲ್ಪ ಮಾಡಿದರು. ಮೊದಲಿಗೆ ಕುಂಬಾರಕೊಪ್ಪಲಿನಲ್ಲಿ ಶಿಶುವಿಹಾರ ಸ್ಥಾಪಿಸಲು ನಿರ್ಧರಿಸಿದರು. ಅಂದಿನ ಪುರಸಭೆ ಅಧ್ಯಕ್ಷರಾದ ಸೌಂದರಮ್ಮ ವೆಂಕಟೇಶ್ (ಮಾತೃಮಂಡಳಿ ಶಾಲೆ ಸಂಸ್ಥಾಪಕಿ) ರಿಂದ ನಿವೇಶನ ಮಂಜೂರು ಮಾಡಿಸಿಕೊಂಡು ಶಿಶುವಿಹಾರ ನಿರ್ಮಿಸಿದರು.

ಸಾರ್ವಜನಿಕ ಕ್ಷೇತ್ರ ಆಯ್ಕೆ: ಕಾನೂನು ಪದವಿ ಪಡೆದ ನಂತರ ಕೆಲಕಾಲ ವಕೀಲಿ ವೃತ್ತಿ ಮಾಡಿದ ಮಾದೇಗೌಡರು, ಹೆಚ್.ಡಿ.ಕೋಟೆಯ ಕ್ಯಾತನಹಳ್ಳಿಯಲ್ಲಿದ್ದ ಸಾರ್ವಜನಿಕ ಹಾಸ್ಟೆಲ್ ಸುಬ್ಬಣ್ಣನವರ ಶಾಲೆಯಲ್ಲಿ ಶಿಕ್ಷಕ ವೃತ್ತಿಯ ಬದುಕು ಪ್ರಾರಂಭಿಸಿದರು. ಶಾಶ್ವತ ಕಟ್ಟಡವಿಲ್ಲದೆ ಹುಚ್ಚೇಗೌಡ ಎಂಬುವರ ದನದ ಕೊಟ್ಟಿಗೆಯಲ್ಲಿ ನಡೆಯುತ್ತಿದ್ದ ಶಾಲೆಗೆ ಗ್ರಾಮಸ್ಥರ ನೆರವಿನಿಂದ ಎಂಟು ತಿಂಗಳಲ್ಲಿ ಸೂರು ಕಲ್ಪಿಸಿದ ಶ್ರೇಯಸ್ಸು ಮಾದೇಗೌಡರಿಗೆ ಸಲ್ಲುತ್ತದೆ. 1970ರಲ್ಲಿ ಸರ್ಕಾರಿ ಗೆಜೆಟೆಡ್ ಅಧಿಕಾರಿಯಾದರು. 1973ರಲ್ಲಿ ಕೆ.ಆರ್.ಮಿಲ್‌ನಲ್ಲಿ ಸಹಾಯಕ ಉದ್ಯೋಗಾಧಿಕಾರಿಯಾಗಿ ಸೇವೆ ಆರಂಭಿಸಿದರು. ನಂತರ ಚಿಕ್ಕಮಗಳೂರು ಮತ್ತು ಮಂಡ್ಯ ಜಿಲ್ಲಾ ಉದ್ಯೋಗಾಧಿಕಾರಿಯಾಗಿ ಸೇವೆ ಸಲ್ಲಿಸಿದರು. 1975ರಲ್ಲಿ ಸರ್ಕಾರಿ ಸೇವೆ ಬೇಸರವಾಗಿ, ಸಾರ್ವಜನಿಕ ಕ್ಷೇತ್ರವೇ ತಮಗೆ ಸೂಕ್ತ ಎಂದು ರಾಜೀನಾಮೆ ಕೊಟ್ಟು ಜನಸೇವೆಗೆ ನಿಂತರು.

ಕಲ್ಯಾಣ ಕಾರ್ಯ: ಕುಂಬಾರಕೊಪ್ಪಲಿನ ಜನ ಮದುವೆ ಮಾಡಬೇಕೆಂದರೆ, ದೂರದ ಬಲಮುರಿ ಕ್ಷೇತ್ರ ಅಥವಾ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿ ಕಡೆ ಎತ್ತಿನ ಗಾಡಿ ಮಾಡಿಕೊಂಡು ಹೋಗುತ್ತಿದ್ದರು. ಹೀಗೇ ಒಮ್ಮೆ ಮದುವೆ ಕಾರ್ಯ ಮುಗಿಸಿ ಬರುವಾಗ ಜೋರಾದ ಮಳೆಯಲ್ಲಿ ಸಿಲುಕಿದ ಎತ್ತಿನ ಗಾಡಿ ಹೊಳೆಯಲ್ಲಿ ಮಗುಚಿಕೊಂಡು ಒಂದೇ ಕುಟುಂಬದ ನಾಲ್ವರು ಮೃತರಾದರು. ಇಂಥ ದುರ್ಘಟನೆ ನಡೆಯಬಾರದೆಂದು 1982ರಲ್ಲಿ ಕುಂಬಾರಕೊಪ್ಪಲಿನ ಯುವಕರನ್ನೆಲ್ಲ ಸೇರಿಸಿಕೊಂಡು “ಕಾಮಧೇನು ಕಲ್ಯಾಣ ಮಂಟಪ ಟ್ರಸ್ಟ್” ಸ್ಥಾಪಿಸಿದರು. ಸಿಐಟಿಬಿಯಿಂದ 10 ಎಕರೆ ಭೂಮಿ ಮಂಜೂರು ಮಾಡಿಸಿಕೊಂಡು ಕಾಮಧೇನು ಕಲ್ಯಾಣ ಮಂಟಪ ಮತ್ತು ಕಲ್ಪತರು ಕಲ್ಯಾಣ ಮಂಟಪ ನಿರ್ಮಿಸಿದರು.

1989ರಲ್ಲಿ ನಡೆದ ರಾಜಕೀಯ ತಲ್ಲಣದಿಂದ ಸಿಐಟಿಬಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬಂದರು. ದುರದೃಷ್ಟವಶಾತ್ ಜನತಾ ಪರಿವಾರದ ಇಬ್ಭಾಗದಿಂದ ಜನಪ್ರಿಯತೆ ಕಳೆದುಕೊಂಡಿದ್ದ ಎಚ್.ಡಿ.ದೇವೇಗೌಡರ ಜನತಾ ಪಕ್ಷದಿಂದ ವಿಧಾನಸಭೆಗೆ ಸ್ಪರ್ಧಿಸಿ, ಸೋತರು. 1994ರ ವಿಧಾನಸಭೆಯಲ್ಲಿ ಜನತಾದಳದ ಟಿಕೆಟ್ ಸಿಗದೆ ಬಂಡಾಯವಾಗಿ ನಿಂತು ಸೋತರು. ಅಲ್ಲಿಗೆ ಜನರಿಂದ ನೇರವಾಗಿ ಆಯ್ಕೆಯಾಗುವ ಅದೃಷ್ಟ ತಮ್ಮ ಹಣೆಯಲ್ಲಿ ಬರೆದಿಲ್ಲ ಅಂತ ರಾಜಕೀಯವಾಗಿ ನೇಪಥ್ಯಕ್ಕೆ ಸರಿದಿದ್ದರು. ಆದರೆ, ಅಂದಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿ ರಾಜಕೀಯ ಮರು ಹುಟ್ಟು ಕೊಟ್ಟರು. ಮಾಜಿ ಶಾಸಕರಾದ ಎಚ್. ಗಂಗಾಧರನ್ ವಿಶೇಷ ಆಸ್ಥೆಯಿಂದ 2012ರ ಸೆಪ್ಟೆಂಬರ್ 8ರಂದು ಮೊದಲ ಬಾರಿ ಮಹದೇಶ್ವರರ ಜಯಂತಿಯನ್ನು ಮೈಸೂರಿನ ವಸ್ತುಪ್ರದರ್ಶನ ಆವರಣದಲ್ಲಿ ವೈಭವದಿಂದ ನಡೆಸಲಾಯಿತು. ಸುತ್ತೂರು ಶ್ರೀಗಳ ಸಮ್ಮುಖದಲ್ಲಿ ಅಂದಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರು ಸಮಾರಂಭದಲ್ಲಿ ಭಾಗವಹಿಸಿ, ಮಹದೇಶ್ವರ ಬೆಟ್ಟದಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸರ್ಕಾರ ನೆರವು ನೀಡುತ್ತದೆ ಎಂದು ಭರವಸೆ ನೀಡಿದ್ದರು. ಆ ಭರವಸೆಗಳು ಇದುವರೆಗೂ ಈಡೇರಿಲ್ಲ ಎಂಬುದು ಮಾದೇಗೌಡರ ಕೊರಗು.

ಹೆಬ್ಬಾಳು ಕೈಗಾರಿಕಾ ಪ್ರದೇಶಕ್ಕೆ ಬುನಾದಿ

ಮೊದಲಿಗೆ ಪಾಳುಬಿದ್ದಿದ್ದ ಹೆಬ್ಬಾಳಿನ ಶ್ರೀಲಕ್ಷ್ಮಿಕಾಂತಸ್ವಾಮಿ ದೇಗುಲದ ಜೀರ್ಣೋದ್ಧಾರ ಕಾರ್ಯವನ್ನು ಆದಿ ಚುಂಚನಗಿರಿ ಮಹಾಸಂಸ್ಥಾನದ ಶ್ರೀಬಾಲಗಂಗಾಧರನಾಥಸ್ವಾಮಿ ಮಾರ್ಗದರ್ಶನದಲ್ಲಿ ಪೂರ್ಣಗೊಳಿಸಿದರು. 1919ರಲ್ಲಿ ಜರ್ಮನಿಯಲ್ಲಿ ಸ್ಥಾಪಿತವಾದ ಯೂತ್ ಹಾಸ್ಟೆಲ್ ಅಸೋಸಿಯೇಷನ್ ಭಾರತದಲ್ಲಿ ಮೊದಲ ಬಾರಿ ಮೈಸೂರಿನಲ್ಲಿ 1949ರಲ್ಲಿ ಆರಂಭವಾಯಿತು. ಇದು 1954ರಲ್ಲಿ ದೆಹಲಿಗೆ ಸ್ಥಳಾಂತರವಾದಾಗ 1975ರಲ್ಲಿ ಮತ್ತೆ ಮೈಸೂರಿನಲ್ಲಿ ನೆಲೆ ಒದಗಿಸಿಕೊಟ್ಟವರು ಡಿ. ಮಾದೇಗೌಡರು. ಯೂತ್ ಹಾಸ್ಟೆಲ್ ಅಸೋಸಿಯೇಷನ್ ರಾಜ್ಯಾಧ್ಯಕ್ಷರಾಗಿದ್ದಾಗ ಗೋಕುಲಂನಲ್ಲಿ ನಿವೇಶನ ಪಡೆದು ದೊಡ್ಡ ಕಟ್ಟಡ ನಿರ್ಮಾಣ ಮಾಡಿದರು. ಕಾರಣಾಂತರಗಳಿಂದ ಕನಕಪುರಕ್ಕೆ ಸ್ಥಳಾಂತರವಾಗುತ್ತಿದ್ದ ಕೈಗಾರಿಕಾಭಿವೃದ್ಧಿ ಯೋಜನೆ ಹೆಬ್ಬಾಳಿನಲ್ಲೇ ಸ್ಥಾಪಿತವಾಗುವಂತೆ ಮಾಡುವಲ್ಲಿಯೂ ಡಿ.ಮಾದೇಗೌಡರು ಬಹುವಾಗಿ ಶ್ರಮಿಸಿದರು. ಇಲ್ಲದಿದ್ದರೆ, ಏಷ್ಯಾದಲ್ಲೇ ಅತಿದೊಡ್ಡ ಕೈಗಾರಿಕಾ ಪ್ರದೇಶ ಎಂಬ ಹೆಗ್ಗಳಿಕೆ ಪಡೆದುಕೊಂಡಿರುವ ಹೆಬ್ಬಾಳು ಕೈಗಾರಿಕಾ ವಲಯ ಮೈಸೂರಿಗರ ಕೈತಪ್ಪಿ ಹೋಗುತ್ತಿತ್ತು.


ಆಶಾ ಮಂದಿರದ ರೂವಾರಿ

1983ರಲ್ಲಿ ಮೈಸೂರು ನಗರಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತರು. ಆದರೆ 1986ರ ಸೆಪ್ಟೆಂಬರ್‌ನಲ್ಲಿ ಸಿಐಟಿಬಿ (ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎಂಬ ಇಂದಿನ ಮೈಸೂರು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ–ಮುಡಾ) ಅಧ್ಯಕ್ಷರಾದರು. ಸಿಐಟಿಬಿ (ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ) ಕೊನೆಯ ಅಧ್ಯಕ್ಷರಾಗಿದ್ದ ಡಿ.ಮಾದೇಗೌಡರು ಹಿಂದೆಂದೂ ಕಾಣದಂಥ ಅಭಿವೃದ್ಧಿಯ ಸುಧೆಯನ್ನೇ ಮೈಸೂರು ನಗರದಲ್ಲಿ ಹರಿಸಿದರು. ತಮ್ಮ ಕನಸಿನ ಕೂಸಾದ “ಆಶಾ ಮಂದಿರ” ಯೋಜನೆ ಅಡಿ ದಟ್ಟಗಳ್ಳಿ (ರಾಮಕೃಷ್ಣನಗರ), ಬೋಗಾದಿ (ಶಾರದಾದೇವಿ ನಗರ), ಶ್ರೀರಾಮಪುರ (ವಿವೇಕಾನಂದ ನಗರ), ಚಿಕ್ಕ ಹರದನಹಳ್ಳಿ (ಅರವಿಂದ ನಗರ), ಹೆಬ್ಬಾಳು (ಲಕ್ಷ್ಮಿಕಾಂತ ನಗರ, ಸುಬ್ರಹ್ಮಣ್ಯ ನಗರ ಮತ್ತು ಹೆಬ್ಬಾಳು 1 ಮತ್ತು 2ನೇ ಹಂತ), ದೇವನೂರು (ರಾಜೀವನಗರ), ಕ್ಯಾತಮಾರನಹಳ್ಳಿ (ಸಿದ್ದಿಖಿ ನಗರ) ಮತ್ತು ಸಾತಗಳ್ಳಿಯಲ್ಲಿ 8 ಬಡಾವಣೆ ನಿರ್ಮಿಸಿ, 50ಸಾವಿರಕ್ಕೂ ಹೆಚ್ಚು ನಿವೇಶನ ಮತ್ತು ಮನೆಗಳನ್ನು ಹಂಚಿದರು.


ಮಕ್ಕಳ ಚಿತ್ರಕಥೆ

‘ಶ್ರೀ ಕೃಷ್ಣ’ ಹಾಗೂ ‘ಕರ್ಣ’ನ ಮಾತುಕತೆ ಹೀಗಿತ್ತು...!


–ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಕರ್ಣ ಹೇಳುತ್ತಾನೆ,"ನನಗೆ ಬಹಳ ಅನ್ಯಾಯವಾಗಿದೆ. ನಾನು ಕಾನೀನನಾಗಿದ್ದು (ಕಾನೀನ:– ಮದುವೆಯಾಗದ ಕನ್ಯೆಗೆ ಹುಟ್ಟಿದವ) ನನ್ನ ತಪ್ಪೇ..? ಹುಟ್ಟುತ್ತಲೇ ತಾಯಿ ತ್ಯಜಿಸಿದಳು. ರಾಜಪರಿವಾರದಲ್ಲಿ ಬೆಳೆಯಬೇಕಾದವನು ಸೂತನ ಮನೆಯಲ್ಲಿ ಬೆಳೆದೆ. ದ್ರೋಣನ ಬಳಿ ಸೂತಪುತ್ರನಾದ ಕಾರಣ ಪೂರ್ಣ ವಿದ್ಯೆ ದೊರೆಯಲಿಲ್ಲ. ಪರಶುರಾಮನು ಕೊಟ್ಟರೂ ಕೊನೆಗೆ ನಾನು ಕ್ಷತ್ರಿಯನೆಂಬ ಕಾರಣಕ್ಕೆ ಕಲಿತ ವಿದ್ಯೆ ಸರಿಯಾದ ಸಮಯದಲ್ಲಿ ಮರೆತುಹೋಗಲಿ ಎಂದು ಶಾಪ ಕೊಟ್ಟರು".




"ಅದರಲ್ಲಿ ನನ್ನ ತಪ್ಪೇನು..? ನಾನು ಕ್ಷತ್ರಿಯ ಎಂಬುದು ನನಗೇ ಗೊತ್ತಿರಲಿಲ್ಲವಲ್ಲಾ...!!! ಅಲ್ಲೆಲ್ಲೋ ಹುಡುಗನೊಬ್ಬ ಓಡಿ ಬಂದು ನನ್ನ ರಥಕ್ಕೆ ಸಿಲುಕಿದ. ನನ್ನ ತಪ್ಪೇನೂ ಇಲ್ಲ...ಅದು ಅಪಘಾತವಷ್ಟೆ. ಆದರೆ ಅವರಪ್ಪ ನನಗೆ ಶಾಪ ಕೊಟ್ಟ. ದ್ರೌಪದಿ ಸ್ವಯಂವರದಲ್ಲೂ ಸೂರ್ಯ ಪುತ್ರನಾದರೂ ನನಗೆ ಸೂತಪುತ್ರನೆಂಬ ಅವಮಾನವಾಯಿತು ಕುಂತಿಗೂ ಇತರ ಮಕ್ಕಳ ಬಗ್ಗೆಯೇ ಒಲವು. ಅವಧಿಗೆ ಸತ್ಯ ಹೇಳದೆ ನನ್ನ ಬಳಿ ಬಂದು ವರ ಕೇಳಿದಳು. ಆಯುಧಗಳ ಮರುಬಳಕೆಯನ್ನ ನಿಷೇಧಿಸಿಬಿಟ್ಟಳು. ಎಂದಿಗೂ ತಾಯಿಯಂತೆ ನಡೆಯದವಳಿಗೂ ನಾನು ಕೇಳಿದ್ದು ಕೊಟ್ಟೆ. ಕುರುಕುಲ ಸಿಂಹಾಸನವನ್ನೇರಬೇಕಾದವನು ದುರ್ಯೋಧನನ ಔದಾರ್ಯದ ರಾಜ್ಯವಾಳುತ್ತಿದ್ದೇನೆ."




ಭೀಷ್ಮರೆಂದಿಗೂ ನನ್ನನ್ನು ನನ್ನ ಯೋಗ್ಯತೆಗೆ ತಕ್ಕಂತೆ ನಡೆಸಿಕೊಳ್ಳಲಿಲ್ಲ. ಯುದ್ಧದ ಸ್ಥಿತಿಯಲ್ಲಿದ್ದಾಗಲೂ ನನಗೆ ಅವಮಾನ ಮಾಡಿ, ಅವರ ಸೇನಾಧಿಪತ್ಯದಲ್ಲಿ ಯುದ್ಧ ಮಾಡಲು ಮನಸಿಲ್ಲದವನಂತೆ ಮಾಡಿ ಹಿಂದೆ ಸರಿಸಿಬಿಟ್ಟರು. ದುರ್ಯೋಧನನ ಸ್ನೇಹಕ್ಕೆ ಇದೆಲ್ಲಾ ಸಹಿಸಿಕೊಂಡಿದ್ದೇನೆ. ಜೀವನ ಪೂರ್ತಿ ನನಗಾಗಿದ್ದು ಅನ್ಯಾಯ. ಈಗ ದುರ್ಯೋಧನ ಕೆಟ್ಟವನು ಎಂದರೆ...ಅದು ನಿಮಗಿರಬಹುದು..ನನಗಂತೂ ಅವನು ಯಾವಾಗಲೂ ಒಳ್ಳೆಯದನ್ನೇ ಮಾಡಿದ್ದಾನೆ. ದೇವರು ನನ್ನ ಪಾಲಿಗೆ ಇಲ್ಲಾ.....ದುರ್ಯೋಧನ ಎಂದಿಗೂ ನನ್ನ ಕೈ ಬಿಟ್ಟಿಲ್ಲ. ನಾನು ಅವನ ಪರವಾಗಿರುವುದರಲ್ಲಿ ತಪ್ಪೇನಿದೆ...?"



ಶ್ರೀ ಕೃಷ್ಣನು ಹೇಳುತ್ತಾನೆ..." ಅಯ್ಯಾ..ಕರ್ಣ.. ನಾನು ಹುಟ್ಟಿದ್ದು ಸೆರೆಮನೆಯಲ್ಲಿ. ಹುಟ್ಟುವ ಮೊದಲಿನಿಂದಲೂ ನನ್ನ ಸಾವು ಕಾದುಕುಳಿತಿತ್ತು. ಹುಟ್ಟಿದ ರಾತ್ರಿಯೇ ನಾನೂ ತಾಯಿಯಿಂದ ಬೇರಾದೆ. ನಿನಗಾದರೂ ಸೂತನ ಮನೆಯಲ್ಲಿದ್ದು ಶಿಕ್ಷಣ ದೊರೆಯಿತು. ಬಾಲ್ಯದಿಂದಲೇ ಖಡ್ಗಗಳ ಕಿಂಕಿಣಿ. ರಥ ಚಕ್ರಗಳ ಕಟ..ಕಟ..ಶಬ್ದ. ಕುದುರೆಗಳ ಕೆನೆಯುವಿಕೆ, ಧನುಷ್ಟೇಂಕಾರ, ಬಾಣ ಮಸೆಯುವ ಸದ್ದು, ಇವುಗಳನ್ನೆಲ್ಲಾ ಕೇಳಿಯೇ ಬೆಳೆದೆ. ನನಗೆ ಸಿಕ್ಕಿದ್ದು ಗೊಲ್ಲರ ಹಟ್ಟಿ... ಖಡ್ಗವೂ ಇಲ್ಲಾ... ರಥವೂ ಇಲ್ಲಾ..ಸಿಕ್ಕಿದ್ದು ಸಗಣಿ, ಗಂಜಲ, ಹಸು–ಕರುಗಳು. ಗೊಲ್ಲ ಹುಡುಗಿಯರು ಬೆನ್ನತ್ತಿ ಬರುತ್ತಿದ್ದರು. ಕಂಸನ ಕೊಲೆ ಪ್ರಯತ್ನಗಳು. ಸೈನ್ಯವೂ ಕಾಣೆ..ಶಿಕ್ಷಣವೂ ಇಲ್ಲ. ಹದಿ ವಯಸ್ಸಿನಲ್ಲೇ ಮಾವನನ್ನೇ ಕೊಂದ ಕೊಲೆಗಾರ ಎನಿಸಿಕೊಂಡೆ. ಜರಾಸಂಧನ ಆಕ್ರಮಣಕ್ಕೆ ಹೆದರಿ ಫಲವತ್ತಾದ ಯಮುನಾ ತೀರ ಬಿಟ್ಟು,ಊರುಬಿಟ್ಟು ಕಂಡರಿಯದ ಸಮುದ್ರ ತಲುಪಬೇಕಾಯ್ತು.



"ಎಲ್ಲದಕ್ಕೂ ನಾನೇ ಕಾರಣ, ಎಂದು ಊರಿನವರೆಲ್ಲಾ ಗೊಣಗಿಕೊಂಡಿದ್ದೂ ನನಗೆ ಗೊತ್ತು...ರಣಹೇಡಿಯೆಂಬ ಅಪವಾದವೂ ನನ್ನಮೇಲೆ...ನೀವೆಲ್ಲಾ ನಿಮ್ಮ ಗುರುಗಳಿಂದ ಸ್ನಾತಕರೆಂದು ಗುರುತಿಸಿಕೊಳ್ಳುವಾಗ ನಾನಿನ್ನೂ ಗುರುಕುಲ ಸೇರಿರಲಿಲ್ಲ.ನಾನು ಸಾಂಧೀಪನಿಗಳ ಗುರುಕುಲ ಸೇರಿದ್ದೇ 16ನೇ ವಯಸ್ಸಿಗೆ...ನಿನಗೆ ರಾಜ್ಯವಾದರೂ ಇದೆ....ರಾಜ ನೀನು....ನಾನೇನು ಯಾವೂರ ಸಿಂಹಾಸನಾಧೀಶ. ಈಗ ದುರ್ಯೋಧನ ಗೆದ್ದರೆ ಅದರ ಸಂಭ್ರಮಕ್ಕೆ ನಿನಗಿನ್ನೂ ದೊಡ್ಡ ರಾಜ್ಯ ಕೊಡಬಹುದು. ನಿನ್ನ ಕೀರ್ತಿ ಇನ್ನೂ ಉತ್ತುಂಗಕ್ಕೇರಬಹುದು. ನಾನು ಕೇವಲ ಸಾರಥಿ. ಯುದ್ಧದಲ್ಲಿ ಶಸ್ತ್ರ ಎತ್ತುವವನಲ್ಲಾ...ಕೀರ್ತಿಯೂ ಇಲ್ಲಾ, ಮತ್ತೊಂದೂ ಇಲ್ಲಾ. ಧರ್ಮರಾಜನ ಗೆಲುವಿನಲ್ಲಿ ನನಗ್ಯಾವ ಲಾಭವಿದೆ ಹೇಳು..? ಇದೆಲ್ಲಾ ಯುದ್ಧಕ್ಕೂ, ರಾದ್ಧಾಂತಕ್ಕೂ ನಾನೇ ಕಾರಣವೆಂಬ ಅಪವಾದವೂ ನನ್ನ ತಲೆ ಮೇಲಿದೆ..ಇದು ಧರ್ಮಜ ಗೆದ್ದರೂ ಸೋತರೂ ಹೋಗದು".



"ಆದರೆ ಒಂದು ಮಾತು ನೆನಪಿನಲ್ಲಿಡು ಕರ್ಣ,ಎಲ್ಲರಿಗೂ ಜೀವನ ಸವಾಲೆಸೆಯುತ್ತದೆ.ಅನ್ಯಾಯ ಮಾಡುತ್ತದೆ, ದುರ್ಯೋಧನನ ಬಾಳಿನಲ್ಲಿ ಅನ್ಯಾಯಗಳು ಸಾಲು ಸಾಲಾಗಿ ಜರುಗಿವೆ.... ಯುಧಿಷ್ಠರನ ಬಾಳಿನಲ್ಲೂ ಸಹ...ಆದರೆ ಧರ್ಮ ಯಾವುದೆಂದು ನಿನ್ನ ಮನಸ್ಸಿಗೆ ಗೊತ್ತಿರುತ್ತೆ. ವಿವೇಚನೆ ಹೇಳುತ್ತದೆ ನಾವೇನೇನು ಎದುರಿಸಿದ್ದೇವೆಂಬುದು...ಎಷ್ಟು ಅಪಮಾನಗಳನ್ನು ಸಹಿಸಿದ್ದೇವೆ...ಎಷ್ಟು ಅನ್ಯಾಯಗಳು ನಮ್ಮ ಮೇಲಾಯ್ತು... ಎಂಬುದಲ್ಲಾ ಮುಖ್ಯ. ಆ ಸಮಯದಲ್ಲಿ ನಾವೇನು ಮಾಡಿದೆವು ಎಂಬುದಷ್ಟೇ ನಿನ್ನ ವ್ಯಕ್ತಿತ್ವದ ಅಳತೆಗೋಲು. ಗೋಳಾಡುವುದನ್ನು ನಿಲ್ಲಿಸು..ವಿವೇಕ ತೋರಿದ ಹಾದಿಯಲ್ಲಿ ನಡೆವುದನ್ನ ಕಲಿ. ಜೀವನದಲ್ಲಿ ಅನ್ಯಾಯವಾಗಿದೆ, ಎಂಬುದು ಧರ್ಮದ ಹಾದಿಬಿಟ್ಟು ನಡೆಯುವುದಕ್ಕೆ ಸಿಕ್ಕ ಅನುಮತಿಯೆನ್ನಬೇಡ...!!!"



ವಾರಭವಿಷ್ಯ

24.9.2023 ರಿಂದ 30.9.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಕನ್ಯಾ, ಚಂದ್ರ–ಧನುಸ್ಸು, ಮಕರ, ಕುಂಭ, ಮೀನ, ಕುಜ–ಕನ್ಯಾ, ಬುಧ–ಸಿಂಹ, ಗುರು–ಮೇಷ, ಶುಕ್ರ–ಕಟಕ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, ‘ಭಾವಸಾರ ರತ್ನ’
‘ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು’
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

‘ಮಂಥನ ಮಾಡದೆ ಅಮೃತ ಸಿಗದು’ ಗುರುಬಲದ ಕೊರತೆ ಕೆಲಸ ಕಾರ್ಯಗಳು ಮುಂದೆ ಸಾಗದು. ಬಂದ ಹಣ ಕೈಯ್ಯಲ್ಲಿ ನಿಲ್ಲದು. ಹಿಂದೆ ಮಾಡಿದ ತಪ್ಪನ್ನು ಅವಲೋಕಿಸಿಕೊಳ್ಳಿ. ದ್ವಿದಳ ಧಾನ್ಯ, ಎಣ್ಣೆ ಕಾಳು ಬೆಳೆ ಹಾಗೂ ವ್ಯಾಪಾರ ತೇಜವಾಗಿ ನಡೆಯುವುದು. ಕೃಷಿ ಉಪಕರಣ, ಆಟೋಮೊಬೈಲ್ ಸ್ಪೋರ್ ವ್ಯಾಪಾರಗಳು ಹೆಚ್ಚು ಲಾಭ ತರಲಿದೆ.


ಶ್ರೀ ಗಣೇಶ ಪ್ರಾರ್ಥನೆ. ಶುಭ ಸಂಖ್ಯೆ–5.



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ದೇಹಾರೋಗ್ಯ, ಕಷ್ಟ ಕಾರ್ಯ ಸಿದ್ಧಿ, ಧನ ಪ್ರಾಪ್ತಿ. ರೇಷ್ಮೆ ಹಾಗೂ ಜವಳಿ ವ್ಯಾಪಾರ ಬಂಪರ್ ಲಾಭ ತರುವುದು. ಮಿತ್ರ ಜನರ ಸಂಪರ್ಕದಿಂದ ಆನಂದ. ವಿದ್ಯೆ, ಕೀರ್ತಿಗಳನ್ನು ಪಡೆಯುತ್ತೀರಿ. ವಾರ ಮಧ್ಯಾನಂತರ ಸ್ಥಾನಲಾಭವಾದರೂ ಧನಕ್ಷಯ. ಶರೀರದಲ್ಲಿ ಜಢತ್ವ ರೋಗಪೀಡೆ, ಅಕಾಲ ಭೋಜನಾದಿಗಳು, ವೈದ್ಯರ ಭೇಟಿ ಅನಿವಾರ್ಯವಾಗಬಹುದು. ವಾರದ ಕಡೆಗೆ ಧರ್ಮಕ್ಷೇತ್ರಕ್ಕೆ ಭೇಟಿ.


ಶ್ರೀ ಲಕ್ಷ್ಮೀದೇವಿ ಉಪಾಸನೆ. ಶುಭ ಸಂಖ್ಯೆ–8.



ಮಿಥುನ (ಕ.ಕಿ.ಕು.ಘ.ಜ.ಛ.ಕೆ.ಕೊ.ಹ)

ಅಧಿಕಾರಿಗಳಲ್ಲಿ ವ್ಯವಹಾರದಿಂದ ಲಾಭ.ಆಪ್ತ ಬಂಧು ವರ್ಗದವರಿಂದ ಆದರ. ಸ್ತ್ರೀ ಸೌಖ್ಯ, ನೂತನ ಗೃಹ ನಿರ್ಮಾಣಕ್ಕೆ ತಯಾರಿ. ಪುತ್ರ, ಪುತ್ರಿಯರಿಗೆ ಸಂಸ್ಥೆಗಳಲ್ಲಿ ಸ್ಥಾನಮಾನ ದೊರೆಯುವುದು. ಶುಭ ಕಾರ್ಯಾಚರಣೆ. ನವಮಿ ಶನಿಯಿಂದ ಪಿತೃ ಸಮಾನ ವ್ಯಕ್ತಿಯ ವಿಯೋಗ. ಸಾರ್ವಜನಿಕರೊಂದಿಗೆ ಜಗಳ, ಠಾಣೆ ದರ್ಶನ. ಸಂಯಮದಿಂದ ವರ್ತಿಸಿ.

ಶ್ರೀ ರಾಮನಾಮ ಜಪ. ಶುಭ ಸಂಖ್ಯೆ–4.



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಿತ್ತ ಲಾಭ, ಸುಖ, ಸಂತೋಷ, ರೋಗದಿಂದ ವಿಮುಕ್ತಿ. ಸ್ತ್ರೀ ಸೌಖ್ಯ ಮತ್ತು ಹವಳ ವ್ಯಾಪಾರದಿಂದ ಹೇರಳ ಧನಲಾಭ. ಮಿತ್ರರೊಡಗೂಡಿ ಸಂತೋಷ ಕೂಟಗಳು ನಡೆಯುವುದು. ಪುಣ್ಯ ಕೆಲಸಗಳಲ್ಲಿ ಆಸಕ್ತಿ. ಅಷ್ಟಮ ಶನಿಯಿಂದ ನಾನಾ ರೀತಿಯ ಮಾನಸಿಕ ತೊಳಲಾಟಗಳು. ಮನಸ್ಸು ಯದ್ವಾತದ್ವ ವರ್ತಿಸುವುದು. ಕೃಷಿಕರಿಗೆ ಉತ್ತಮ ಫಸಲು ಬಾರದೆ ನಷ್ಟವನ್ನು ಅನುಭವಿಸುವರು.

ಶ್ರೀದೇವಿ ಪೂಜೆ. ಶುಭ ಸಂಖ್ಯೆ–7.



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಭಾಗ್ಯವಿದ್ದಂತೆ ಫಲ. ವಿದ್ಯೆ, ಪೌರುಷ ಯಾವುದೂ ಪ್ರಯೋಜನಕ್ಕೆ ಬಾರದು. ಯಾವುದೇ ಬಂಡವಾಳ ಹೂಡಿಕೆಯನ್ನು ತುಂಬಾ ಯೋಚಿಸಿ ಮಾಡಿ. ಪಾಲುದಾರಿಕೆ ವ್ಯವಹಾರಗಳು ನಷ್ಟಕ್ಕೆ ಕಾರಣವಾಗಬಹುದು. ವಾರ ಮಧ್ಯೆ ಶುಭ ಚಂದ್ರನಿಂದ ಮಾತೃಶ್ರೀಯವರ ಆಶೀರ್ವಾದದಿಂದ ನೂತನ ಬೆಲೆ ಬಾಳುವ ವಸ್ತುವಿಗೆ ಒಡೆಯರಾಗುವಿರಿ. ದಿನ ಚರ್ಯೆಯಲ್ಲಿ ಮೆಡಿಟೇಶನ್ ಅಳವಡಿಸಿಕೊಳ್ಳಿ.


ಶ್ರೀ ರವ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–3.



ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಕೆಲವು ವ್ಯಾಪಾರ ವ್ಯವಹಾರ ವಿಷಯಗಳಲ್ಲಿ ಅಗತ್ಯ ವಿಚಾರಗಳನ್ನು ತಪಾಸಿಸಿಯೇ ನಿರ್ಣಯ ಕೈಗೊಳ್ಳಿ. ಸಾಲ ಕೊಟ್ಟು ಕೈ ಸುಟ್ಟುಕೊಳ್ಳಬೇಡಿ. ಮಾತಿನ ಮೇಲೆ ನಿಯಂತ್ರಣ ಎಂದು ಕೆಲವು ಗ್ರಹಗಳು ಸೂಚಿಸುತ್ತಿವೆ. ವಾರ ಮಧ್ಯಾನಂತರ ಗೃಹ ಸಂಬಂಧಿ ಕೆಲಸಗಳು ನಿಮ್ಮ ಅನುಕೂಲಕ್ಕೆ ಕಾಣುವುದು. ಸಕಾರಾತ್ಮಕ ಘಟನೆಗಳಿಂದ ಮನೋಬಲ ವೃದ್ಧಿಸುವುದು. ತಾಳ್ಮೆಯಿಂದ ಮುಂದುವರೆಯಿರಿ.


ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–1.



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನೌಕರಿ ಹಾಗೂ ವ್ಯವಸಾಯದಲ್ಲಿ ನೀವಂದುಕೊಂಡಂತೆ ಯಶಸ್ಸು ದೊರೆಯುವುದು. ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿರುತ್ತದೆ. ವ್ಯಾಪಾರದಲ್ಲಿ ಪ್ರತಿಸ್ಪರ್ಧಿ ಉಂಟಾದರೂ ಲಾಭಕ್ಕೆ ತೊಂದರೆಯಿಲ್ಲ. ಪುಸ್ತಕ ಪ್ರಕಾಶಕರಿಗೆ ಟುಟೋರಿಯಲ್ಸ್ ನಡೆಸುವವರಿಗೆ ಆದಾಯದಲ್ಲಿ ಅನಿರೀಕ್ಷಿತ ಹೆಚ್ಚಳವಾಗುವುದು. ಸೈಟು, ಜಮೀನು ಮಾರಾಟದ ವಿಚಾರವನ್ನು ಸ್ವಲ್ಪ ಸಮಯ ಮುಂದಕ್ಕೆ ಹಾಕಿದರೆ ಒಳ್ಳೆಯದಾಗುತ್ತದೆ.

ಶ್ರೀ ಲಕ್ಷ್ಮಿ ಅಷ್ಟಕ ಪಠಿಸಿ. ಶುಭ ಸಂಖ್ಯೆ–2



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ಕಾರ್ಯಸಿದ್ಧಿಯಾಗಲು ವಿಳಂಬವಾಗಬಹುದು, ನಿರಾಶರಾಗುವ ಅಗತ್ಯವಿಲ್ಲ. ಕಠಿಣ ಪರಿಶ್ರಮ, ಸಾಧಿಸುವ ಹಠ ಮುಂತಾದ ಗುಣಗಳಿಂದ ಯಶಸ್ಸನ್ನು ಹೊಂದುವಿರಿ. ಇದಕ್ಕೆ ಹಿರಿಯರ ಮಾರ್ಗದರ್ಶನ ಉಪಯುಕ್ತವಾಗುವುದು. ಸರ್ಕಾರಿ ನೌಕರರು ವಾಮ ಮಾರ್ಗದಲ್ಲಿ ಹಣ ಗಳಿಸಲು ಹೋಗಿ ತೊಂದರೆಗೆ ಸಿಲುಕುವರು. ಅನಾರೋಗ್ಯ ಕಾಡಬಹುದು. ದೂರ ಪ್ರಯಾಣಗಳನ್ನು ಅವಾಯ್ಡ್ ಮಾಡಿ.

ಶ್ರೀ ಯೋಗನೃಸಿಂಹಸ್ವಾಮಿ ಉಪಾಸನೆ. ಶುಭ ಸಂಖ್ಯೆ–6.



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದ ಪೂರ್ವಾರ್ಧದಲ್ಲಿ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳುವಿರಿ. ಇದು ನಿಮ್ಮ ಕಾರ್ಯ ಕ್ಷಮತೆಯ ಬಲ ಪ್ರದರ್ಶನದ ಸಮಯ. ಮಿತ್ರರೊಂದಿಗೆ ಸಂತಸದ ಸಮಯ ಕಳೆಯುವುದು. ಆರ್ಥಿಕ ವ್ಯವಹಾರಗಳು ಚುರುಕಾಗಿ ನಡೆಯುವುದು. ವಿದ್ಯಾ ಪ್ರಸಂಗಗಳಲ್ಲಿ ವಿದ್ಯಾರ್ಥಿಗಳು ಯಶಸ್ಸು ಗಳಿಸುವರು. ಮನೆಯಲ್ಲಿ ವಿವಾಹಯೋಗ್ಯರಿದ್ದರೆ ಮನೆ ಮುಂದೆ ಚಪ್ಪರ ಹಾಕುವ ಸಂಭವ ಬರಬಹುದು.


ಶ್ರೀ ಗುರು ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–9.



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆರಂಭಕ್ಕೆ ಚಂದ್ರಗ್ರಹದ ಪ್ರಭಾವದಿಂದ ಆರ್ಥಿಕ ಕ್ಷೇತ್ರದಲ್ಲಿ ಸಫಲತೆ ದೊರೆಯುವುದು. ಕಳೆದ ಕೆಲ ಸಮಯದಿಂದ ಮಾಡಿದ ಪರಿಶ್ರಮ ಫಲದಾಯಕವಾಗುವುದರಿಂದ ನಿಮ್ಮ ಕಾರ್ಯೋತ್ಸಾಹ ಹೆಚ್ಚುವುದು. ಅಧಿಕಾರಿಗಳ ಭೇಟಿಯಿಂದ ನಿಮ್ಮ ಸಮಸ್ಯೆಗೆ ಪರಿಹಾರ ದೊರಕುವುದು. ನಿಷ್ಠೂರವಾದರೂ ಸಾಲ ಕೊಡಬೇಡಿ. ವಾಹನ ಡ್ರೈವಿಂಗ್ ಮೋಜಿಗಲ್ಲ ಎಂಬ ಅರಿವಿರಲಿ.


ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–7.



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಈ ಸಪ್ತಾಹದಲ್ಲಿ ನಿಮ್ಮ ಜವಾಬ್ದಾರಿಗಳನ್ನು ಅರಿತು ವರ್ತಿಸಬೇಕಾಗುವುದು. ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಕೆಲವು ಸಮಸ್ಯೆಗಳನ್ನು ಎದುರಿಸಬಹುದು. ಪರೀಕ್ಷೆ ತಯಾರಿ ನಡೆಸುವಾಗ ಗಮನವಿರಲಿ. ವಾರದ ಉತ್ತರಾರ್ಧದಲ್ಲಿ ಆದಾಯದಲ್ಲಿ ಹೆಚ್ಚಳವಾಗುವುದು. ಅದರಂತೆ ಖರ್ಚುಗಳೂ ಎದುರಾಗುವುದು. ಮನೆಯಲ್ಲಿ ಸಣ್ಣಪುಟ್ಟ ವಿವಾದಗಳು ಉಂಟಾಗಬಹುದು. ವಿಕೋಪಕ್ಕೆ ಹೋಗದಂತೆ ನಡೆದುಕೊಳ್ಳಿ.

ಶ್ರೀ ಶಿರಡಿಸಾಯಿಬಾಬಾ ಪೂಜೆ. ಶುಭ ಸಂಖ್ಯೆ–4.



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಧನದಲ್ಲಿ ಗುರು, ವ್ಯಯದಲ್ಲಿ ಶನಿ ಇದ್ದು ಪ್ರತಿಕೂಲ ಪರಿಸ್ಥಿತಿಯಲ್ಲಿ ಕಾರ್ಯ ನಿರ್ವಹಿಸುವಂತೆ ಆಗಿದೆ. ನಿಮ್ಮ ಕಾರ್ಯ ಕ್ಷೇತ್ರದಲ್ಲಿ ಎದುರಾಳಿಗಳು ಇದ್ದಾಗ್ಯೂ ನಿಮಗೆ ಅವಶ್ಯವಿರುವ ಯಶಸ್ಸು ದೊರೆಯುವುದು. ಸಂಬಂಧಗಳಲ್ಲಿನ ಸಮಸ್ಯೆಗಳ ಪರಿಹಾರಕ್ಕೆ ನಿಮ್ಮ ನಡೆ–ನುಡಿಯ ಮೇಲೆ ನಿಯಂತ್ರಣವಿರಲಿ. ಧಾರ್ಮಿಕ ಕಾರ್ಯಗಳಿಂದ ಮನಸ್ಸಿಗೆ ಆನಂದವಾಗುವುದು.

ಶ್ರೀ ದತ್ತಗುರು ಅರ್ಚನೆ. ಶುಭ ಸಂಖ್ಯೆ–5.

ಮಾದಿಗ ಸಮುದಾಯಕ್ಕೆ ಟಿಕೆಟ್ ನೀಡದಿದ್ದರೆ ಚುನಾವಣೆ ಬಹಿಷ್ಕಾರ

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಎಲ್ಲಾ ಪಕ್ಷಗಳಿಗೂ ಎಚ್ಚರಿಕೆ



ತಿ.ನರಸೀಪುರ, ಸೆ.23– ರಾಜಕೀಯ ಪಕ್ಷಗಳು ಸತತ ಆರೇಳು ದಶಕಗಳಿಂದಲೂ ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆಗಳ ವೇಳೆ ದಲಿತರ ಎಡಗೈ (ಮಾದಿಗ) ಸಮುದಾಯವನ್ನು ನಿರ್ಲಕ್ಷಿಸುತ್ತಲೇ ಬಂದಿದ್ದು, ಸಮುದಾಯದ ಜನರ ತಾಳ್ಮೆ ಮತ್ತು ಮೌನಕ್ಕೂ ಮಿತಿಯಿದೆ. ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ಈ ಬಾರಿಯೂ ಅವಕಾಶ ನಿರಾಕರಿಸಿದಲ್ಲಿ ಮಾದಿಗ ಸಮುದಾಯ ಮತ್ಯಾವ್ಯಕ್ಕೂ ಹಾಕದೆ ಎಲ್ಲಾ ಪಕ್ಷಗಳಿಗೂ ಪಾಠವನ್ನು ಕಲಿಸಬೇಕಾಗುತ್ತದೆ ಎಂದು ಹಿರಿಯ ಮುಖಂಡರಾದ ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಎಚ್ಚರಿಸಿದ್ದಾರೆ.

ಪಟ್ಟಣದ ಗೋಪಾಲಪುರದಲ್ಲಿ ಶನಿವಾರ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಸೇರಿದಂತೆ ಕಾಂಗ್ರೆಸ್ ಹಾಗೂ ಇನ್ನಿತರ ಯಾವುದೇ ರಾಜಕೀಯ ಪಕ್ಷದಿಂದಲೂ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು, ಹಾಸನ, ಚಿಕ್ಕಮಗಳೂರು ಸೇರಿದಂತೆ ಏಳೆಂಟು ಜಿಲ್ಲೆಗಳಲ್ಲಿನ 30ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರಗಳಲ್ಲಿ ಒಬ್ಬರಿಗೂ ಟಿಕೆಟ್ ಕೊಟ್ಟಿಲ್ಲ. ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಬಿಡುತ್ತಿಲ್ಲ. ಅದ್ಯಾವ ಕಾರಣಕ್ಕೆ ಮಾದಿಗರಿಗೆ ಅವಕಾಶ ನೀಡುತ್ತಿಲ್ಲ. ಯಾವೊಂದು ಚುನಾವಣೆಗೂ ಪರಿಗಣಿಸದಿರಲು ಕಾರಣವಾದರೂ ಏನು ಎಂದು ರಾಜಕೀಯ ಪಕ್ಷಗಳನ್ನು ಪ್ರಶ್ನಿಸಿದ್ದಾರೆ.

ಯಾವೊಂದು ಸಮುದಾಯವನ್ನು ವಿರೋಧಿಸುವ ಉದ್ದೇಶವಿಲ್ಲ. ಎರಡು ಜಿಲ್ಲೆಗಳನ್ನು ಒಳಗೊಂಡಂತೆ ಎಲ್ಲಾ ವರ್ಗದ ಜನಪ್ರತಿನಿಧಿಗಳ ಬೆಂಬಲದಿಂದ ವಿಧಾನಪರಿಷತ್ ಸದಸ್ಯನಾಗಿ ಆಯ್ಕೆಯಾಗಿದ್ದೆ. ಸಹೋದರ ಬಲಗೈ ಸಮುದಾಯವೂ ಕೂಡ ಪ್ರತಿಯೊಂದು ವಿಧಾನಸಭಾ ಕ್ಷೇತ್ರದಲ್ಲೂ 25 ಸಾವಿರ ಸಂಖ್ಯೆಯಲ್ಲಿರುವ ಮಾದಿಗ ಸಮುದಾಯಕ್ಕೆ ಲೋಕಸಭಾ ಚುನಾವಣೆಯಲ್ಲಿ ಅವಕಾಶ ನೀಡಲು ಸಹಮತ ವ್ಯಕ್ತಪಡಿಸಬೇಕು. ಒಕ್ಕಲಿಗರು ಹಾಗೂ ವೀರಶೈವ ಲಿಂಗಾಯತ ಉಪ ಜಾತಿಗಳಲ್ಲಿ ರೋಸ್ಟರ್ ಪದ್ಧತಿಯಂತೆ ನೀಡುವ ಅವಕಾಶವನ್ನು ಪ.ಜಾತಿಯ ಒಳ ಜಾತಿಗಳಿಗೂ ಅನ್ವಯವಾಗಬೇಕು. ಈ ಬಗ್ಗೆ ರಾಜಕೀಯ ಪಕ್ಷಗಳಲ್ಲಿ ಗಂಭೀರವಾಗಿ ಚಿಂತನೆಯಾಗಲಿ. ಉತ್ತರ ಕರ್ನಾಟಕದಲ್ಲಿ ಮಾದಿಗರಿಗೆ ನೀಡುವ ಟಿಕೆಟ್‌ನಲ್ಲಿ ಒಂದನ್ನ ಕಡಿತಗೊಳಿಸಿ ಚಾಮರಾಜನಗರದಲ್ಲಿ ನೀಡಬೇಕು ಎಂದು ಸಿ.ರಮೇಶ್ ಆಗ್ರಹಿಸಿದರು.

ಆರ್.ಅರ್ಜುನ್‌ಗೆ ಟಿಕೆಟ್ ಕೊಡಿ: ಸಿ.ಡಿ.ವೆಂಕಟೇಶ್ ಮಾತನಾಡಿ, ಕಿರುತೆರೆ ಹಾಗೂ ಬೆಳ್ಳಿತೆರೆಯ ಮೂಲಕ ಖ್ಯಾತರಾಗಿರುವ ಚಿತ್ರನಟ ಹಾಗೂ ಪುರಸಭಾ ಸದಸ್ಯ ಆರ್.ಅರ್ಜುನ್ ಅವರು ಚಾಮರಾಜ ನಗರ ಲೋಕಸಭಾ ಕ್ಷೇತ್ರದ ಪ್ರತಿಯೊಂದು ಹಳ್ಳಿಯಲ್ಲೂ ಜನರಿಗೆ ಚಿರಪರಿಚಿತ ಯುವ ನಾಯಕ ಆಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು ಯುವಕರಿಗೆ ಆದ್ಯತೆ ನೀಡುವುದಾಗಿ ಘೋಷಿಸಿದ್ದು, ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಲು ಆರ್. ಅರ್ಜುನ್ ಅವರಿಗೆ ವರಿಷ್ಠರು ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ತಾ.ಪಂ ಮಾಜಿ ಸದಸ್ಯ ಬಿ.ಎಲ್.ಮಹದೇವ ಉಪಸ್ಥಿತರಿದ್ದರು.

ಹುಣಸೂರಲ್ಲಿ ಕಾರು ಡಿಕ್ಕಿ ಹೊಡೆದು ಆಟೋ ಚಾಲಕ ಸಾವು: ಇಬ್ಬರು ಪ್ರಯಾಣಿಕರಿಗೆ ಗಾಯ



ಹುಣಸೂರು, ಸೆ.23– ಕಾರೊಂದು ಆಟೋಗೆ ಡಿಕ್ಕಿ ಹೊಡೆದ ಪರಿಣಾಮ ಆಟೋ ಚಾಲಕ ಸ್ಥಳದಲ್ಲೇ ಮೃತಪಟ್ಟು ಪ್ರಯಾಣಿಕರಿಬ್ಬರು ಗಾಯಗೊಂಡಿರುವ ಘಟನೆ ನಗರದ ತಹಸಿಲ್ದಾರ್ ಕಚೇರಿ ಮುಂದೆ ಇಂದು ಬೆಳಿಗ್ಗೆ ಸಂಭವಿಸಿದೆ. ನಗರದ ಕಲ್ಲುಣಿಕೆ ವಾಸಿ ದಾಸಪ್ಪನವರ ಮಗ ಆಟೋ ಚಾಲಕ ಶ್ರೀನಿವಾಸ್ (55) ಮೃತ ದುರ್ದೈವಿ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಇಂದು ಬೆಳಿಗ್ಗೆ ಶ್ರೀನಿವಾಸ್ ಆಟೋ(ಕೆ.ಎ–12 ಎ–334)ದಲ್ಲಿ ಪ್ರಯಾಣಿಕರಿಬ್ಬರನ್ನು ಕೂರಿಸಿಕೊಂಡು ತಹಸಿಲ್ದಾರ್ ಕಚೇರಿ ಕಡೆ ಹೋಗುತ್ತಿದ್ದಾಗ ಅದೇ ಸಮಯಕ್ಕೆ ಮೈಸೂರು ಕಡೆಗೆ ಬರುತ್ತಿದ್ದ ಕಾರು (ಕೆಎ–09 ಪಿ–9838) ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ಆಟೋ ಪಲ್ಟಿಯಾಗಿ ಚಾಲಕ ಶ್ರೀನಿವಾಸ್ ತಲೆಗೆ ಗಂಭೀರ ಗಾಯಗಳಾದವು. ಸಾರ್ವಜನಿಕರು ಸಹಾಯಕ್ಕೆ ಬರುವಷ್ಟರಲ್ಲಿ ಅವರು ಸಾವನ್ನಪ್ಪಿದ್ದರು. ಚಾಲಕ ಕಾರನ್ನು ಬಿಟ್ಟು ಪರಾರಿಯಾಗಿದ್ದಾನೆ. ಘಟನಾ ಸ್ಥಳಕ್ಕೆ ಡಿವೈಎಸ್ಪಿ ಎಂ.ಕೆ.ಮಹೇಶ್, ಇನ್ಸ್‌ಪೆಕ್ಟರ್ ಧರ್ಮೇಂದ್ರ, ಅನಿಲ್‌ಕುಮಾರ್ ಮತ್ತು ಸಿಬ್ಬಂದಿ ಭೇಟಿ ನೀಡಿ, ಈ ಸಂಬಂಧ ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಎರಡು ವಾಹನಗಳನ್ನು ವಶಕ್ಕೆ ತೆಗೆದುಕೊಂಡು ತನಿಖೆ ನಡೆಸುತ್ತಿದ್ದಾರೆ.

ಇಂದು ತುರಗನೂರು ಸಹಕಾರ ಸಂಘದ ವಾರ್ಷಿಕ ಸಭೆ

ತುರಗನೂರು, ಸೆ.23– ನರಸೀಪುರ ತಾಲೂಕಿನ ತುರಗನೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಮಂಚೀಗೌಡ ಅಧ್ಯಕ್ಷತೆಯಲ್ಲಿ ಭಾನುವಾರ ಬೆಳಗ್ಗೆ 11 ಗಂಟೆಗೆ ಸಂಘದ ಆವರಣದಲ್ಲಿ ನಡೆಯಲಿದೆ. ಸಂಘದ ಎಲ್ಲಾ ಸದಸ್ಯರು, ಅಕ್ಕಪಕ್ಕದ ಗ್ರಾಮದವರು ಭಾಗವಹಿಸುವಂತೆ ಸಂಘದ ಮುಖ್ಯ ಕಾರ್ಯನಿರ್ವಾಹಕ ಪ್ರಕಾಶ್ ಟಿ.ವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೊಂದಲದ ನಡುವೆ ನಡೆದ ಕೃಷಿ ಪತ್ತಿನ ಸಂಘದ ಸಭೆ



ಕಂಪಲಾಪುರ, ಸೆ.23– ಇಲ್ಲಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಭಾರಿ ಗೊಂದಲ ಮತ್ತು ಗದ್ದಲದ ನಡುವೆ ಶುಕ್ರವಾರ ಸಂಘದ ಆವರಣದಲ್ಲಿ ನಡೆಯಿತು.

ಸಂಘದಲ್ಲಿ ಒಟ್ಟು 1393 ಮಂದಿ ಷೇರುದಾರರಿದ್ದು, 2022–23ನೇ ಸಾಲಿಗೆ 25.95 ಲಕ್ಷ ರೂ ನಿವ್ವಳ ಲಾಭ ಗಳಿಸಿದೆ ಎಂದು ಸಿಇಒ ಕೆ.ಎನ್.ಹರ್ಷ ವಾರ್ಷಿಕ ವರದಿ ಮಂಡಿಸಿ ಸಭೆಯಲ್ಲಿ ತಿಳಿಸಿದರು.

ಪ್ರಾರಂಭದಿಂದಲೂ ಸಭೆ ಗೊಂದಲದ ಗೂಡಾಗಿತ್ತು. ವೇದಿಕೆಯಲ್ಲೇ ಕುಳಿತಿದ್ದ ನಿರ್ದೇಶಕ ಪ್ರಕಾಶ್ 2018 ರಿಂದ ಸಂಘದಲ್ಲಿ 66 ಮಂದಿ ಪಿಗ್ಮಿ ಹಾಗೂ ಇತರೆ ಸಾಲ ಪಡೆದವರು ಈವರೆಗೆ ಕಟ್ಟಿಲ್ಲ. ಆ ಪಟ್ಟಿಯನ್ನು ಬಳಿ ಇದೆ ಎಂದು ಒಬ್ಬೊಬ್ಬರ ಹೆಸರು ಹೇಳುತ್ತಿದ್ದಂತೆ, ಮತ್ತೊಂದು ಗುಂಪಿನವರು ಸಭೆಯಲ್ಲಿ ಎದ್ದುನಿಂತು ಕಳೆದ 10–15 ವರ್ಷಗಳ ಹಿಂದೆ ಲಕ್ಷ ಲಕ್ಷಗಟ್ಟಲೇ ಸಾಲ ಪಡೆದವರೂ ಈವರೆಗೆ ಕಟ್ಟಿಲ್ಲ. ಅವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ಅವರ ಹೆಸರನ್ನೂ ಓದಿ ಎಂದು ಆಗ್ರಹಿಸಿದರು.

ವೇದಿಕೆಯಲ್ಲಿ ಎಲ್ಲರ ಹೆಸರನ್ನು ಓದಿ ಎಂದಾಗ ಇದಕ್ಕೆ ಉತ್ತರಿಸಿದ ಸಿಇಒ, ಕಳೆದ ಆಡಳಿತ ಮಂಡಳಿ ಇದ್ದಾಗಲಿಂದಲೂ ಅವರಿಗೆ ನೋಟೀಸ್ ನೀಡಿದ್ದು ಅದಕ್ಕೆ ದಾಖಲೆ ಇದೆ. ಆದರೆ ಈವರೆಗೆ ಕಟ್ಟಿಲ್ಲ. ಈ ಬಗ್ಗೆ ಮೀಟಿಂಗ್ ಕರೆದು ಚರ್ಚಿಸುವುದಾಗಿ ತಿಳಿಸಿದರು. ಸಂಘದಲ್ಲಿ ಸಾಲ ಪಡೆದವರು ನಿಗದಿತ ಅವಧಿಯೊಳಗೆ ಸ್ವಇಚ್ಛೆಯಿಂದ ಮರುಪಾವತಿ ಮಾಡಬೇಕು. ಇಲ್ಲದಿದ್ದರೆ ಸಂಘ ಬೆಳೆಯುವುದು ಹೇಗೆ ಎಂದು ಪ್ರಶ್ನಿಸಿದರು.

ಪ್ರಾರಂಭದಿಂದ ಅಂತ್ಯದವರೆಗೂ ಸಭೆ ಗೊಂದಲದ ಗೂಡಾಯಿತು. ವಾರ್ಷಿಕ ಮಹಾಸಭೆಯಲ್ಲಿ ಪ್ರಶ್ನೆ ಕೇಳುವವರು ನೋಟೀಸ್ ತಲುಪಿದ 5 ದಿನ ಮುಂಚಿತವಾಗಿ ಅರ್ಜಿ ಸಲ್ಲಿಸುವುದು ಕಡ್ಡಾಯ ಎಂಬ ನಿಯಮವಿದ್ದರೂ ಕೆಲವರು ಬಾಯಿಗೆ ಬಂದಂತೆ ಪ್ರಶ್ನೆಗಳನ್ನು ಕೇಳುತ್ತಾ ಸಮಯ ವ್ಯರ್ಥ ಮಾಡಿದರು. ಸಂಘದ ಮೃತಪಟ್ಟ ಸದಸ್ಯರಿಗೆ ಸಂತಾಪ ಸೂಚಿಸಲಾಯಿತು.

ಸಭೆಯಲ್ಲಿ ಅಧ್ಯಕ್ಷ ನಾಗೇಗೌಡ, ಉಪಾಧ್ಯಕ್ಷ ತಮ್ಮಯ್ಯ, ನಿರ್ದೇಶಕರಾದ ಕೆ.ಕುಮಾರ್, ಕೆ.ಎಂ.ಲಕ್ಷ್ಮಣ್, ಸತೀಶ್, ರವಿ, ಮಹದೇವ, ಭಾಗ್ಯರಾಜೇಗೌಡ, ಮಣಿ ಮಹೇಶ್, ಮಹದೇವ್, ಪ್ರಕಾಶ್, ಗಿರೀಶ್, ಎಂಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಹೆಚ್.ಕೆ. ಜಗದೀಶ್ ಸೇರಿದಂತೆ 500 ಕ್ಕೂ ಹೆಚ್ಚು ಷೇರುದಾರರು, ಸಿಬ್ಬಂದಿಯವರು ಹಾಜರಿದ್ದರು.

ಲಾಭದಲ್ಲಿ ಹೆಗ್ಗಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ



ನಂಜನಗೂಡು, ಸೆ.23– ತಾಲೂಕಿನ ಹೆಗ್ಗಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಪ್ರಸಕ್ತ ಸಾಲಿನಲ್ಲಿ 4 ಲಕ್ಷ 74 ಸಾವಿರ ರೂ. ಲಾಭದಲ್ಲಿ ಮುನ್ನಡೆದಿದ್ದು, ಸಂಘವು ಆರ್ಥಿಕವಾಗಿ ಸದೃಢವಾಗಿ ಬೆಳೆಯುವ ಸಲುವಾಗಿ ರೈತರು ಸಕಾಲದಲ್ಲಿ ಸಾಲ ಮರುಪಾವತಿ ಮಾಡಬೇಕು ಎಂದು ಸಂಘದ ಅಧ್ಯಕ್ಷ ಡಿ.ಎಂ.ಪ್ರಕಾಶ್ ಹೇಳಿದರು.

ಹೆಗ್ಗಡಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಸಹಕಾರ ಸಂಘದಲ್ಲಿ ಈಗಾಗಲೇ 2174 ಸದಸ್ಯರಿದ್ದು, ಸುಮಾರು 8 ಕೋಟಿಗೂ ಅಧಿಕ ಸಾಲ ವಿತರಣೆ ಮಾಡಲಾಗಿದೆ. ಪ್ರತಿ ರೈತರಿಗೆ ಗರಿಷ್ಠ 3 ಲಕ್ಷದವರೆಗೆ ಬಡ್ಡಿ ರಹಿತವಾಗಿ ಸಾಲ ವಿತರಿಸಲಾಗುತ್ತಿದೆ ಆದರೆ ಸಾಲ ಪಡೆದ ರೈತರು ಸಕಾಲದಲ್ಲಿ ಸಾಲ ಮರುಪಾವತಿ ಮಾಡದ ಕಾರಣ ಸುಸ್ತಿ ಸಾಲ ಹೆಚ್ಚಾಗಿದೆ ಎಂದು ಅವರು ಹೇಳಿದರು.

ಕಳೆದ ಬಾರಿ 5 ಲಕ್ಷ 68 ಸಾವಿರ ಲಾಭಾಂಶವಾಗಿತ್ತು. ಸುಮಾರು 34 ಲಕ್ಷ ಸುಸ್ತಿ ಸಾಲ ಇತ್ತು. ಈ ಬಾರಿ 42 ಲಕ್ಷಕ್ಕೆ ಸುಸ್ತಿ ಸಾಲ ಏರಿಕೆ ಆದ ಕಾರಣ 1 ಲಕ್ಷ ಲಾಭಾಂಶವೂ ಸಹ ಕಡಿಮೆಯಾಗಿದೆ. ಮುಂದಿನ ಬಾರಿ ಸುಮಾರು 7 ಲಕ್ಷ ಲಾಭದ ನಿರೀಕ್ಷೆಯನ್ನು ಹೊಂದಲಾಗಿದೆ ಎಂದ ಅವರು, ಸದಸ್ಯರ ಸಹಕಾರದಿಂದ ಕಳೆದ ಮೂರು ವರ್ಷದಿಂದಲೂ ಸಹ ಸಂಘವು ಲಾಭಾಂಶದಲ್ಲಿ ಮುನ್ನಡೆಯುತ್ತಿದೆ. ಸಂಘವು ಪುನಶ್ಚೇತನಗೊಳ್ಳಲು ಹೊಸ ಸದಸ್ಯರನ್ನು ನೋಂದಾಯಿಸಿ ಅವರಿಗೆ ಸದಸ್ಯತ್ವ ಪಡೆದುಕೊಳ್ಳುವಂತೆ ಕ್ರಮವಹಿಸಬೇಕಿದೆ ಎಂದರು.

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಚ್.ಎಸ್. ರವಿ ಮಾತನಾಡಿ, ಸರ್ಕಾರಿ ನಿಯಮದಂತೆ ಸಂಘದ ಸಮಗ್ರ ಬೈಲಾ ತಿದ್ದುಪಡಿಯಾಗಿದ್ದು ಷೇರುಹಣ 1 ಸಾವಿರ ಆಗಿರುತ್ತದೆ. ಆದ್ದರಿಂದ ಸದಸ್ಯರ ಷೇರು 1 ಕ್ಕಿಂತ ಕಡಿಮೆಯಾಗಿದ್ದಲ್ಲಿ ಉಳಿಕೆ ಹಣ ಪಾವತಿಸಿ ಸದಸ್ಯತ್ವವನ್ನು ಸರಿಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಸಹಕಾರ ಸಂಘದ ಉಪಾಧ್ಯಕ್ಷ ಕುಮಾರ್, ನಿರ್ದೇಶಕರಾದ ಕೆವಿ ಶಿವಬಸಪ್ಪ ಎಚ್. ಎಂ.ಮಲ್ಲೇಶ್, ವಿ.ಎಸ್. ಮಹಾದೇವಸ್ವಾಮಿ, ಬಸವಶೆಟ್ಟಿ, ಕಮಲಮ್ಮ ಚಿಕ್ಕ ನಿಂಗಯ್ಯ, ಎಚ್. ಎಸ್.ರವಿ, ಹೆಗ್ಗಡಹಳ್ಳಿ ಗ್ರಾಪಂ ಅಧ್ಯಕ್ಷ ಅಭಿ ಅಭಿ, ಸದಸ್ಯರಾದ ರಂಗಸ್ವಾಮಿ, ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಜಿನ್ನಾಹಳ್ಳಿ ಸಂಘದ ವಾರ್ಷಿಕ ಮಹಾಸಭೆ

ಹಂಪಾಪುರ, ಸೆ.23– ಹೆಚ್.ಡಿ.ಕೋಟೆ ತಾಲೂಕು ಹಂಪಾಪುರ ಹೋಬಳಿ ಜಿನ್ನಾಹಳ್ಳಿಯಲ್ಲಿ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ವತಿಯಿಂದ 2022–23ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಗುರುವಾರ ಜಿನ್ನಾಹಳ್ಳಿ ಸಂಘದ ಆವರಣದಲ್ಲಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಅಧ್ಯಕ್ಷ ಅಣ್ಣೇಗೌಡ, ಉಪಾಧ್ಯಕ್ಷೆ ರತ್ನಮ್ಮ, ಕಾರ್ಯ ನಿರ್ವಹಣಾಧಿಕಾರಿ ಗಿರೀಗೌಡ, ನಿರ್ದೇಶಕ ಜಯರಾಮು, ಹೆಚ್.ಎಂ.ರಾಮು, ರಾಜನಾಯಕ, ಕುಮಾರಸ್ವಾಮಿ, ಮರಳೂರನಾಯಕ, ಕೃಷ್ಣ, ಶಿವಯ್ಯ, ಮೋಹನ್, ಶಿವಮ್ಮ, ಶಂಕರೇಗೌಡ, ಮೇಲ್ವಿಚಾರಕ ಸೋಮಶೇಖರ್ ಮತ್ತು ಊರಿನ ಮುಖಂಡರು, ಇತರರು ಹಾಜರಿದ್ದರು.

ಸಕಾಲದಲ್ಲಿ ಸಾಲ ಮರುಪಾವತಿಸಿ



ಮಲ್ಲುಂಡಿ, ಸೆ.23– ಸಾಲ ಪಡೆದ ರೈತರು ಸಕಾಲಕ್ಕೆ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಎಲ್ಲರೂ ಸಹಕರಿಸಬೇಕು ಎಂದು ಹೆಡಿಯಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ಹೇಳಿದರು.

ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಹಕಾರ ಸಂಘ ಬೆಳೆಯಲು ಪ್ರತಿಯೊಬ್ಬರ ಸಹಕಾರ ಮುಖ್ಯವಾಗಿದೆ ಎಂದರು.

ಸಂಘದಲ್ಲಿ ಹೆಚ್ಚು ಲಾಭಾಂಶ ಬರಬೇಕಾದರೆ ರೈತರು ಪಡೆದ ಸಾಲವನ್ನು ಸಕಾಲಕ್ಕೆ ಮರುಪಾವತಿ ಮಾಡಿದರೆ ಸಂಘ ಅಭಿವೃದ್ಧಿ ಕಾಣುತ್ತದೆ. ಆದ್ದರಿಂದ ಪ್ರತಿಯೊಬ್ಬ ರೈತ ಪಡೆದ ಸಾಲವನ್ನು ಸಕಾಲಕ್ಕೆ ಹಿಂತಿರುಗಿಸಿದರೆ ಸಂಘವು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಸಂಘದ ಉಪಾಧ್ಯಕ್ಷ ಶಿವರುದ್ರಪ್ಪ, ನಿರ್ದೇಶಕರುಗಳಾದ ಎಂ.ಕೆ.ಮಂಜುನಾಥ್, ಬಸವಣ್ಣ ಅನ್ವರ್, ಶಿವರುದ್ರಪ್ಪ, ಶಿವಮ್ಮ, ಕೆಂಪಾಲಮ್ಮ, ರಂಗನಾಯಕ, ಶಿವಯ್ಯ, ಗ್ರಾಪಂ ಉಪಾಧ್ಯಕ್ಷ ನಾಗೇಶ್, ಸದಸ್ಯ ಪಟೇಲ್ ಮಹ ದೇವಪ್ಪ, ಸಿಇಓ ಹೆಚ್.ಡಿ.ಶಿವಕುಮಾರ್ ಹಾಜರಿದ್ದರು.

ಪ್ರಜಾಪ್ರಭುತ್ವ ರಕ್ಷಣೆಗೆ ಸಂವಿಧಾನ ಪೀಠಿಕೆ ಕಡ್ಡಾಯ



ತಿ.ನರಸೀಪುರ ಸೆ.23– ದೇಶದಲ್ಲಿ ಪದೇ ಪದೆ ಕೋಮು, ಮತೀಯವಾದಿಗಳು ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಅಲ್ಲಾಡಿಸಲು ನೋಡುತ್ತಿರುವುದನ್ನು ಗಂಭೀರವಾಗಿ ಅರಿತು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನ ಜನ ಸಾಮಾನ್ಯರಿಗಷ್ಟೆ ಅಲ್ಲ ಜಾಗತಿಕವಾಗಿ ಪ್ರಪಂಚವನ್ನೇ ಮುಟ್ಟಬೇಕು ಎಂಬ ಉದ್ದೇಶದಿಂದ ಸಂವಿಧಾನ ಪೀಠಿಕೆ ಪ್ರಸ್ತಾವನೆಯನ್ನು ರಾಜ್ಯದಲ್ಲಿ ಕಡ್ಡಾಯಗೊಳಿಸಲಾಗಿದೆ ಎಂದು ಸಮಾಜ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ಪಟ್ಟಣದ ಅಂಬೇಡ್ಕರ್ ವಿವಿಧೋದ್ದೇಶ ಸಹಕಾರ ಸಂಘ ಹಾಗೂ ಸೇವಾ ಸಂಸ್ಥೆಯ ಆವರಣದಲ್ಲಿ ಶನಿವಾರ ಸಂಸ್ಥೆಯ ತರಬೇತಿ ಕಟ್ಟಡ ಲೋಕಾರ್ಪಣೆ ಮತ್ತು ಸಹಕಾರ ಸಂಘದ ಸೂಪರ್ ಮಾರ್ಕೆಟ್ ಕಟ್ಟಡದ ಭೂಮಿಪೂಜೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನ ಪೀಠಿಕೆಯನ್ನು ಓದಿದರೆ ಯಾರೊಬ್ಬರೂ ಆಕ್ಷೇಪ ವ್ಯಕ್ತಪಡಿಸಲ್ಲ. ವಿರೋಧ ದ್ವೇಷವನ್ನು ಮಾಡುವಂತಿಲ್ಲ. ಅದರಲ್ಲೂ ಸಂವಿಧಾನದ ಮಹತ್ವ ಯುವ ಜನತೆಯ ತಲೆಗೆ ಹೋಗಬೇಕು ಎಂದರು.

ವರುಣ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಅಂಬೇಡ್ಕರ್ ವಿವಿಧೋದ್ದೇಶ ಸಹಕಾರ ಸಂಘ ಹಾಗೂ ಸೇವಾ ಸಂಸ್ಥೆಯ ಅಧ್ಯಕ್ಷ ತುಂಬಲ ರಾಮಣ್ಣ ಮಾತನಾಡಿದರು.

ಉರಿ ಪೆದ್ದಿಲಿಂಗ ಮಠದ ಜ್ಞಾನ ಪ್ರಕಾಶ ಸ್ವಾಮೀಜಿ, ನಳಂದ ಬುದ್ಧ ವಿಹಾರದ ಬೋಧಿರತ್ನ ಭಂತೇಜಿ, ಮಾಜಿ ಮೇಯರ್ ಪುರುಷೋತ್ತಮ್, ದಲಿತ ಚಳುವಳಿ ನಾಯಕರಾದ ಗೋಪಾಲ್, ಮಾವಳ್ಳಿ ಶಂಕರ್ ಹಾಗೂ ಬಿಎಸ್‌ಪಿ ರಾಜ್ಯ ಸಂಯೋಜಕ ಎಂ.ಕೃಷ್ಣಮೂರ್ತಿ ಮಾತನಾಡಿದರು. ಬೌದ್ಧ ಭಿಕ್ಕುಗಳಾದ ಬೋದಿದತ್ತ ಸುಗತಪಾಲ್ ಭಂತೆಜಿ, ಕರ್ನಾಟಕ ಎಸ್‌ಸಿ, ಎಸ್‌ಟಿ ಗ್ರಾಜುಯೇಟ್ಸ್ ಅಸೋಸಿಯೇಷನ್ ಅಧ್ಯಕ್ಷ ಎಂ. ಸುರೇಶ್ ಕುಮಾರ್, ಜಿ.ಪಂ ಮಾಜಿ ಅಧ್ಯಕ್ಷ ಎಸ್. ಎನ್. ಸಿದ್ಧಾರ್ಥ, ಮಾಜಿ ಸದಸ್ಯ ಜೆ. ಅಚ್ಚುತ್ತಾನಂದ, ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಇನ್ನಿತರರು ಹಾಜರಿದ್ದರು.

ಹೆಚ್.ಡಿ.ಕೋಟೆ ಬಳಿ ಜಮೀನಿನಲ್ಲಿ ಬೀಡುಬಿಟ್ಟಿರುವ ಒಂಟಿ ಆನೆ

ಕಾರ್ಯಾಚರಣೆಗೆ ಜಗ್ಗದೆ, ಕಬ್ಬಿನ ಗದ್ದೆಯಲ್ಲಿ ಉಳಿದಿರುವ ಆನೆ



ಹೆಚ್.ಡಿ. ಕೋಟೆ, ಸೆ.23– ತಾಲೂಕಿನ ಆನಗಟ್ಟಿ ಗ್ರಾಮದಲ್ಲಿ ಒಂಟಿ ಆನೆಯೊಂದು ಗ್ರಾಮದ ಮಹದೇವು ಎಂಬುವರ ಕಬ್ಬಿನ ಗದ್ದೆಯಲ್ಲಿ ಬೀಡು ಬಿಟ್ಟಿದೆ.

ಮೇಟಿಕುಪ್ಪೆ ವಲಯ, ತಾರಕ ಜಲಾಶಯದ ಹಿನ್ನೀರಿನಿಂದ ಬಂದಿರುವ ಆನೆಯು ಆನಗಟ್ಟಿ ಗ್ರಾಮದ ಹಲವು ಜಮೀನುಗಳ ಮೂಲಕ ಬಂದು ಪುಟ್ಟಸ್ವಾಮಿ ಅವರ ಜಮೀನಿನಲ್ಲಿ ಕಾಣಿಸಿಕೊಂಡಿದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಪುಟ್ಟಸ್ವಾಮಿರವರ ಜಮೀನಿನಲ್ಲಿ ಆನೆ ಲದ್ದಿ ಹಾಕಿರುವುದು ಕಂಡುಬಂದಿದೆ. ಅಲ್ಲದೇ ಅರಣ್ಯ ಸಿಬ್ಬಂದಿಗಳು ಬಂದು ಆನೆ ಹೆಜ್ಜೆ ಗುರುತನ್ನು ಗಮನಿಸಿ ಆನೆ ಇರುವುದನ್ನು ಖಚಿತಪಡಿಸಿದ್ದಾರೆ.

ಆನೆ ಕಬ್ಬಿನ ಗದ್ದೆಯಲ್ಲೇ ಇರುವುದರಿಂದ ಕಾರ್ಯಾಚರಣೆಯನ್ನು ಆರಂಭಿಸಲು ತೀರ್ಮಾನಿಸಿ ಈ ಭಾಗದ ಜಮೀನುಗಳಿಗೆ ರೈತರು ಬಾರದಂತೆ ಮನವಿ ಮಾಡಿದರು. ಕಬ್ಬಿನ ಗದ್ದೆಯ ಸುತ್ತಲೂ ಆನೆಯ ಚಲನವಲನವನ್ನು ವೀಕ್ಷಿಸಲು ಅರಣ್ಯ ಸಿಬ್ಬಂದಿ ಮೊಕ್ಕಾಂ ಹೂಡಿದ್ದರು. ಆನೆ ಬಂದಿರುವ ವಿಷಯ ಗ್ರಾಮಕ್ಕೆ ತಿಳಿಯುತ್ತಿದ್ದಂತೆ ಜನರು ಆನೆ ನೋಡಲು ಸಾಗರೋಪಾದಿಯಲ್ಲಿ ಆಗಮಿಸುತ್ತಿದ್ದುದು ಕಂಡುಬಂತು.

ವಿದ್ಯುತ್ ತೆರವು : ಆನೆಯು ಗ್ರಾಮಕ್ಕೆ ಬರುತ್ತಿದ್ದಂತೆ ಆನಗಟ್ಟಿ ಗ್ರಾಮದ ಸುತ್ತ 10 ಕಿಲೋ ಮೀಟರ್‌ಗೂ ಹೆಚ್ಚು ಪ್ರದೇಶದಲ್ಲಿ ಚೆಸ್ಕಾಂ ಸಿಬ್ಬಂದಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ್ದರು.

ಜಮೀನುಗಳಲ್ಲಿ ಪ್ರಚಾರ : ಆನೆ ಮಹದೇವು ಎಂಬುವರ ಕಬ್ಬಿನ ಜಮೀನಿನಲ್ಲಿ ಬೀಡು ಬಿಟ್ಟ ಹಿನ್ನೆಲೆಯಲ್ಲಿ ಆನಗಟ್ಟಿ, ನೂರಲಕುಪ್ಪೆ, ಯಲಮತ್ತೂರು ಗ್ರಾಮದ ರೈತರಿಗೆ ಅರಣ್ಯ ಇಲಾಖೆಯ ಸಿಬ್ಬಂದಿಗಳು ಮಾಹಿತಿ ನೀಡಿ ಜಮೀನಿಗೆ ತೆರಳದಂತೆ ಸೂಚಿಸಿದ್ದರು.

ಡ್ರೋನ್ ಸಹಾಯ : ಆನೆ ಸಂಜೆಯಾದರೂ ಬಾರದ ಹಿನ್ನೆಲೆಯಲ್ಲಿ ಮೈಸೂರಿನಿಂದ ಡ್ರೋನ್ ಕ್ಯಾಮೆರಾವನ್ನು ಕರೆಸಲಾಯಿತು. ಡ್ರೋನ್ ಮೂಲಕ ಆನೆಯ ಚಲನವಲನವನ್ನು ಕಂಡುಹಿಡಿಯಲು ಪ್ರಯತ್ನಿಸಲಾಯಿತು. ಸಂಜೆ ಆರು ಗಂಟೆಯಾಗುತ್ತಿದ್ದಂತೆ ಆನೆ ಓಡಿಸಲು ಅರಣ್ಯ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದರು, ಈ ವೇಳೆ ಪಟಾಕಿ ಸಿಡಿಸಲಾಯಿತು. ಜಾತ್ರೆಯ ಪೀಪಿಗಳನ್ನು ಊದುತ್ತಾ ಶಬ್ದ ಮಾಡಲಾಯಿತು. ಅಲ್ಲದೇ ಎಲಿಫೆಂಟ್ ಟಾಸ್ಕ್‌ಫೋರ್ಸ್ ವಾಹನದ ಮೂಲಕ ಶಬ್ದವನ್ನು ಮಾಡಿದರೂ ಸಹ ಆನೆ ಕಬ್ಬಿನ ಗದ್ದೆಯನ್ನು ಹೊರ ಬಾರದೇ ಜಮೀನಿನಲ್ಲೇ ಉಳಿದಿದೆ.

ಕಾರ್ಯಾಚರಣೆಯಲ್ಲಿ ಪ್ರಾದೇಶಿಕ ಅರಣ್ಯದ ಆರ್.ಎಫ್.ಓ. ಪೂಜಾ, ಡಿ.ಆರ್.ಎಫ್.ಓ. ಚಂದನ್, ಅರಣ್ಯ ಸಿಬ್ಬಂದಿಗಳಾದ ಲಾಲಪ್ಪ, ಪೊಲೀಸ್ ಇಲಾಖೆಯ ಇನ್ಸ್‌ಪೆಕ್ಟರ್ ಶಬ್ಬೀರ್ ಹುಸೇನ್, ಸಬ್ ಇನ್ಸ್‌ಪೆಕ್ಟರ್ ರವಿಶಂಕರ್, ಎ.ಎಸ್.ಐ.ಗಳಾದ ಆರ್.ಕುಮಾರ್, ನಿಂಗಯ್ಯ, ಮಹದೇವು, ಸಿಬ್ಬಂದಿಗಳಾದ ಕೃಷ್ಣಕುಮಾರ್, ನಾಗೇಗೌಡ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಹನಿಮೂನ್ ಬ್ಯಾಂಕಾಕ್ (ಕ) 2 ಪ್ರದರ್ಶನಗಳು	ದಂದ್ವ (ಕ) 2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತತ್ಸಮ ತದ್ಭವ(ಕ) 2 ಪ್ರದರ್ಶನಗಳು	ಎಕ್ಸ್‌ಪೆಂಡಬ್(ಇ) 2 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಜವಾನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಟೋಬಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಪ್ತಸಾಗರದಾಚೆ ಎಲ್ಲೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾರ್ಕ್ ಆಂಟೋನಿ (ತ)	4 ಪ್ರದರ್ಶನಗಳು
ಸಂಗಂ	
ಜವಾನ್ (ಹಿ)	4 ಪ್ರದರ್ಶನಗಳು
ಲಿಡೋ	
ಒಲವೇ ಮಂದಾರ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜೈಲರ್ (ತ)	4 ಪ್ರದರ್ಶನಗಳು
ಪ್ರಭಾ	
13 ಪಾರ್ಟ್–1(ಕ) 2 ಪ್ರದರ್ಶನಗಳು	ಪರಿಶುದ್ಧಂ(ಕ) 2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ದಿಗ್ವಿಜಯ (ಕ): ಬೆ.10.40ಕ್ಕೆ, ಸಪ್ತಸಾಗರದಾಚೆ ಎಲ್ಲೋ (ಕ): ಮ.1.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಜವಾನ್ (ಹಿಂ): ಸಂ.4ಕ್ಕೆ
ಸ್ಕ್ರೀನ್ 2	ತತ್ಸಮ ತದ್ಭವ (ಕ): ಬೆ.11.30ಕ್ಕೆ, ಒಲವೇ ಮಂದಾರ 2 (ಕ): ಮ.2ಕ್ಕೆ, ಡೆಮಾನ್ (ತ): ಸಂ.4.30ಕ್ಕೆ, ಸುಖೀ (ಹಿಂ): ರಾ.7ಕ್ಕೆ, ರಾ.9.50ಕ್ಕೆ
ಸ್ಕ್ರೀನ್ 3	ಎಕ್ಸ್ಪೆಂಡಬಲ್ಸ್ (ಇಂ): ಬೆ.11.30ಕ್ಕೆ, ರಾ.9.40ಕ್ಕೆ, ದಿ ನನ್ 2 (ಇಂ): ಮ.1.45ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಸಂ.4.30ಕ್ಕೆ, ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.9.50ಕ್ಕೆ, ಮ.1ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.4.15ಕ್ಕೆ

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಜವಾನ್ (ಹಿಂ): ಬೆ.10.40ಕ್ಕೆ, ಸಂ.4.35ಕ್ಕೆ, ರಾ.10.30ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಮ.2.10ಕ್ಕೆ, ರಾ.8.05ಕ್ಕೆ
ಸ್ಕ್ರೀನ್ 2	ಸಪ್ತ ಸಾಗರದಾಚೆ ಎಲ್ಲೋ (ಕ): ಬೆ.10.50ಕ್ಕೆ, ಜವಾನ್ (ಹಿಂ): ಮ.1.50ಕ್ಕೆ, ಸಂ.5.25ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಜವಾನ್ (ಹಿಂ): ಬೆ.9.10ಕ್ಕೆ, ಮ.12.45ಕ್ಕೆ, ದಿ ಎಕ್ಸ್ಪೆಂಡಬಲ್ಸ್ (ಇಂ): ಸಂ.4.20ಕ್ಕೆ, ರಾ.9.50ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10ಕ್ಕೆ, ದಿ ಗ್ರೇಟ್ ಇಂಡಿಯನ್ ಫ್ಯಾಮಿಲಿ (ಹಿಂ): ಮ.1.50ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ಮಾರ್ಕ್ ಆಂಟೋನಿ (ತ): ಸಂ.4.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂಧ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, **ಜೈಲರ್ (ಕ):** ಬೆ.8.25ಕ್ಕೆ, ಮ.3.10ಕ್ಕೆ, **ಓಎಂಜಿ 2 (ಹಿಂ):** ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, **ಗದರ್ 2 (ಹಿಂ):** ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, **ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ):** ರಾ.9.45ಕ್ಕೆ, **ಆಚಾರ್ & ಕೋ (ಕ):** ಮ.3.55ಕ್ಕೆ, **ಕೌಸಲ್ಯ ಸುಪ್ರಜಾ ರಾಮ (ಕ):** ಮ.3.25ಕ್ಕೆ, ರಾ.10.30ಕ್ಕೆ, **ನಮೋ ಭೂತಾತ್ಮ (ಕ):** ಬೆ.11.55ಕ್ಕೆ, **ರಾಖಿ ಔರ್ ರಾಣಿ (ಹಿಂ):** ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, **ಓಪನ್‌ಹೈಮರ್ (ಇಂ):** ಸಂ.6.35ಕ್ಕೆ, **ಭೋಳಾ ಶಂಕರ್ (ತೆ):** ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, **ಮೆಗ್ 2 (ಇಂ):** ಮ.12.50ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗುಣಮಟ್ಟದ ಹಾಲು ಹಾಕುವುದರಿಂದ ಸಂಘದ ಸದಸ್ಯರಿಗೆ ಬೋನಸ್



ಹುಲ್ಲಹಳ್ಳಿ, ಸೆ.23– ಹಾಲು ಉತ್ಪಾದಕರು ಉತ್ತಮ ಗುಣಮಟ್ಟದ ಹಾಲನ್ನು ಹಾಕುವುದರಿಂದ ಸಹಕಾರ ಸಂಘದ ಸದಸ್ಯರಿಗೆ ಹೆಚ್ಚಿನ ಬೋನಸ್ ಸಿಗುತ್ತದೆ ಎಂದು ಸಂಘದ ಪ್ರಭಾರ ಅಧ್ಯಕ್ಷ ನಂಜುಂಡಸ್ವಾಮಿ ತಿಳಿಸಿದರು.

ಹುಲ್ಲಹಳ್ಳಿಯ ಹಾಲು ಉತ್ಪಾದಕರ ಸಹಕಾರ ಸಂಘದ ಸಭೆಯಲ್ಲಿ 2022–2023ನೇ ಸಾಲಿನ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಸಂಘದಲ್ಲಿ 3 ಕೋಟಿ 18 ಲಕ್ಷಕ್ಕಿಂತ ಹೆಚ್ಚಿನ ವ್ಯವಹಾರ ನಡೆಸಿ ಹೆಚ್ಚಿನ ಲಾಭಗಳಿಸಿದ್ದು ಹಾಲು ಉತ್ಪಾದಕರಿಗೆ ಈ ಲಾಭದಲ್ಲಿ ಬೋನಸ್ ನೀಡಲಾಗಿದೆ ಎಂದರು.

ಸಂಘದಲ್ಲಿ ಹೆಚ್ಚಿನ ಹಾಲು ಹಾಕಿದ ರೈತರಿಗೆ ನಗದು ರೂಪದಲ್ಲಿ ಹಣವನ್ನು ನೀಡಿ ಗೌರವಿಸಲಾಯಿತು ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಸಂಘದ ಸದಸ್ಯರ ಮಕ್ಕಳನ್ನು ಗೌರವಿಸಲಾಯಿತು.

ಸಭೆಯಲ್ಲಿ ನಿರ್ದೇಶಕರಾದ ರವಿಚಂದ್ರ ಶಂಕರ, ರೇವಣ್ಣ ಪ್ರಭು, ಶ್ರೀಮತಿ ಶಾಂತಮ್ಮ ಶ್ರೀಕಂಠನಾಯಕ, ಶ್ರೀಮತಿ ಸುಕನ್ಯ, ಶ್ರೀಮತಿ ಭೋಗನಂಜಮ್ಮ, ಹೆಚ್ಚ. ಆರ್. ಮಹದೇವಸ್ವಾಮಿ, ಮಹದೇವಸ್ವಾಮಿ ಹಾಗೂ ಕಾರ್ಯನಿರ್ವಹಣಾಧಿಕಾರಿ ಬಿ. ಪ್ರಕಾಶ್, ಹಾಲು ಪರೀಕ್ಷಕ ಕುಮಾರ್ ಮತ್ತು ಸಿಬ್ಬಂದಿ ವರ್ಗದವರು.


ಇಂದು ನಂ.ಗೂಡು ಸುತ್ತ–ಮುತ್ತ ವಿದ್ಯುತ್ ವ್ಯತ್ಯಯ

ನಂಜನಗೂಡು, ಸೆ.23– ನಂಜನಗೂಡು ವಿದ್ಯುತ್ ವಿತರಣಾ ಕೇಂದ್ರದಲ್ಲಿ 2ನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವ ಹಿನ್ನೆಲೆ ಭಾನುವಾರ ಬೆಳಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ನಂಜನಗೂಡು ಪಟ್ಟಣ, ಕಲ್ಲಳ್ಳಿ ಕೈಗಾರಿಕಾ ಪ್ರದೇಶ, ನೆಸ್ಲೆ ಎಟಿಅಂಡ್‌ಎಸ್, ಮ್ಯಾಕ್‌ಸ್ಟಾರ್ಮ್, ದೇವೀರಮ್ಮನಹಳ್ಳಿ, ದೇಬೂರು, ದೇವರಸನಹಳ್ಳಿ, ಮರಳೂರು ಗ್ರಾಮಗಳು ಮತ್ತು ಗ್ರಾಪಂ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜು ಇರುವುದಿಲ್ಲ.

ಸಿದ್ದಲಿಂಗಮ್ಮ ನಿಧನ



ಹುಣಸೂರು, ಸೆ.23– ಬಿಳಿಕೆರೆ ಹೋಬಳಿಯ ಹಳ್ಳಿಕೆರೆ ಗ್ರಾಮದ ಸಿದ್ದಲಿಂಗಮ್ಮ (96) ವಯೋಸಹಜದಿಂದ ಶನಿವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು, ನಾಲ್ವರು ಪುತ್ರರನ್ನು ಅಗಲಿದ್ದು, ಅಂತ್ಯಕ್ರಿಯೆಯು ಶನಿವಾರ ಸಂಜೆ ಹಳ್ಳಿಕೆರೆ ಗ್ರಾಮದಲ್ಲಿ ನಡೆಯಿತು.


ಶ್ರೀಮತಿ ಲಲಿತಮ್ಮ ವಿಷಕಂಠೇಗೌಡರು
ಟಿ.ಎ.ಪಿ.ಸಿ.ಎಮ್.ಎಸ್. ಅಧ್ಯಕ್ಷರು
ಕೆ.ಚಂದ್ರಶೇಖರ್
ಟಿ.ಎ.ಪಿ.ಸಿ.ಎಮ್.ಎಸ್. ನಿರ್ದೇಶಕರು
ಮಾಜಿ ಗ್ರಾ.ಪ ಸದಸ್ಯರು
ಪ್ರಸನ್ನ
ಡಾಬ ಮಾಲೀಕರು
VISMAYA ADVERTISERS
ಟೆಂಟ್ ರವಿ
ಮಹದೇಶ್ವರ ಚಿತ್ರಮಂದಿರ ಮಾಲೀಕರು
ಯುವ ಮುಖಂಡರಾದ
ಶ್ರೀ ಚೇತನ್ ವಿಷಕಂಠೇಗೌಡ
ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಸೋಸೈಟಿ ಆನಂದ್
ಮಾಜಿ ಗ್ರಾ.ಪ ಸದಸ್ಯರು
ಮಿಥುನ್
ಯುವ ಮುಖಂಡರು
ನಿಶಾಂತ್ ದಾಸ್
ಯುವ ಮುಖಂಡರು
ಉತ್ತಮ್
ಉದ್ಯಮಿಗಳು
ವಿವೇಕ್
ಯುವ ಮುಖಂಡರು
ದೊಡ್ಡತಮ್ಮಯ್ಯ ರಂಗಮಂಟಪದಲ್ಲಿ, ಮೊದಲನೇ ಬಸ್‌ಸ್ಟ್ಯಾಂಡ್
ಕುಂಬಾರಕೊಪ್ಪಲು ಸಂಜೆ 6 ಗಂಟೆಗೆ ಕಾರ್ಯಕ್ರಮ ಆಯೋಜಿಸಲಾಗಿದೆ


ಹುಟ್ಟು ಹಬ್ಬದ ಶುಭಾಶಯಗಳು
ಲಲಿತಮ್ಮ ವಿಷಕಂಠೆಗೌಡರು
ಕೆ.ಹರೀಶ್‌ಗೌಡರು
ಜನಪ್ರಿಯಶಾಸಕರು
ಕೆ.ವಿ.ಚೇತನ್ ವಿಷಕಂಠೆಗೌಡ
ಪ್ರಧಾನ ಕಾರ್ಯದರ್ಶಿ ಮೈಸೂರು ನಗರ ಕಾಂಗ್ರೇಸ್
ಹಾಗೂ ಅಧ್ಯಕ್ಷರು.ನವಚೇತನ ಜನಸೇವ ಟ್ರಸ್ಟ್
ಶುಭ ಕೋರುವವರು; ಕಾವೇರಿ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ.ಕುಂಬಾರಕೊಪ್ಪಲು.ಮೈಸೂರು.16